UNIVERSAL
LIBRARY
OU_200478
UNIVERSAL
LIBRARY

OSMANIA UNIVERSITY LIBRARY

Call No. K 93 Accession No K/ 
Author 44 I

Title

This book should be returned on or before the date last marked below

# ಇಂದ್ರವಜ್ರ

ಮುಂತಾದ ಬಾಲಕರ ಕಥೆಗಳು


"ಇಂದ್ರವಜ್ರ" ೧

"ವಿಕ್ರಮಪೀಠ" ೯

"ನಸೇಮಿರಾ" ೫೯





ಗ್ರಂಥಸಂಖ್ಯೆ ೪.

ಬೆಂಗಳೂರು:

'ಸುಮತಿ ಗ್ರಂಥಮಾಲಾ' ಆಫೀಸ್,

೧೯೧೭.

# ಬಿನ್ನಹ

ಈ ಸುಮತಿ ಗ್ರಂಥಮಾಲೆಯ ಮೂರನೆಯ ಪುಷ್ಪದಂತೆ, ಈ ಪುಸ್ತಕವೂ ಮುಖ್ಯವಾಗಿ ಬಾಲಕರನ್ನು ಸಂತೋಷಗೊಳಿಸತಕ್ಕುದು. ಕಲ್ಪಿತಕಥೆಗಳಿಗೆ ನಮ್ಮ ಇಂಡಿಯಾ ದೇಶವು ತೌರುಮನೆಯೆಂದು ಹೇಳಬಹುದಾದರೂ, ಈ ಬಗೆಯ ಕಥೆಗಳು ಅನ್ಯದೇಶಗಳಲ್ಲಿಯೂ ವಿಶೇಷವಾಗಿವೆ ಯೆಂದು ಹಿಂದಿನ ಹೊತ್ತಿಗೆ—"ಬೆಕ್ಕೋಜಿ"—ಯಿಂದಲೇ ವ್ಯಕ್ತವಾಗುತ್ತದೆ. ಕಟ್ಟು ಕಥೆಗಳು ಮಕ್ಕಳ ಮನಸ್ಸಿಗೆ ಉಲ್ಲಾಸವನ್ನೂ ಉತ್ಸಾಹವನ್ನೂ ಉಂಟುಮಾಡಿ, ಅವರ ಊಹಾಶಕ್ತಿಯನ್ನು ಹೆಚ್ಚಿಸಿ, ಅವರಲ್ಲಿ ಒಳ್ಳೆಯ ಭಾವನೆಗಳನ್ನು ನೆಲೆಗೊಳಿಸುತ್ತವೆ. ಆದಕಾರಣ ಇಂತಹಪುಸ್ತಕಗಳು ಮಕ್ಕಳುಳ್ಳವರ ಆದರಣೆಗೆ ಪಾತ್ರವಾದುವೆಂದು ನಂಬಿಕೆ.

ಈ ಪುಸ್ತಕದ ಶೈಲಿಯು "ಬೆಕ್ಕೋಜಿ" ಯ ಶೈಲಿಗಿಂತಲೂ ಸ್ವಲ್ಪ ಪ್ರೌಢವಾಗಿ ಕಾಣಬಹುದು. ಆದರೆ ಈ ಮೂಲಕ ಬಾಲವಾಚಕರ ಭಾಷಾಜ್ಞಾನವೂ ಹೆಚ್ಚಬಹುದೆಂದು ಲೇಖಕನ ಉದ್ದೇಶ್ಯ.

ಕಥೆಗಳಿಗೆ ಅಲ್ಲಲ್ಲಿ ಚರಿತ್ರೆಯ ಸಂಬಂಧವಿರುವುದಾದರೂ, ಅವುಗಳೆಲ್ಲವೂ ಕೇವಲ ಇತಿಹಾಸವೇ ಎಂದು ಹೇಳಲಾಗುವುದಿಲ್ಲ.

ಅಲ್ಲಲ್ಲಿ ಚಿತ್ರಗಳನ್ನು ಇನ್ನೂ ಹೆಚ್ಚಾಗಿ ಸೇರಿಸಬಹುದಾಗಿತ್ತು; ಆದರೆ ಗ್ರಂಥವು ವಿಸ್ತಾರವಾಗಿ ಬೆಲೆಯು ಹೆಚ್ಚುವುದೆಂಬ ಭೀತಿಯಿಂದ ಹಾಗೆ ಮಾಡಲು ಆಗಲಿಲ್ಲ.

ಕನ್ನಡನಾಡಿನ ಮಹಾಜನರು ಈ ಪುಸ್ತಕಕ್ಕೆ ಆಶ್ರಯ ಕೊಟ್ಟರೆ, ಈಗ ಇರಬಹುದಾದ ಎಲ್ಲಾ ತಪ್ಪುಗಳನ್ನೂ ದ್ವಿತೀಯಮುದ್ರಣದಲ್ಲಿ ತಿದ್ದಿ, ಅದನ್ನು ಎಲ್ಲಾವಿಧಗಳಲ್ಲಿಯೂ ಉತ್ತಮಗೊಳಿಸಬಹುದು.

ಜನವರಿ, ೧೯೧೩.

# ಇಂದ್ರವಜ್ರ.

ನಿಮ್ಮ ಭರತಖಂಡದ ಉತ್ತರದಿಕ್ಕಿನಲ್ಲಿ ಹಿಮಾಲಯವೆಂಬ ಬಲು ಎತ್ತರವಾದ ಬೆಟ್ಟದಸಾಲು ಇರುವುದಲ್ಲವೆ ? ಆ ಬೆಟ್ಟಗಳ ನಡುವೆ ಈಗ ದೇವದ್ವಾರವೆಂಬ ಹಳ್ಳಿಯೊಂದಿರುವುದು. ಅದಕ್ಕೆ ಕೊಂಚ ದೂರದಲ್ಲಿ ರಾಮಗಂಗಾನದಿಯು ಹರಿಯುತ್ತಿರುವುದು. ಆ ಹಳ್ಳಿಯಲ್ಲಿ ಎಷ್ಟೋ ವರ್ಷಗಳ ಹಿಂದೆ ಒಬ್ಬ ಬಡಮುದುಕಿಯೂ ಅವಳ ಎಳೆಯಮಗನೂ ವಾಸಮಾಡುತ್ತಿದ್ದರು. ಅವರಿಗ ಕೀಳುತರದ ಭೂಮಿ ಸ್ವಲ್ಪವಿತ್ತು. ಅದನ್ನು ಅವರು ಬೇಸಾಯಮಾಡಿ ಜೀವಿಸುತ್ತಿದ್ದರು. ಆದರೂ ಅವರಿಗೆ ಕಷ್ಟ ಹೆಚ್ಚು, ಫಲಕಡಮೆ; ಏಕಂದರೆ ಅವರಿಗೆ ವ್ಯವಸಾಯಕ್ಕೆ ಬೇಕಾದ ಜನಸಹಾಯವಾಗಲಿ ಇತರ ಅನುಕೂಲಗಳಾಗಲಿ ಇರಲಿಲ್ಲ. ಆದರೂ ಆ ಬಡಮುದುಕಿಗೆ ಮಾನದ ಮೇಲೆ ತುಂಬಾ ದೃಷ್ಟಿ; ಯಾವ ಉಪಕಾರವನ್ನೂ ಕೇಳಳು, ಯಾರ ಸಹಾಯವನ್ನೂ ಬಯಸಳು. ಅವಳ ಮಗನು ಅರೆಹೊಟ್ಟೆಗೆತಿಂದು, ಅರೆಮೈಗೆ ಹೊದ್ದು, ಬಡತನದಲ್ಲಿಯೇ ಬೆಳೆದನು.

ಒಂದು ಸಲ ಆಪ್ರಾಂತ ತಕ್ಕಷ್ಟು ಮಳೆ ಬೀಳದೆ ಕ್ಷಾಮ ಬಂದಿತು. ನೆಲದಲ್ಲಿ ಬಿತ್ತಿದ್ದ ಧಾನ್ಯಗಳನ್ನು

ನೆಲವೇ ತಿಂದು ಬಿಟ್ಟಿತು,—ಅವು ಬೆಳೆಯಲೇ ಇಲ್ಲ. ಮುದುಕಿಯು ಹಿಂದಿನ ವರ್ಷ ಸೇರಿಸಿಟ್ಟಿದ್ದ ಕಾಳು ಕಡ್ಡಿಯೆಲ್ಲವೂ ಚಳಿಗಾಲದ ವೇಳೆಗೇ ಮುಗಿದು ಹೋಯಿತು. ಇನ್ನು ಅವಳೂ ಅವಳ ಮಗನೂ ತಿನ್ನುವುದೇನು ? ಸೊಪ್ಪುಸೊದೆ ಕೂಡ ದೊರೆಯದು. ಮಾಡುವುದೇನು ?—'ಉಪವಾಸವೊಂದೇ. ಮುದುಕಿಯು ಅದನ್ನೇ ಮಾಡಲು ಪ್ರಾರಂಭಿಸಿ, ಮಗನಿಗೆ ಮಾತ್ರ ಏನೇನೋ ಸಾಹಸದಿಂದ ಸ್ವಲ್ಪಗಂಜಿಮಾಡಿ ಹಾಕುತ್ತಿದ್ದಳು. ಎಷ್ಟುದಿನ ತಾನೇ ಉಪವಾಸ ಮಾಡಲಾಗುವುದು ? ಅವಳಿಗೂ ಕಡೆಗಾಲವು ಸಮೀಪಿಸಿತು. ಅದನ್ನವಳು ತಿಳಿದುಕೊಂಡು, ಮಗನಾದ ಪೃಥ್ವೀಪಾಲನನ್ನು ಬಳಿಗೆ ಕರೆದು, ಕುಳ್ಳಿರಿಸಿ, ಮುದ್ದಿಟ್ಟು, ಮೈದಡವಿ,ಹೀಗೆಂದಳು:—

"ಕಂದ, ನಾನು ಹೇಳುವುದ ಕೇಳು. ಯಮಭಟರು ಬಂದು ನನ್ನನ್ನು ಕರೆಯುತ್ತಿರುವರು. ಅವರು ನನ್ನನ್ನು ಎಳೆದು ಕೊಂಡು ಹೋಗುವಷ್ಟರೊಳಗಾಗಿ ಒಂದು ವಿಷಯವನ್ನು ಹೇಳುವೆನು. ಅದನ್ನು ಈ ಹನ್ನೆರಡು ವರ್ಷಗಳಿಂದ ನಿನಗೆ ಹೇಳದೆ ಗುಟ್ಟಾಗಿಟ್ಟಿದ್ದೆನು. ಈಗ ಬಿಚ್ಚಿ ಹೇಳಬೇಕಾದಕಾಲ ಬಂದಿದೆ. ಕೇಳು....

"ರಾಮಗಂಗೆಯ ಆಚೆಯದಡದಲ್ಲಿ ಪೂರ್ವದಲ್ಲಿ ಒಬ್ಬ ಮಹಾರಾಜನು ರಾಜ್ಯವಾಳುತ್ತಿದ್ದನು. ಆತನು ಚಂದ್ರವಂಶದವನು. ಆತನು ದೇವರಕೃಪೆಗೂ ಪ್ರಜೆಗಳ ವಿಶ್ವಾಸಕ್ಕೂ ಪಾತ್ರನಾಗಿದ್ದನು. ಆತನು ಕಟ್ಟಿಸಿದ

ಅನೇಕ ದೇವಸ್ಥಾನಗಳೂ ಧರ್ಮಸತ್ರಗಳೂ ಆತನ ಔದಾರ್ಯವನ್ನು ಹೊಗಳುತ್ತಿವೆ. ಕಾಲಕ್ರಮದಲ್ಲಿ ಆ ಮಹಾರಾಯನು ಈ ಲೋಕವನ್ನು ಬಿಟ್ಟನು. ಆಗ ಆತನ ಧರ್ಮಪತ್ನಿಯು ಗರ್ಭವನ್ನು ಧರಿಸಿದ್ದಳು. ಪುರಾತನ ಸಂಪ್ರದಾಯದಂತೆ, ಆತನ ಸಿಂಹಾಸನಕ್ಕೆ ಆತನ ಮಗನೇ ಬಾಧ್ಯನಾಗಿದ್ದ ಕಾರಣ, ಜನರು ಆತನ ಪಟ್ಟದರಸಿಯ ಬಸಿರಲ್ಲಿದ್ದ ಮಗುವನ್ನು ರಾಜನೆಂದೆಣಿಸಿ, ಆಕೆಯು ಹೆತ್ತಮೇಲೆ ಅದನ್ನು ಗಾದಿಯ ಮೇಲೆ ಕೂಡಿಸಬೇಕೆಂದು ನಿಶ್ಚಯಿಸಿದರು.

" ಆದರೆ ಆರಾಜನಿಗೆ ಬಲುದುಷ್ಟನಾದ ಒಬ್ಬ ತಮ್ಮನಿದ್ದನು. ಅವನು ರಾಜ್ಯವನ್ನಪಹರಿಸಬೇಕೆಂದು ಚಿಂತಿಸಿ, ಕೆಲವು ಕೆಟ್ಟ ಜನರ ಸಹಾಯದಿಂದ ತನ್ನ ಅತ್ತಿಗೆಯನ್ನು ಬಲುವಿಧವಾಗಿ ಕಾಡಿಸಿ, ಕಾಡಿಗೆ ಅಟ್ಟಿದನು

"ಅಯ್ಯೋ ಪಾಪ! ಆಕೆಯು ಮಹಾರಾಣಿ; ಅದರಲ್ಲಿಯೂ ಬಸುರಿ; ಎಂದೂ ನಡೆದವಳಲ್ಲ; ಕಷ್ಟಪಟ್ಟವಳಲ್ಲ. ಅಂತಹವಳಿಗೆ ಈಗ ಕಲ್ಲು ಮುಳ್ಳುಗಳಮೇಲೆ ನಡೆದು, ಎಲೆ ಕಾಯಿಗಳನ್ನು ತಿನ್ನುವಗತಿ ಬಂದಿತು....

"ಹೀಗಿರಲಾಗಿ, ಒಂದಾನೊಂದು ದಿನ ಅವಳೊಂದು ಕಡೆ ಜ್ಞಾನ ವಿಲ್ಲದೆ ಬಿದ್ದಿದ್ದಳು; ಅವಳಪಕ್ಕದಲ್ಲಿ ಆಗ ತಾನೆ ಹುಟ್ಟಿದ ಕೂಸೊಂದು ಬಿದ್ದಿತ್ತು. ಅದನ್ನಾರೋ ಆದಾರಿಯಲ್ಲಿ ಹೋಗುತ್ತಿದ್ದವರು ಕಂಡು, ಅವರನ್ನು ಪಕ್ಕದಲ್ಲಿದ್ದ ಗ್ರಾಮಕ್ಕೆ ಕರೆದುಕೊಂಡುಹೋಗಿ

ಘೋಷಿಸಿದರು. ಆ ಮಾರಿಯ ಹೆಂಡತಿಯು ಅನಂತರ ಆ ಊರಿನಲ್ಲಿಯೇ ಇದ್ದುಕೊಂಡು, ಅಲ್ಲಿ ಒಂದು ಸಣ್ಣ ತೋಟವನ್ನು ಹಾಕಿಕೊಂಡು, ಬಹಳ ದುಃಖದಿಂದಲೂ ಕಷ್ಟದಿಂದಲೂ ಬಾಳುತ್ತಿದ್ದಳು. ಅವಳಿಗೂ ಕಡೆಗಾಲಬಂದಿತು ? ಆಗ ಅವಳಿಗೆ ತನ್ನ ಮಗನಿಗೆ ನ್ಯಾಯವಾಗಿ ಬರಬೇಕಾಗಿದ್ದ ಸಿಂಹಾಸನಾಧಿಕಾರವು ದೊರೆಯಲಿಲ್ಲವಲ್ಲಾ ! ಎಂದು ಬಲು ಸಂಕಟವಾಯಿತು....”
ಹೀಗೆಂದು, ಕಥೆಹೇಳುತ್ತಿದ್ದವಳು ಅಳತೊಡಗಿದಳು.

“ಅಮ್ಮಾ, ಆಮೇಲೇನಾಯಿತು ?”

“ಮಗು, ನನಗೆ ತಿಳಿಯದು.”

“ಅಮ್ಮಾ, ಈಗ ಆ ತಾಯಿಮಕ್ಕಳೆಲ್ಲಿರುವರು?” !

“ಮಗು, ಇನ್ನೂ ಹತ್ತಿರಬಾ.—ನಾನೇನ ಹೇಳಲಿ. ಆ ನಿರ್ಭಾಗ್ಯಳೇ ನಾನು, ಆರತ್ನವೇ ನೀನು”

ಹೀಗೆ ಉಸುರಿ ಅವಳು ಪ್ರಾಣ ಬಿಟ್ಟಳು.

ಪ್ರಪಂಚವನ್ನರಿಯದ ಎಳೆಯ ಹುಡುಗನಾದಾ ಪೃಥ್ವೀಪಾಲನು, ಆ ಸ್ಥಳವನ್ನು ಆಗಲೇ ಬಿಟ್ಟು, ಹಸಿವಿನಿಂದಕಂಗೆಟ್ಟು, ಭಯದಿಂದ ಬುದ್ಧಿಗೆಟ್ಟು, ಚಳಿಯಿಂದ ನಡನಡುಗುತ್ತಾ ಎಲ್ಲಿಗೋ ಹೊರಟು ಹೋದನು.

* * *


ಕಗ್ಗತ್ತಲೆ, ಅದರಲ್ಲಿ ವಿಪರೀತ ಮಂಜು, ಅದರ ಮೇಲೆ ಬಿರುಗಾಳಿ. ಇಂತಹ ಹೊತ್ತಿನಲ್ಲಿ ದೇವದ್ವಾರದ ಬಳಿ ಪೃಥ್ವೀಪಾಲನು ನಿಶ್ಶಕ್ತನಾಗಿ ಬಿದ್ದಿದ್ದನು. ಅವ

ನಿಗೆ ಯಾವುದೂ ಗೊತ್ತಾಗಲಿಲ್ಲ. ಅವನ ಮನಸ್ಸು ಮಾತ್ರ ತನ್ನತಾಯಿಯ ದುರವಸ್ಥೆಯನ್ನೂ, ತನ್ನ ಚಿಕ್ಕಪ್ಪನ ಅನ್ಯಾಯವನ್ನೂ ಕುರಿತು ಯೋಚಿಸುತಲಿತ್ತು. ಹಾಗೆ ಯೋಚಿಸುತ್ತಾ, ತನ್ನದುರ್ದೈವವನ್ನು ಬೈಯುತ್ತಾ ಇರಲು, ಅವನ ಕಣ್ಣಿಗೆ ನಿದ್ದೆ ಹತ್ತಿತು. ಸ್ವಲ್ಪ ಹೊತ್ತಿನ ಮೇಲೆ ಅವನು ನಿದ್ದೆಯಲ್ಲಿಯೇ ಇರುವಾಗ, ಯಾರೋ ಬಂದು ಬಲುವಿಶ್ವಾಸದಿಂದ ಅವನನ್ನೆತ್ತಿ ತನ್ನತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಬಲುಸವಿಯಾದ ತಿಂಡಿಯನ್ನವನಿಗೆ ಕೊಟ್ಟರು. ಅದನ್ನವನು ತಿಂದೊಡನೆಯೆ ಅವನ ಹಸಿವು ಬಾಯಾರಿಕೆಗಳೆಲ್ಲವೂ ಮಾಯವಾದುವು. ಹಾಗೆಯೇ ಯಾರೋ ಅವನ ಕೈಮೈಗಳನ್ನೂ ಕಣ್ಣು ತಲೆಗಳನ್ನೂ ಸವರಲು ಅವನು ನಿರಾಯಾಸನಾದನು. ಅವನಿಗೆ ಅದು ಯಾರೆಂಬುದೂ ತಿಳಿಯಲಿಲ್ಲ. ಕಣ್ಣು ರೆಪ್ಪೆಗಳು ಗಟ್ಟಿಯಾಗಿ ಮುಚ್ಚಿಕೊಂಡಿದ್ದ ಕಾರಣ ಅವನು ಕಣ್ದೆರೆಯಲಾಗಲಿಲ್ಲ. ಅದೆಲ್ಲವೂ ಕನಸೆಂದು ಅವನು ತಿಳಿದುಕೊಂಡನು.

ಕೆಲವು ನಿಮಿಷಗಳ ಮೇಲೆ ಅವನು ಮೇಲಕ್ಕೇಳಲು ಯತ್ನಿಸಿದನು. ಆಗ ಅವನ ಕೈಗೆ ಏನೋ ಸಿಕ್ಕಿತು. ಅದನ್ನವನು ಹಾಗೆಯೇ ಕಣ್ಣುಗಳ ಬಳಿಗೆ ತೆಗೆದುಕೊಂಡು ಹೋಗಲು ಅವನಿದಿರಿಗೆ ದೊಡ್ಡ ಬೆಳಕು ಬಂದ ಹಾಗಾಯಿತು. ಅವನು ಕೈಯಲ್ಲಿದ್ದುದನ್ನು ಚೆನ್ನಾಗಿ ಸವರಿನೋಡಿ, ಅದಾವುದೋ ಒಡವೆಯಾಗಿರಬಹುದೆಂದು ಊಹಿಸಿದನು. ಹಾಗೆ ಊಹಿಸಿ, "ನನಗಿದು

ನಿಜವಾಗಿಯೂ ಸಿಕ್ಕಿದರೆ ಇದನ್ನು ಮಾರಿ ನನ್ನ ದಾರಿದ್ರ್ಯವನ್ನು ಮರೆತೇನು !" ಎಂದುಕೊಂಡನು.

ಹಾಗಂದುಕೊಂಡ ಕೂಡಲೇ ಅವನ ಕಣ್ಣುಗಳು ತೆರೆಯಲಾದವು. ನೋಡಲು, ಅಲ್ಲಿ ಯಾರೂ ಇರಲಿಲ್ಲ ಅವನಿಗೆ ಕಷ್ಟಗಳೆಲ್ಲವೂ ತೀರಿ, ಬಲು ಆನಂದವಾಗಿತ್ತು. ಏನಹೇಳುವುದಕ್ಕೂ ಅವನಿಗೆ ಬಾಯೇಬಾರದು. ಇದೆಲ್ಲವೂ ಕನಸಿರಬಹುದೆಂದು ಅವನು ಪುನಃ ಅಂದುಕೊಂಡನು. ಅವನ ಕೈಯಲ್ಲಿ ಮಹಾಕಾಂತಿಯುಕ್ತವಾದ ವಜ್ರದ ಪದಕವೊಂದಿತ್ತು.



ಅದನ್ನವನು ನೋಡಿ ನೋಡಿ ಆಶ್ಚರ್ಯಪಟ್ಟು, ಆನಂದದಲ್ಲಿ ಮೈಮರೆತಿರುವಾಗ ಆಗಸದಲ್ಲಿ ಥಳಥಳನೆ ಮಿಂಚಿತು. ಆಗ ವಜ್ರಾಭರಣವೂ ಮತ್ತೊಂದು ಮಿಂಚಿನಂತೆ ಹೊಳೆಯಿತು. ಆಮೇಲೆ ಅರೆನಿಮಿಷದೊಳಗಾಗಿ ಘುಡಘುಡನೆ ಗುಡುಗಿತು! ಪೃಥ್ವೀಪಾಲನೂ ಅವನ ವಜ್ರದ ಪದಕವೂ ಎಲ್ಲಿ? ಅಯ್ಯೋ ! ಇಬ್ಬರನ್ನೂ ಸಿಡಿಲು ಪಾತಾಳಕ್ಕೆ ತುಳಿದು ಬಿಟ್ಟಿತು!

*         *         *

ಆದಿನ ಬೆಳಗಿನ ಝಾವದಲ್ಲಿ ಆವೂರಿನ ಪುರೋಹಿತನು ಒಂದು ಕನಸು ಕಂಡನು. ಅದರಲ್ಲಿ ಮಹಾತೇಜೋವತಿಯಾದ ಹೆಂಗಸೊಬ್ಬಳು ಕಾಣಿಸಿ, ಪೃಥ್ವೀಪಾಲನ ಪೂರ್ವಕಥೆಯನ್ನು ತಿಳಿಸಿ, ಹೀಗೆ ಹೇಳಿದಳು: "ನಾನು ಸಕಲ ಜೀವಗಳನ್ನೂ ಸಾಕಿ ಸಲಹುವ ಅನ್ನಪೂರ್ಣೆ. ಒಡಹುಟ್ಟುಗನಾದಾ ಪೃಥ್ವೀಪಾಲನ ಕಷ್ಟವನ್ನು ಹೋಗಲಾಡಿಸುವುದಕ್ಕಾಗಿ ನಾನು ಪಕ್ಕದಲ್ಲಿರುವ ಅಡವಿಗೆ ಬಂದು,ಅವನಿಗೆ ಉಪಚರಿಸಿದೆನು. ಆಗ ಇಂದ್ರನು ನನಗೆ ಕಾಣಿಕೆಯಾಗಿ ಕೊಟ್ಟಿದ್ದ ವಜ್ರದ ಸರವನ್ನು ಕೊರಳಿನಲ್ಲಿ ಹಾಕಿಕೊಂಡಿದ್ದೆನು. ಅದರ ಪದಕವು ಪೃಥ್ವೀಪಾಲನ ಕೈಗೆ ಸಿಕ್ಕಲು ಅದನ್ನವನು ಬಲವಾಗಿ ಬಯಸಿದನು. ನಾನು ಅದನ್ನವನಿಗೆ ಕೊಟ್ಟುಬಿಟ್ಟೆನು. ಆದರೆ ತಾನು ನನಗೆ ಕೊಟ್ಟ ಆಭರಣವನ್ನು ನಾನು ಮನುಷ್ಯಮಾತ್ರನಿಗೆ ಕೊಟ್ಟೆನೆಂದು ಇಂದ್ರನು ಕೋಪಗೊಂಡು, ಸಿಡಿಲಿನಿಂದ ಪೃಥ್ವೀಪಾಲನನ್ನೂ ಆ ಆಭರಣವನ್ನೂ ಭೂಮಿಯೊಳಕ್ಕೆ ತಳ್ಳಿಸಿರುವನು ಆ ಬಾಲಕನಿಗೆ ನಾನು ಸದ್ಗತಿಕೊಡುವೆನು. ಅವನ ಮೇಲೆ ಸಿಡಿಲು ಬಿಡಿದ ಸ್ಥಳದಲ್ಲಿ ನೀವು ನನ್ನ ಮೂರ್ತಿಯನ್ನು ಪ್ರತಿಷ್ಠೆಮಾಡಿ ಪೂಜಿಸಿರಿ. ನಾನು ಅಲ್ಲಿ ನಂದಾದೇವಿಯೆಂಬ ಹೆಸರಿನಿಂದ ಪ್ರಸಿದ್ಧಳಾಗಿ ಆ ನಿರಪರಾಧಿ ಪೃಥ್ವೀಪಾಲನಂತೆ ಕಷ್ಟಪಡುವವರ ಅಭೀಷ್ಟಗಳನ್ನು ನೆರವೇರಿಸಿ ಕೊಡುವೆನು."

ಹೀಗೆ ಹೇಳಿ ಅನ್ನಪೂರ್ಣೆಯು ಅಗೋಚರಳಾದಳು.

ಆ ಕಾಲದ ಜನರಿಗೆ ಇಂತಹ ಸ್ವಪ್ನಗಳಲ್ಲಿ ವಿಶೇಷ ಸಂಬುಗೆಯಿತ್ತು. ಅವರ ಸಹಾಯದಿಂದ ದೇವದ್ವಾರದ ಪುರೋಹಿತನು ದೇವತಾಲಯವನ್ನು ಕಟ್ಟಿಸಿ ನಂದಾ ದೇವಿಯನ್ನು ಪ್ರತಿಷ್ಠಿಸಿದನು. ಅವನು ಸಾಯುವಾಗ ಆ ಊರಿನ ಮುಖಂಡನೊಬ್ಬನನ್ನು ಕರೆಸಿ ಅವನೊಡನೆ, ಪೃಥ್ವೀಪಾಲನು ಆವೂರಿನಲ್ಲಿಯೇ ಪುನಃ ಹುಟ್ಟುವನೆಂದೂ, ಅವನು ನಂದಾದೇವಿಯ ಜಾತ್ರೆಯದಿನ ಆಸ್ಥಳ ದಲ್ಲಿ ಅಗೆದರೆ ಆ ವಜ್ರಾಭರಣವು ದೊರಕುವುದೆಂದೂ, ಅವನೇ ರಾಮಗಂಗಾನದಿಯ ಮತ್ತೊಂದುದಡದಲ್ಲಿ ರುವ ರಾಜ್ಯಕ್ಕೆ ಅರಸಾಗುವನೆಂದೂ ಹೇಳಿದನು.

ಅವನ ಮಾತಿನಂತೆಯೇ ಈಗಲೂ ವರ್ಷಕ್ಕೊಂದಾ ವರ್ತಿ ದೇವದ್ವಾರದ ಬಳಿ ನಂದಾದೇವಿಯ ಪರಿಷೆ ಜರ ಗುವದು.

ಆಗ ಸುತ್ತುಮುತ್ತಲ ಹಳ್ಳಿಗಳವರು ಅಲ್ಲಿಗೆ ಗುಂಪು ಗುಂಪಾಗಿ ಬರುವರು ಅವರ ಹುಡುಗರಲ್ಲಿ ಯಾರಾ ದರೊಬ್ಬನು ಪೃಥ್ವೀಪಾಲನಾಗಿರಬಹುದೆಂದು ನಿರೀ ಕ್ಷಿಸಿ, ಅವರು ಆದೇವತಾಲಯದ ಪ್ರದೇಶದಲ್ಲೆಲ್ಲಾ ಅಗೆಯುವರು. ಆದರೆ ಇದುವರೆಗೂ ಆದಿವ್ಯಾಭರ ಣವು ಯಾರಿಗೂ ದೊರೆತಿಲ್ಲ.

ಈ ಕಥೆಯನ್ನು ಮಾತ್ರ ಅಲ್ಲಿನವರು ಭಕ್ತಿಯಿಂದ ಹೇಳುತ್ತಿರುವರು.

# ವಿಕ್ರಮಪೀಠ

ಪ್ರಿಯರಾದ ವಾಚಕರೆ,

ಈಗ ನಾನು ಹೇಳಬೇಕೆಂದಿರುವ ಕಥೆಯನ್ನು ತಿಳಿದುಕೊಳ್ಳಲು ನಿಮಗೆ ಆಶೆಯಿದ್ದರೆ, ನೀವು ನಿಮ್ಮ ಮನಸ್ಸನ್ನು ವಾಹನಮಾಡಿಕೊಂಡ ನನ್ನೊಡನೆ ಈಗ ಉತ್ತರ ದೇಶಕ್ಕೆ ಪ್ರಯಾಣ ಬೆಳೆಸಬೇಕು. ನೀವು ಏರಿರುವ ಕುದುರೆಯು ಗಾಳಿಗಿಂತಲೂ ವೇಗವಾಗಿ ಓಡಬಲ್ಲುದಾದ ಕಾರಣ, ಕೆಲವು ನಿಮಿಷಗಳೊಳಗಾಗಿಯೇ ನಾವು ಕೃಷ್ಣಾ, ಗೋದಾವರಿ ಮುಂತಾದ ನದಿಗಳನ್ನೂ, ಅನೇಕ ಪರ್ವತಗಳನ್ನೂ, ಅನೇಕ ರಾಜ್ಯಗಳನ್ನೂ, ಅನೇಕ ಮಹಾನಗರಗಳನ್ನೂ, ಮಹಾಕ್ಷೇತ್ರಗಳನ್ನೂ ದಾಟಿ, ಪವಿತ್ರಳಾದ ನರ್ಮದೆಯಿಂದ ತೊಳೆಯಲ್ಪಡುತಲಿರುವ ಪುಣ್ಯ ಪ್ರದೇಶವನ್ನು ಸೇರುವೆವು. ಮಧ್ಯಹಿಂದೂಸ್ಥಾನ (ಸೆಂಟ್ರಲ್ ಇಂಡಿಯಾ) ವೆಂದು ಕರೆಯಲ್ಪಡುತಲಿರುವ ಈಸ್ಥಳದಲ್ಲಿ ನಾವು ಸದ್ಯಃ ನಿಲ್ಲೋಣ. ಈ ಪ್ರಾಂತವು ಬಲುಪುರಾತನವಾಗಿ, ಭರತಭೂಮಿಯ ಇತಿಹಾಸದಲ್ಲಿ ಬಲು ಪ್ರಖ್ಯಾತವಾಗಿದೆ. ತತ್ರಾಪಿ ಈಗ ಶ್ರೀಮಂತ ಸಿಂಧಿಯಾ ಮಹಾರಾಜರ ಆಳ್ವಿಕೆಗೆ ಒಳಪಟ್ಟಿರುವ ಗ್ವಾಲಿಯರ್ ಪಟ್ಟಣದ ಸಮೀಪದಲ್ಲಿ ಸಿಪ್ರಾ ನದಿಯ ತೀರದಲ್ಲಿರುವ ಉಜ್ಜಯಿನೀಪಟ್ಟಣದ ಪ್ರದೇ

ಶವು ಅನೇಕ ರಾಜಾಧಿರಾಜರುಗಳ ಸಾಮ್ರಾಜ್ಯವೈಭವಕ್ಕೂ, ಅನೇಕ ಕವಿಪುಂಗರವರ ವರ್ಣನಾ ವಿಶೇಷಕ್ಕೂ ಪಾತ್ರವಾಗಿ, ಹಿಂದೂ ಜನರಿಗೆ ತಮ್ಮ ಹಿಂದಿನ ಉನ್ನತ ಸ್ಥಿತಿಯನ್ನು ಜ್ಞಾಪಕಪಡಿಸುತ್ತಿರುವುದು.

ಹಾ ಉಜ್ಜಯಿನಿ ! ನಿನ್ನ ಹೆಸರನ್ನು ಹೇಳಿದೊಡನೆಯೆ ಎಷ್ಟೊಂದು ಅಂಶಗಳು ಸ್ಮೃತಿಗೆ ಬರುತ್ತಲಿವೆ ! ಪೂರ್ವದಲ್ಲಿ ನಿನ್ನನ್ನು ಅವಂತಿಯೆಂದು ಕರೆಯುತಲಿದ್ದರು ನೀನಾಗ ಭರತವರ್ಷದ ಏಳು ಪುಣ್ಯಪತ್ತನಗಳಲ್ಲಿ ಒಂದಾಗಿದ್ದೆ. ಅಪಾರವಾದ ವಿದ್ಯೆಯೂ ಐಶ್ವರ್ಯವೂ ನಿನ್ನನ್ನೇ ಆಶ್ರಯಿಸಿದ್ದುವು. ಈಚೆಗೆ ಬೌದ್ಧ ಚಕ್ರವರ್ತಿಯಾದ ಅಶೋಕನ ಕಾಲದಲ್ಲಿ ನೀನು ಮತ್ತಷ್ಟು ಪ್ರಬಲಳಾಗಿ, ಆತನ ರಾಜ್ಯದಲ್ಲಿ ಮುಖ್ಯನಗರವಾಗಿದ್ದೆ. ತನ್ನ ಒಂದಾನೊಂದು ವಿಜಯದ ಜ್ಞಾಪಕಾರ್ಥವಾಗಿಯೋ ಆ ರಾಜರ್ಷಿಯು ನಿನ್ನನ್ನು "ಉಜ್ಜಯಿನಿ" ಎಂದು ಕರೆದಿರಬಹುದು.

ಆತನಿಂದೀಚೆಗೆ ನಿನ್ನ ಪ್ರಶಸ್ತಿಯು ಇನ್ನೂ ಹೆಚ್ಚಿತು. ನೀನು ಮಾಲವದೇಶದ ರಾಜಧಾನಿಯಾಗಿ, ಶಾಶ್ವತಕೀರ್ತಿಯಾದ ಭರ್ತೃಹರಿಯ ಮಹಿಮೆಯನ್ನು ಕಣ್ಣಾರ ನೋಡಿದೆ. ಆತನೆಂತಹ ಮಹಾರಾಜ! ಎಂತಹ ಮಹಾಪಂಡಿತ! ಎಂತಹ ಮಹಾಕವಿ! ಎಂತಹ ಮಹಾಯೋಗಿ! ಅಂತಹ ಮತ್ತೊಬ್ಬ ವ್ಯಕ್ತಿಯನ್ನು ವಿಧಿಯು ಇದುವರೆಗೂ ಸೃಷ್ಟಿಸಿಲ್ಲ. ಆತನ ಸುಭಾಷಿತವನ್ನು ಓದದವರೂ ಕೇಳದವರೂ ನಿರ್ಭಾಗ್ಯರೇಸರಿ! ಆಮಾರಾ

ಯನು ಇಹಲೋಕವನ್ನು ತುಚ್ಛೀಕರಿಸಿ, ಪರಮವಿರಕ್ತನಾದಮೇಲೆ, ಆತನ ತಮ್ಮನಾದ ವಿಕ್ರಮಾದಿತ್ಯ ಮಹಾರಾಜನು ನಿನ್ನ ಕೈಹಿಡಿದು, ನಿನ್ನನ್ನು ಇನ್ನೂ ವೃದ್ಧಿಗೊಳಿಸಿದನು. ಈ ಶಕಪುರುಷನನ್ನು ಕುರಿತು ಈಗಲೇ ವಿಸ್ತಾರವಾಗಿ ಪ್ರಸ್ತಾವಿಸುವೆವು ಈತನಕಾಲಾನಂತರ ನಿನ್ನ ಅದೃಷ್ಟವು ಅಧೋಮುಖವಾಯಿತು. ಆದರೂ ಮೊಗಲ ಬಾದಶಹರಿಗೆ ನಿನ್ನಲ್ಲಿ ಅಭಿಮಾನವಿದ್ದಿತು. ಅವರು ಕೆಲವು ಮನೋಹರಗಳಾದ ಕಟ್ಟಡಗಳಿಂದ ನಿನ್ನನ್ನು ಸಿಂಗರಿಸಿದರು. ಅವರಿಂದೀಚೆಗೆ ಜ್ಯೋತಿಶ್ಶಾಸ್ತ್ರ ಪಂಡಿತನಾದ ಜಯಪುರದ ರಾಜಾ ಜಯಸಿಂಹರಾಜನು ನಿನ್ನ ಸನ್ನಿಧಿಯಲ್ಲಿ ನಕ್ಷತ್ರದರ್ಶನಶಾಲೆಯೊಂದನ್ನು ಕಟ್ಟಿಸಿ, ನಿನ್ನ ಪ್ರಶಂಸೆಯನ್ನು ಹೆಚ್ಚಿಸಿದನು. ಇನ್ನೂ ಈಚಿನವರಾದ ಮಹಾರಾಷ್ಟ್ರಪ್ರಭುಗಳೂ ನಿನ್ನನ್ನು ನಿರಾಕರಿಸದೆ ಕೆಲವು ಉತ್ಕೃಷ್ಟಗಳಾದ ದೇವಮಂದಿರಗಳನ್ನೂ ಸ್ನಾನಘಟ್ಟಗಳನ್ನೂ, ಕಟ್ಟಿಸಿ ನಿನ್ನ ರಾಮಣೀಯತೆಯನ್ನು ಹೆಚ್ಚಿಸಿದರು. ಆದರೇನಾಯಿತು? ಜೀವನಿಲ್ಲದ ದೇಹವು ಒಡವೆಗಳಿಂದ ಶೋಭಿಸ ವುದೇನು? ವಿದ್ಯಾಸದ್ಗುಣಗಳು ನಷ್ಟವಾದ ರಾಜ್ಯಕ್ಕೆ ಒಳ್ಳೆಯ ಕಟ್ಟಡಗಳು ಕಳೆಗಟ್ಟುವವೇನು? ನೀನು ಕ್ಷೀಣಗತಿಗೆ ಬಂದಹಾಗೆಯೇ ಹಿಂದೂಗಳ ನಾಗರಿಕತೆಯೂ, ಅವರ ವಿದ್ಯಾವೈದುಷ್ಯಗಳೂ, ಧೈರ್ಯ ಪೌರುಷಗಳೂ ಕ್ಷೀಣಗತಿಗೆ ಬಂದವು. ಈಗ ಅವರು ತಮ್ಮ ಪೂರ್ವಿಕರು ಬಲುದೊಡ್ಡವರೆಂದು ಹೇಳಿಕೊಳ್ಳುತ್ತಾ,—ಬೆಂಗ

೪೨೦ ವಿವಿಧವಸ್ತುಶಾಲೆ ( ತಮಾಷ್ ಬಂಗಲೆ )ಯಲ್ಲಿರುವ ಪುರಾತನ ಪದಾರ್ಥಗಳಂತೆ,— ಲೋಕದವರ ಆಶ್ಚರ್ಯಕ್ಕೂ,ಹಾಸ್ಯಕ್ಕೂ ಕಾರಣರಾಗಿರುವರು. ನೀನೂ ಆಗಾಗ ಪ್ರಾಚೀನಚರಿತ್ರಶೋಧಕರ ಮತ್ತು ವಿನೋದಾರ್ಥವಾಗಿ ದೇಶಸಂಚಾರಮಾಡುವವರ ಗಮನವನ್ನು ಮಾತ್ರ ಆಕರ್ಷಿಸುತ್ತಾ, ಮಿಕ್ಕಪ್ರಪಂಚಕ್ಕೆ ಇಲ್ಲವಾಗಿರುವೆ. ಹಾ ಉಜ್ಜಯಿನಿ!ನಿನ್ನ ಒಡೆಯನಾಗಿದ್ದ ಭರ್ತೃಹರಿಯು ಹೇಳಿದುದು, ನಿನ್ನವಿಷಯದಲ್ಲಿಯೇ ನಿಜವಾಯಿತಲ್ಲವೆ ?

ಸುರಮ್ಯಾ ನಗರೀ ಮಹಾನ್ ಸ ನೃಪತಿಃ ಸಾಮಂತಚಕ್ರಂ ಚ ತ
ತ್ಪಾರ್ಶ್ವೇ ತಸ್ಯ ಚ ಸಾ ವಿದಗ್ಧಪರಿಷತ್ತಾಶ್ಚಂದ್ರಬಿಂಬಾನನಾಃ॥
ಉದ್ವೃತ್ತಸ್ಸಚ ರಾಜಪುತ್ರನಿವಹ ಸ್ತೇವಂದಿನ ಸ್ತಾಃಕಥಾಃ।
ಸರ್ವಂ ಯಸ್ಯ ವಶಾದಗಾತ್ ಸ್ಮೃತಿಪಥಂ ಕಾಲಾಯತಸ್ಮೈನಮಃ॥

"ರಮ್ಯವಾದ ಆಪಟ್ಟಣವೇನು! ಆ ಮಹಾರಾಜನೇನು ! ಆತನ ಸುತ್ತುಮುತ್ತಲಿದ್ದ ಆ ಸಾಮಂತರಾಜಮಂಡಲಿಯೇನು ! ಆ ವಿದ್ವತ್ಸಭೆಯೇನು ! ಆ ಚಂದ್ರಮುಖಿಯರೇನು ! ಧೀರರಾದ ಆ ರಾಜಕುಮಾರರೇನು ! ಆ ಸ್ತುತಿಪಾಠಕರೇನು ! ಆ ಕಥೆಗಳೇನು !— ಇವೆಲ್ಲವೂ ಯಾರವಶದಿಂದ( ಪ್ರಪಂಚದಲ್ಲಿಲ್ಲದೆಹೋಗಿ) ಈಗಜ್ಞಾಪಕದಲ್ಲಿಮಾತ್ರ ನಿಂತಿದೆಯೋ ಅಂತಹ ಕಾಲಪುರುಷನಿಗೆ ನಮಸ್ಕಾರವು." ಈ ಗೋಳುಹಾಗಿರಲಿ !

ವಾಚಕರೆ, ಮನಸ್ಸನ್ನು ಕುದುರೆಯಾಗಿ ಮಾಡಿಕೊಂಡು ನಾವು ಹೇಗೆ ಬಹು ಭೂಭಾಗವನ್ನು ದಾಟ

ದೆವ್ರೋ, ಹಾಗೆಯೇ ಅದೇವಾಹನದಿಂದ ಕಾಲದೂರ ವನ್ನೂ ಅತಿಕ್ರಮಿಸಿ,ಮಹಾರಾಜಾ ವಿಕ್ರಮಾರ್ಕನಪ್ರಭುತ್ವಕಾಲವನ್ನುಸೇರಿ, ಆತನ ಆಸ್ಥಾನನ್ನು ಪ್ರವೇಶಿಸೋಣ ! ಆತನ ಕಾಲವನ್ನು ಕುರಿತು ವಿದ್ವಾಂಸರು ಇನ್ನೂ ಚರ್ಚೆಮಾಡುತಲೇ ಇರುವರು. ಇವರ ವಿವಾದವು ಮುಗಿಯುವ್ವದೋ ಇಲ್ಲವ್ರೋ ಯಾರು ಬಲ್ಲರು? ಕೆಲವು ಮಂದಿ ಪ್ರಾಚೀನ ಚರಿತ್ರಶೋಧಕರು ವಿಕ್ರಮನು ಕ್ರಿ. ಶ. ೬ನೆಯ ಶತಮಾನದಲ್ಲಿದ್ದನೆಂದು ಹೇಳುತ್ತಾರೆ. ಆದರೆ, ಈ ದೇಶದ ಜನರು ಮಾತ್ರ ಆ ಮಹಾರಾಜನ ಹೆಸರನ್ನುಮರೆಯದೆ, ಆತನು ಸ್ಥಾಪಿಸಿದ ಶಕಧಿಂದಲೇ ವರ್ಷಗಳನ್ನು ಈಗಲೂ ಎಣಿಸುತ್ತಿರುವರು. ವಿರೋಧಿಕೃನ್ನಾಮಸಂವತ್ಸರದ ಪಂಚಾಂಗದ ಮುಖಪತ್ರದ ಮೇಲುಗಡೆ "ಶ್ರೀವಿಕ್ರಮಾರ್ಕ ಶಕಗತಾಬ್ದಾಃ ೧೯೬೮" ಎಂದಿರುವುದನ್ನು ಯಾವ ಹಿಂದುವುತಾನೆ ನೋಡಿಲ್ಲ ? ಆದರೆ ಈಗಿನ ಹಿಂದುಗಳಿಗೆ ಸ್ವವಿಷಯಗಳಲ್ಲಿ ಗೌರವ ಕಡಮೆ. ಹೇಗಾದರಾಗಲಿ. ವಿಕ್ರಮಾದಿತ್ಯನೆಂಬ ಒಬ್ಬ ರಾಜನಿದ್ದ ವಿಷಯವು ನಿಸ್ಸಂದೇಹವಾಗಿದೆ ಆತನವಿಷಯವನ್ನೂ ಆತನ ಸಭಾವಿಷಯವನ್ನೂ ಸಾಧ್ಯವಾದ ಮಟ್ಟಿಗೆ ಇಲ್ಲಿ ಮನಸ್ಸಿಗೆ ತಂದುಕೊಳ್ಳೋಣ.

ಆತನ ತಂದೆಯ ಹೆಸರು ಮಹೇಂದ್ರಾದಿತ್ಯನೆಂದೂ ತಾಯಿಯ ಹೆಸರು ಸೌಮ್ಯದರ್ಶನೆಯೆಂದೂ ಕೆಲವರು ಹೇಳಿರುವರು.

ಆತನು ಮಹಾಧೀರನು ಮತ್ತು ದೇಶಾಭಿಮಾನಿ. ತನ್ನ ರಾಜ್ಯಕ್ಕೆ ಆಗಾಗ ಬಂದು ಹಾವಳಿ ಮಾಡುತ್ತಿದ್ದ ಶಕರೆಂಬ ಜನರನ್ನು ಆತನು ಸೋಲಿಸಿ, ದೂರ ಓಡಿಸಿದನು. ಆದಕಾರಣ ಆತನಿಗೆ "ಶಕಾರಿ" ಯೆಂದು ಹೆಸರಾಯಿತು. ಈ ಸಂದರ್ಭದಲ್ಲಿಯೇ ಆತನು ತನ್ನ ಶಕೆಯನ್ನು ಸ್ಥಾಪಿಸಿದನೆಂದು ಕೆಲವರ ನಂಬಿಕೆ. ಇಂತಹ ಶೂರನಾದ ಮಹಾರಾಜನ ಕೈಕೆಳಗೆ ಅನೇಕ ಸಾಮಂತರಾಜರು ಇದ್ದಿರಬೇಕು. ಬಹುಶಃ ಈತನು ಆಗಿನ ಹಿಂದೂರಾಜರಿಗೆಲ್ಲಾ ಮುಖಂಡನಾಗಿದ್ದನೆಂದು ಧಾರಾಳವಾಗಿ ಹೇಳಬಹುದು.

ವಿಕ್ರಮಾರ್ಕನು ವಿದ್ಯಾಭಿಮಾನಿ. ಆತನ ಅಣ್ಣ ಭರ್ತೃಹರಿಯೇ ದೊಡ್ಡ ವೈಯಾಕರಣಿ ಮತ್ತು ಕವಿಯಾಗಿದ್ದನಷ್ಟೆ. ವಿಕ್ರಮನ ಆಸ್ಥಾನದಲ್ಲಿ ಅನೇಕ ಮಂದಿ ಶಾಸ್ತ್ರಜ್ಞರೂ ಕವಿಗಳೂ ಇದ್ದರು. ಅವರಲ್ಲಿ ಪ್ರಸಿದ್ಧರಾರೆಂದರೆ,

> ಧನ್ವಂತರಿ ಕ್ಷಪಣಕಾಮರಸಿಂಹ ಶಂಕು ।
> ವೇತಾಳಭಟ್ಟ ಘಟಕರ್ಪರ ಕಾಳಿದಾಸಾಃ ॥
> ಖ್ಯಾತೋ ವರಾಹಮಿಹಿರೋ ನೃಪತೇಸ್ಸಭಾಯಾಂ ।
> ರತ್ನಾನಿ ವೈ ವರರುಚಿ ರ್ನವ ವಿಕ್ರಮಸ್ಯ ॥

ಧನ್ವಂತರಿ, ಕ್ಷಪಣಕ, ಅಮರಸಿಂಹ, ಶಂಕು, ವೇತಾಳ ಭಟ್ಟ, ಘಟಕರ್ಪರ, ಕಾಳಿದಾಸ, ವರಾಹ ಮಿಹಿರ, ವರರುಚಿ—ಈ ನವರತ್ನಗಳು ವಿಕ್ರಮರಾಜನ ಸಭೆಯಲ್ಲಿ ಮುಖ್ಯವಾಗಿ ಶೋಭಿಸುತ್ತಿದ್ದವು.

ಇವರೊಳಗೆ ಕಾಳಿದಾಸನಹೆಸರನ್ನರಿಯದವರಾರು? ಶಾಕುಂತಲ, ವಿಕ್ರಮೋರ್ವಶೀಯ, ಮಾಲವಿಕಾಗ್ನಿಮಿತ್ರಗಳೆಂಬ ನಾಟಕರತ್ನಗಳನ್ನೂ, ರಘುವಂಶ, ಕುಮಾರಸಂಭವ, ಮೇಘಸಂದೇಶಗಳೆಂಬ ಮಹಾಕಾವ್ಯಗಳನ್ನೂ ವಿರಚಿಸಿ, ಜಗದ್ವಿಖ್ಯಾತನಾದೀ ಕವಿಗೆ ಸಮನೆಲ್ಲಿರುವನು? ಆತನ ಕೀರ್ತಿಯು ಚಂದ್ರಸೂರ್ಯರಂತೆ ಚಿರಸ್ಥಾಯಿಯಾಗಿರುವುದು.

ವರಾಹ ಮಿಹಿರಾಚಾರ್ಯರು ಜ್ಯೋತಿಷ್ಕರು. ಇವರು ಕ್ರಿ. ಶ. ೫೦೫ ರಿಂದ ೫೮೭ ರವರೆಗೆ ಇದ್ದರೆಂದು ಒಂದು ಮತ. ಇವರು ಉಜ್ಜಯಿನಿಯ ಬಳಿ ಒಂದು ಖಗೋಳದರ್ಶನ ಶಾಲೆಯನ್ನು ಕಲ್ಪಿಸಿ, ಅದರಿಂದ ಗ್ರಹಗಳ ಸ್ಥಿತಿ ಚಲನೆಗಳನ್ನು ಗೊತ್ತು ಮಾಡುತಲಿದ್ದರು. ಇವರೇ ಬಹುಶಃ ಉಜ್ಜಯಿನಿಯ ಬಳಿ ಅಂಗಾರಕೇಶ್ವರನ ದೇವಾಲಯವನ್ನು ಕಟ್ಟಿಸಿರಬಹುದು. ಇವರು "ಪಂಚಸಿದ್ಧಾಂತ" ವೆಂಬ ಗ್ರಂಥವನ್ನು ಬರೆದಿರುವರು.

ವರರುಚಿಯು ವ್ಯಾಕರಣ ಶಾಸ್ತ್ರ ಪಾರಂಗತನು. ಈತನು ಪ್ರಾಕೃತಭಾಷೆಗಳನ್ನು ಕ್ರಮವಾಗಿ ವಿಂಗಡಿಸಿ, ಅವುಗಳ ವ್ಯಾಕರಣವನ್ನು ಬರೆದಿರುವನು.

ಅಮರಸಿಂಹನ ಹೆಸರು ಈ ದೇಶದಲ್ಲಿ ಆಬಾಲವೃದ್ಧರಿಗೂ ಪರಿಚಿತವಾಗಿದೆ. ಈತನ 'ಅಮರ', 'ಅಮರಕೋಶ' ಅಥವಾ 'ನಾಮಲಿಂಗಾನುಶಾಸನ' ವೆಂಬ ನಿಘಂಟು ಎಲ್ಲರಿಂದಲೂ, ಎಲ್ಲ ಕಾಲಗಳಲ್ಲಿಯೂ ಆದ

ರಿಸಲ್ಪಟ್ಟು, ಈಗಲೂ ಎಲ್ಲ ಪಾಠಶಾಲೆಗಳಲ್ಲಿಯೂ ಓದ ಲ್ಪಡುತ್ತಲಿದೆ. ಈತನ ಗ್ರಂಥವು ಚೀನಾ ಭಾಷೆಗೆ ಪರಿವರ್ತಿಸಲ್ಪಟ್ಟದೆ. ಈತನ ಗ್ರಂಥದ ಸಹಾಯದಿಂದ ಸಂಸ್ಕೃತ ಭಾಷಾಭ್ಯಾಸವು ಸುಲಭವಾಗಿದೆ.

ಧನ್ವಂತರಿಯೆಂಬಾತನು ದೊಡ್ಡ ವೈದ್ಯನು.

ವೇ (ಭೇ ?) ತಾಳಭಟ್ಟನು 'ನೀತಿಪ್ರದೀಪ' ವೆಂಬ ಗ್ರಂಥವನ್ನು ರಚಿಸಿದನು.

ಈ ಮಹನೀಯರಲ್ಲದೆ ಸುವಾಕ್, ಅಂಶುದತ್ತ, ಜಿಷ್ಣು, ತ್ರಿಲೋಚನ, ಹರಿ, ಶ್ರುತಸೇನ, ಬಾದರಾ ಯಣ, ಮಣಿತ್ಥ, ಕುಮಾರ ಸಿಂಹ, ಕಾಲತಂತ್ರ, ಮುಂ ತಾದ ಅನೇಕ ವಿದ್ವಾಂಸರು ವಿಕ್ರಮಸಭೆಯನ್ನಲಂಕ ಕರಿಸಿದ್ದರು.

ಇಷ್ಟುಮಂದಿ ಕವಿಗಳಿಗೂ, ಜ್ಞಾನಿಗಳಿಗೂ, ಪಂಡಿತ ರಿಗೂ ಆಶ್ರಯವನ್ನಿತ್ತು, ರಾಜಶ್ರೇಷ್ಠನೆನ್ನಿಸಿ ಕೊಂ ಡಿದ್ದ ವಿಕ್ರಮನಲ್ಲಿ ಧೈರ್ಯ, ಔದಾರ್ಯ, ನ್ಯಾಯ, ದಯಾದಿ ಸದ್ಗುಣಗಳು ತುಂಬಿದ್ದವೆಂದು ಹೇಳಬೇ ಕಾದುದೇ ಇಲ್ಲವಷ್ಟೆ. ಆ ಮಹಾರಾಯನಿಗೆ ದೇವತಾ ಯೋಗ್ಯವಾದ ಸಿಂಹಾಸನವೊಂದು ಹೇಗೋ ದೊರೆ ತಿತ್ತು. ಆ ಆಸನವು ಆತನ ಗುಣಗಳಿಗೆ ಅನುಸಾರ ವಾದುದು; ಆತನ ಗುಣಗಳು ಆ ಆಸನಕ್ಕೆ ತಕ್ಕವು, ಆತನಿಗೆ ಉಂಟಾಗಿದ್ದ ಐಶ್ವರ್ಯವೂ, ವೈಭವವೂ, ಗೌರ ವವೂ—ಎಲ್ಲವೂ ಆಸಿಂಹಾಸನದ ಮಹಿಮೆಯೇ ಎಂದು ಜನರು ನಂಬಿದ್ದರು. ಅಂತಹ ವಿಚಿತ್ರವಾದ ಮಹಾ

ತ್ಮ್ಯವುಳ್ಳ ಸಿಂಹಪೀಠವನ್ನು ಪಡೆಯಲು ಆತನೆಂತಹಪು ಣ್ಯವಂತನೋ, ಗುಣವಂತನೋ ಪಾಠಕರೇ ಊಹಿಸಿ ಕೊಳ್ಳಬಹುದು.

ಆ ಸಿಂಹಪೀಠದಮೇಲೆ ಕುಳಿತು, ವಿಕ್ರಮಾದಿತ್ಯರಾಜನು ಬಹುಕಾಲ ಸುಖದಿಂದಲೂ ಧರ್ಮದಿಂದಲೂ ರಾಜ್ಯವನ್ನಾಳಿದನು. ಆತನ ಹೆಸರು ಎಲ್ಲೆಲ್ಲಿಯೂ ಪ್ರಸಿದ್ಧವಾಯಿತು,—ಮನೆಮನೆಯಲ್ಲಿನ ಹೆಂಗಸರಿಗೂ ಮಕ್ಕಳಿಗೂ ಪರಿಚಿತವಾಯಿತು. ನಾಡಿನಲ್ಲೆಲ್ಲಾ ಆ ಹೆಸರನ್ನು ವಿಶ್ವಾಸದಿಂದಲೂ ಮರ್ಯಾದೆಯಿಂದಲೂ ನೆನೆಸದವರು ಒಬ್ಬರೂ ಇರಲಿಲ್ಲ

ಮನುಷ್ಯನು ಎಷ್ಟುದೊಡ್ಡವನಾದರೂ ಎಂದಾದರೊಂದುದಿನ ಸಾಯಲೇ ಬೇಕಷ್ಟೆ ? ಮಹಾನುಭಾವನಾದ ವಿಕ್ರಮಾರ್ಕನೂ ಒಂದುದಿನ ಕಾಲಾಧೀನನಾದನು. ಆ ಶೋಕಮಯವಾದ ಸಮಯದಲ್ಲಿ ಆತನ ಮಂತ್ರಿಗಳೂ, ಪ್ರಜೆಗಳೂ ಸಭೆಸೇರಿ, ಮುಂದಿನ ಕಾರ್ಯಗಳನ್ನು ಕುರಿತು ಆಲೋಚಿಸುತ್ತಿರುವಲ್ಲಿ, ಆಕಾಶದಲ್ಲಿ ಯಾರೋ ಈರೀತಿ ಹೇಳಿದಂತಾಯಿತು:

"ಎಲೈ ಜನರೆ, ವಿಕ್ರಮನ ಪೀಠವನ್ನಡರಲು ಆತನಿಗೆ ಸಮನಾದ ರಾಜನಾರೂ ಭೂಮಿಯಮೇಲಿಲ್ಲವು ಆದಕಾರಣ ಅದನ್ನುಬಳ್ಳಿಯ ಕ್ಷೇತ್ರದಲ್ಲಿ ಹೂತಿಡುವುದು." ಈ ವಾಣಿಯನ್ನು ಕೇಳಿದ ಮಂತ್ರಿಜನರು, ಬಹುವಾಗಿ ಪ್ರಲಾಪಿಸುತ್ತಾ, ದುಃಖದಲ್ಲಿ ಮುಳುಗಿದ ಮನಸ್ಸುಳ್ಳವರಾಗಿ ವಿಕ್ರಮಪೀಠವನ್ನು ಅರಮನೆಯಿಂದೀಚೆಗೆ ಸಾಗಿಸಿ,

ದೂರ ತೆಗೆದುಕೊಂಡುಹೋಗಿ ಫಲವತ್ತಾದ ಭೂಮಿಯಲ್ಲಿ ಅದನ್ನು ಆಳವಾಗಿಹೂಳಿ, ಅದರಮೇಲೆ ಎತ್ತರವಾಗಿ ಮಣ್ಣುಗುಡ್ಡೆಮಾಡಿ, ಆನೆಲದಲ್ಲೆಲ್ಲಾ ಗೋಧಿ, ಕಡಲೆಮುಂತಾದ ಧಾನ್ಯಗಳನ್ನು ಬಿತ್ತಿಸಿ, ಅದನ್ನು ಒಬ್ಬ ಬಡಬ್ರಾಹ್ಮಣನಿಗೆ ದಾನವಾಗಿಕೊಟ್ಟುಬಿಟ್ಟರು.

* *

ಕಾಲಚಕ್ರವು ಯಥಾಪ್ರಕಾರ ನಡೆಯಿತು. ವಿಕ್ರಮನ ರಾಜ್ಯವಾದ ಮಾಳವವು ಕ್ಷೀಣಿಸಲಾರಂಭಿಸಿತು. ಭೂದಾನವನ್ನು ಪಡೆದ ಆಬ್ರಾಹ್ಮಣನೂ ಕಾಲವಶನಾದನು. ಅವನ ಮಕ್ಕಳು ಮೊಮ್ಮಕ್ಕಳು ಆ ಭೂಮಿಯನ್ನನು ಭವಿಸುತ್ತ ಬಂದರು. ಸಿಂಹಾಸನವಿದ್ದ ಎತ್ತರವಾದೆಡೆಯಲ್ಲಿ ಬಿದಿರ ಅಟ್ಟಣಿಗೆಯೊಂದು ಏರ್ಪಾಟಾಯಿತು. ಅದು ಉನ್ನತವಾಗಿದ್ದಕಾರಣ ಭೂಮಿಯ ಯಜಮಾನನು ಅದರಮೇಲೆ ಕುಳಿತು ಬೆಳೆಯನ್ನು ಕಾಯುತ್ತಿದ್ದನು.

ಅವನ ಭೂಮಿಯಲ್ಲಿ ಬೆಳೆಯು ಯಾವಾಗಲೂ ಹುಲುಸಾಗಿರುವುದು. ಅವನು ಮನೆಯಲ್ಲಿಯೂ, ಬೀದಿಯಲ್ಲಿಯೂ ಇದ್ದಾಗ ಇತರರಂತೆ ಕೋಪವುಳ್ಳವನಾಗಿರುವನು, ಪಕ್ಷಪಾತವುಳ್ಳವನಾಗಿರುವನು, ಲೋಭಿಯಾಗಿರುವನು; ಆದರೆ ತನ್ನ ಭೂಮಿಗೆ ಬಂದು ಅಟ್ಟಣೆಯನ್ನೇರಿದಕೂಡಲೆ ಅವನ ನಡತೆಯೆಲ್ಲವೂ ಮಾರ್ಪಡುವುದು, ಅವನ ಮನಸ್ಸು ಶಾಂತವಾಗುವುದು, ಅವನ ಮಾತುಗಳು ಮೃದುವಾಗುವುವು, ಅವನ ಎದೆಯು ದಯೆ

ಯಿಂದ ತುಂಬುವುದು, ಅವನ ಬುದ್ಧಿಯು ನ್ಯಾಯದ
ದಾರಿಯಲ್ಲಿಯೇ ಹೋಗುವುದು. ಆ ಗದ್ದುಗೆಯ ಮೇಲೆ
ವನು ಕುಳಿತಾಗ ನೆರೆಹೊರೆಯ ಬೇಸಾಯಗಾರರೆ
ರೂ ಅವನಲ್ಲಿಗೆ ಬಂದು, ತಮ್ಮ ತಮ್ಮ ಕಷ್ಟ ಸುಖ
ಳನ್ನೂ ವ್ಯಾಜ್ಯ ವಿವಾದಗಳನ್ನೂ ಹೇಳಿ ಕೊಳ್ಳು
ರು. ಅವನು ಅದನ್ನೆಲ್ಲಾ ವಿಚಾರಿಸಿ ನ್ಯಾಯವಿದ್ದಂತೆ
ರ್ಣಯಿಸಿ, ಅವರನ್ನು ಸಮಾಧಾನಗೊಳಿಸುವನು;
ನ್ನ ಕೈಯಿಂದಾದ ಮಟ್ಟಿಗೂ ಅವರಿಗೆ ಸಾಹಾಯ್ಯ
ಮಾಡುವನು ; ಯಾವಾಗಲೂ ಅವನು ತಪ್ಪುತೀರ್ಮಾ
ನನ್ನು ಕೊಟ್ಟುದೇ ಇಲ್ಲ , ಉಪಕಾರ ಕೇಳಿದವ
ಗೆ ಇಲ್ಲವೆಂದುದೇ ಇಲ್ಲ. ಆದರೆ, ಆ ಗದ್ದುಗೆಯನ್ನು
ಟ್ಟು ಇಳಿದ ಕೂಡಲೆ ಇತರ ಜನರ ದುರ್ಗುಣಗಳು
ವನನ್ನು ಮುತ್ತಿಕೊಳ್ಳುವುವು. ಈ ವಿಚಿತ್ರಸಂಗತಿ
ಯನ್ನು ಕಂಡು ಎಲ್ಲರೂ ಆಶ್ಚರ್ಯ ಪಡುವರು.

ಈವರ್ತಮಾನವು ಎಲ್ಲೆಲ್ಲಿಯೂ ಹರಡಿತು. ಮಾಲ
ದೇಶದ ನೆರೆಯಲ್ಲಿದ್ದ ಧಾರಾನಗರದ ಭೋಜರಾಜ
ಗೂ ಅದು ತಿಳಿಯಿತು. ಆತನು, ಆ ಸ್ಥಳದಲ್ಲಿ ವಿಕ್ರ
ಮನ ಭದ್ರಪೀಠವಿರಬಹುದೆಂದು ಊಹಿಸಿ, ಪರೀಕ್ಷಿ
ಸೋಸುಗ ಬಂದಾನೊಂದುದಿನ ಪರಿವಾರಸಮೇತ
ನಾಗಿ ಆ ಭೂಮಿಯ ಕಡೆಬಂದನು.

ಆತನು ಕಣ್ಣಿಗೆ ಬಿದ್ದೊಡನೆಯೆ, ಅಟ್ಟಣಿಗೆಯ ಮೇ
ದ್ದ ಭೂಮಿಯ ಯಜಮಾನನು ಎದ್ದುನಿಂತು " ಓ
ಮಹಾರಾಜರೇ, ಈಕಡೆ ದಯಮಾಡಬೇಕು. ಈ ಆ

ಲ್ಪನ ಸೇವೆ ಸತ್ಕಾರಗಳನ್ನು ಸ್ವೀಕರಿಸಬೇಕು. ತಮಗಿಂತಲೂ ಉತ್ತಮರಾದ ಅತಿಥಿಗಳು ನನಗೆಂದು ದೊರಕುವರು ? ಇಂದು ನನ್ನ ಜನ್ಮವು ಸಫಲವಾಯಿತು. ದಯಮಾಡಿಬನ್ನಿರಿ " ಎಂದು ವಿನಯದಿಂದ ಬೇಡಿಕೊಂಡನು. ಭೋಜನು ಆಪ್ರಾರ್ಥನೆಯಂತೆ ತನ್ನ ಪರಿವಾರ ಸಹಿತ ಭೂಮಿಯನ್ನು ಪ್ರವೇಶಿಸಿದನು. ಬ್ರಾಹ್ಮಣನು ಆತನನ್ನಿದಿರ್ಗೊಳ್ಳುವ ನಿಮಿತ್ತ ಗದ್ದುಗೆಯಿಂದಿಳಿದನು. ತಂಗಡಲೆ ಅವನ ಬುದ್ಧಿಯು ಬೇರೆಯಾಯಿತು. ಅವನು " ಮಹಾರಾಜರೇ, ತಾವು ಹೀಗೆ ಬ್ರಾಹ್ಮಣನ ಭೂಮಿಗೆ ಪ್ರವೇಶಿಸಿ, ಅವನಬೆಳೆಯನ್ನು ಹಾಳುಮಾಡುವುದು ಉಚಿತವೆ ? " ಎಂದನು.

ಭೋಜರಾಜನು ಇಷ್ಟುಬೇಗನೆ ಬ್ರಾಹ್ಮಣನ ಸ್ವಭಾವವು ಹೇಗೆ ವ್ಯತ್ಯಾಸ ವಾಯಿತೆಂದು ಆಶ್ಚರ್ಯಪಡುತ್ತಾ ಹಿಂದಡಿಯಿಟ್ಟನು. ಬ್ರಾಹ್ಮಣನೂ ಹಿಂದಕ್ಕೆ ಹೋಗಿ ಗದ್ದುಗೆಯನ್ನು ಹತ್ತಿದನು. ಒಡನೆಯೆ,ಅವನು ಹಿಂದಿನಂತೆ "ಹೇ ಮಹಾಸ್ವಾಮಿ, ನನ್ನ ಪ್ರಾರ್ಥನೆಯನ್ನು ಹೀಗೆ ನಿರಾಕರಿಸ ಬಹುದೆ? ನನ್ನ ಭೂಮಿಯು ಧಾನ್ಯ ಸಸ್ಯ ಫಲ ಜಲ ಸಮೃದ್ಧವಾಗಿರಲು, ಈ ಮಧ್ಯಾಹ್ನಕಾಲದಲ್ಲಿ ತಾವೂ ತಮ್ಮಪರಿಜನರೂ ಈ ಮಾರ್ಗದಲ್ಲಿ ಉಪವಾಸ ತಿರುಗ ಬೇಕೆ ?" ಎಂದನು.

ಭೋಜರಾಜನು ತನ್ನ ಊಹೆಯು ಸರಿಯೆಂದು ನಿಶ್ಚಯಿಸಿದನು. ಆದರೂ,ತಾನೇ ಆ ವೈಚಿತ್ರ್ಯವನ್ನು ಅನುಭವಿಸಿ ತಿಳಿಯ ಬೇಕೆಂದು, ಆ ಬ್ರಾಹ್ಮಣನನ್ನು ಗ

ದ್ದುಗೆಯಿಂದಿಳಿಸಿ, ತಾನೇ ಆಸ್ಥಳದಲ್ಲಿ ಕೂತನು. ಆಹಾ ! ಆತನ ಆಂತರ್ಯವಾದ ಅನುಭವಗಳನ್ನು ಹೇಗೆ ತಾನೆ ವರ್ಣಿಸಬಹುದು ! ತತ್‌ಕ್ಷಣವೇ ಆತನಮನಸ್ಸು ನಿರ್ಮಲವಾಯಿತು. ಆತನ ಕೊರತೆಗಳೆಲ್ಲವೂ ಮಾಯವಾದವು. ತನ್ನರಾಜ್ಯದಲ್ಲಿ ನಡೆಯುತಲಿದ್ದ ನ್ಯಾಯಾನ್ಯಾಯಗಳೆಲ್ಲವೂ ಆತನಿಗೆ ಸ್ಪಷ್ಟವಾಗಿ ಗೋಚರಿಸಿದವು ತನ್ನ ಪ್ರಜೆಗಳಲ್ಲಿ ಸಜ್ಜನರು ಯಾರು, ದುರ್ಜನರುಯಾರು ಎಂಬುದು ಆತನಿಗೆ ಸಂದೇಹವಿಲ್ಲದಂತೆ ತಿಳಿದು ಬಂದಿತು. ಪ್ರಜೆಗಳ ಕಷ್ಟಗಳನ್ನು ಹೋಗಲಾಡಿಸಿ, ಸುಖವನ್ನು ಹೆಚ್ಚಿಸಿ, ಲೋಕಕ್ಕೆ ಉಪಕಾರ ಮಾಡಬೇಕೆಂಬ ಕುತೂಹಲವು ಆತನಲ್ಲಿ ಕ್ಷಣೇ ಕ್ಷಣೇ ಬಲವಾಯಿತು. ವಾಚಕರೇ, ವಿಕ್ರಮಪೀಠದ ಮಹಿಮೆಯನ್ನು ನೋಡಿದಿರಾ ?

ಭೋಜನು ಏನಾದರೂ ಮಾಡಿ ಆಸಿಂಹಾಸನವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ನಿರ್ಧರಿಸಿದನು. ಆ ಬಡಬ್ರಾಹ್ಮಣನಿಗೆ ಬೇಕಾದಷ್ಟು ಹಣವನ್ನೂ ವಸ್ತ್ರವಾಹನಗಳನ್ನೂ ಕೊಟ್ಟು ತನ್ನ ಅಭಿಪ್ರಾಯವನ್ನು ತಿಳಿಸಿದನು. ಅವನು ತನ್ನಆಶೆಯೆಲ್ಲವೂ ತೀರಿ ಹೋಯಿತೆಂದು ಆನಂದಿಸಿ, ಭೋಜನ ಇಷ್ಟಕ್ಕೆ ಸಮ್ಮತಿಸಿದನು. ರಾಜನ ಇಷ್ಟವು ನೆರವೇರುವುದೊಂದು ಕಷ್ಟವೆ ? ಬೇಗನೆ ಒಡ್ಡರು ಬಂದು, ಗುದ್ದಲಿ ಹಾರೆಗಳನ್ನು ತಂದು, ಆ ಪ್ರದೇಶವನ್ನೆಲ್ಲಾ ಅಗೆದರು. ಸ್ವಲ್ಪ ಹೊತ್ತು ತೋಡಿದಮೇಲೆ, ಅಗೋ ! ನವರತ್ನಖಚಿತ

ವಾದ ವಿಕ್ರಮಪೀಠವು ಅಲ್ಲಿಯೇ ಗೋಚರವಾಯಿತು. ಇನ್ನು ಭೋಜನ ಸಂತೋಷಕ್ಕೆ ಸೀಮೆಯೆಲ್ಲಿಯದು ? ಕೂಡಲೆ ಪುರೋಹಿತರನ್ನು ಕರೆಯಿಸಿ ಆಭದ್ರಪೀಠಕ್ಕೆ ಪೂಜೆಮಾಡಿಸಿ, ಶುಭಮುಹೂರ್ತದಲ್ಲಿ ವಾದ್ಯ ವೈಭವಗಳೊಡನೆ ಅದನ್ನು ತನ್ನೂರಿಗೆ ಹೊರೆಸಿಕೊಂಡು ಹೋದನು. ಅಲ್ಲಿ ಅದನ್ನು ಭದ್ರವಾದ ಸ್ಥಳದಲ್ಲಿರಿಸಿ, ಬಲುಜಾಗರೂಕರಾದ ಕಾವಲುಗಾರರು ಅದನ್ನು ಕಾದಿರುವಂತೆ ನಿಯಮಿಸಿದನು. * * *

ಧಾರಾನಗರದಲ್ಲಿ ಈದಿನ ಮಹೋತ್ಸವ. ಊರನ್ನೆಲ್ಲಾ ತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಸಿಂಗರಿಸಿರುವರು. ಎಲ್ಲಿನೋಡಿದರೂ ಉತ್ಸಾಹ, ಎಲ್ಲಿನೋಡಿದರೂ ಕೋಲಾಹಲ. ಜನರು ಒಳ್ಳೊಳ್ಳೆಯ ಉಡುಪು ತೊಡವುಗಳನ್ನಿಟ್ಟುಕೊಂಡು, ಸಡಗರದಿಂದ ತಿರುಗುತಲಿರುವರು. ಹುಡುಗರು ಗುಂಪುಗಟ್ಟಿಕೊಂಡು ಹಾಡುತ್ತಾ, ಓಡುತ್ತಾ, ಕುಣಿಯುತ್ತಾ, ಗದ್ದಲಮಾಡುತ್ತಿರುವರು. ರಾಜವೀಧಿಯಲ್ಲಿ ಜನರು ಇಕ್ಕಟ್ಟಾಗಿಸೇರಿ, ಕಿಕ್ಕಿರಿಸುತ್ತಿರುವರು. ಅರಮನೆಯ ಮುಂದಂತೂ ಸೂಜಿಯ ಮೊನೆಯಷ್ಟು ಸ್ಥಳವೂ ಬಿಡುವಿಲ್ಲ. ಜನರು ಒಳಕ್ಕೆ ಹೋಗುತ್ತಲೇ ಇರುವರು. ಇಷ್ಟೊಂದು ಸಂಭ್ರಮಕ್ಕೆ ಕಾರಣವೇನೆಂದರೆ, ಈದಿನ ಭೋಜಮಹಾರಾಜನು ನೂತನ ಸಿಂಹಾಸನವನ್ನು ಹತ್ತುವನು. ಇದಕ್ಕಾಗಿ ದೇಶದೇಶಗಳಿಂದ ರಾಜಾಧಿರಾಜರುಗಳೂ, ಮಹಾರಾಜರೂ, ಕವಿಗಳೂ, ಗಾಯ

ಕರೂ ಬಂದು ಭೋಜಸಭೆಯಲ್ಲಿ ನೆರೆದಿರುವರು. ಬ್ರಾಹ್ಮಣರಿಗೂ ಬಡಬಗ್ಗರಿಗೂ ಯಥೇಚ್ಛವಾಗಿ ಅನ್ನ ದಾನ ವಸ್ತ್ರದಾನಗಳು ನಡೆಯುತ್ತಲಿರುವವು. ಓಲಗದ ವರು ಆದರದಿಂದ ಇಂಪಾದ ವಾದ್ಯಗಳನ್ನು ನುಡಿಯಿ ಸುತಲಿರುವರು.

ಸಿಂಹಾಸನಾರೋಹಣದ ಮುಹೂರ್ತವು ಸಮೀಪಿ ಸಿತು. ಸಿಂಹಾಸನಕ್ಕೆ ಶಾಸ್ತ್ರಾನುಸಾರವಾಗಿ ಪೂಜೆ ಪುನಃ ಪೂಜೆಗಳಾದವು. ಬ್ರಾಹ್ಮಣರಿಗೆ ಗೋದಾನ ಭೂದಾನ ಹಿರಣ್ಯದಾನಗಳು ಧಾರಾಳವಾಗಿ ದೊರೆ ತವು. ಗಂಧ ಪುಷ್ಪ ತಾಂಬೂಲಾದಿಗಳಿಂದ ಸಭೆಯವ ರೆಲ್ಲರೂ ಸಂತುಷ್ಟರಾದರು. ಬ್ರಾಹ್ಮಣರಾಶೀರ್ವ ದಿಸುತ್ತಿರಲು, ವೈತಾಳಿಕರು ಪರಾಕು ಹೇಳುತ್ತಿ ರಲು, ವಂದಿಗಳು ಬಿರುದಾವಳಿಗಳನ್ನು ಹಾಡುತ್ತಿ ರಲು, ಸಾಮಂತರಾಜರೂ ಪ್ರಜೆಗಳೂ ಜಯಜಯ ವೆನ್ನುತ್ತಿರಲು ಭೋಜಮಹಾರಾಜನು ಆತುರದಿಂದ ಎದ್ದು, ಸಭೆಯ ಅನುಮತಿಯನ್ನು ಪಡೆದು, ಸಿಂಹಪೀ ಠಕ್ಕೆ ನಮಸ್ಕರಿಸಿ, ಎಲ್ಲರೂ ಎವೆಯಿಕ್ಕದೆ ನೋಡುತ್ತಿ ರಲಾಗಿ ಬಲಗಾಲನ್ನೆತ್ತಿ ಗಂಭೀರ ಭಾವದಿಂದ ಸಿಂಹಾ ಸನದ ಮೊದಲನೆಯ ಮೆಟ್ಟಲಮೇಲಿಟ್ಟನು. ಅಹಹಾ! ಅದೇನಾಶ್ಚರ್ಯ ! ಆತನ ಹೆಜ್ಜೆಬಿಟ್ಟ ಸೋಪಾನದ ಮೇಲೆ ಕೆತ್ತಲ್ಪಟ್ಟಿದ್ದ ಪ್ರತಿಮೆಗೆ ಸೋಕಿದೊಡ ನೆಯೆ. ಅದು "ನಿಲ್ಲು" ಎಂದಿತು ! ರಾಜನು ಸ್ತಬ್ಧ ನಾದನು; ಎಲ್ಲರೂ ಸ್ತಬ್ಧರಾದರು. ಕೆಲವು ನಿಮಿಷಗ

ಳವರೆಗೂ ಯಾರಿಗೂ ಏನೂ ತೋರದೆ, ಎಲ್ಲರೂ ಕಂಬಗಳಂತೆ ನಿಂತಿದ್ದರು. ಸಾಲಭಂಜಿಕೆಯು ಮರಳಿ ಹೀಗೆಂದಿತು: "ಎಲೈ ರಾಜನೆ, ನಿನ್ನಲ್ಲಿ ವಿಕ್ರಮಾದಿತ್ಯನಲ್ಲಿದ್ದ ಶೌರ್ಯ, ಔದಾರ್ಯ, ಸಾಹಸ, ಸದ್ಗುಣಗಳು ಇರುವುವಾದರೆ ನೀನೀ ಸಿಂಹಾಸನವನ್ನೇರಲು ಯೋಗ್ಯನು."

ರಾಜ:—"ವಿಕ್ರಮಾರ್ಕನ ಗುಣಗಳು ನನ್ನಲ್ಲಿಯೂ ಇವೆ. ಆತನಿಗಿಂತಲೂ ಹೆಚ್ಚಾಗಿಯೇ ನಾನು ಯಾಚಕರನ್ನು ತೃಪ್ತಿಗೊಳಿಸಬೇಕೆಂದು ಇರುವೆನು."

ಸಾಲಭಂಜಿಕೆ:—"ತನ್ನ ಗುಣಗಳನ್ನು ತಾನೇ ಹೊಗಳಿಕೊಳ್ಳುವುದೊಂದು ಸದ್ಗುಣವೊ ?"

ರಾಜನು ಇನ್ನೇನು ತಾನೆ ಹೇಳಿಯಾನು ! ಸುಮ್ಮನಾಗಿ ತಲೆಬಗ್ಗಿಸಿ, ಆಶಾಭಂಗದಿಂದ ಬೇಯಿಸಲ್ಪಟ್ಟ ಹೃದಯವುಳ್ಳವನಾಗಿ ಅಂತಃಪುರವನ್ನು ಸೇರಿದನು.

* * *

ಕೆಲವು ದಿನಗಳು ಕಳೆದಮೇಲೆ ಪುನಃ ಭೋಜಮಹಾರಾಜನು ವಿಕ್ರಮ ಪೀಠವನ್ನಡರಲು ಯತ್ನಿಸಿದನು. ಈಸಲ ಎರಡನೆಯ ಸೋಪಾನದ ಸಾಲಭಂಜಿಕೆಯು ಈರೀತಿ ನುಡಿಯಿತು:

"ಎಲೈರಾಜನೆ, ಲಾಲಿಸು. ಪೂರ್ವದಲ್ಲಿ ವಿಕ್ರಮಾದಿತ್ಯನು ರಾಜನಾಗಿದ್ದಾಗ ಒಬ್ಬಾನೊಬ್ಬ ಬ್ರಾಹ್ಮಣನು ಚಿತ್ರಕೂಟಪರ್ವತದ ಬಳಿಯ ಅರಣ್ಯದಲ್ಲಿ ಬಹುಕಾಲ ಅತ್ಯುಗ್ರವಾಗಿ ತಪಸ್ಸು ಮಾಡುತ್ತಿದ್ದನು. ಆತನು ಜಗದಂಬಿಕೆಯನ್ನು ತೃಪ್ತಿಗೊಳಿಸುವುದಕ್ಕಾಗಿ ಮಾಡಿದ ಹೋಮದ ಬೂದಿಯು ಬೆಟ್ಟ ಬೆಟ್ಟಗಳಾಗಿ

ಬಿದ್ದಿತ್ತು. ಆದರೂ ದೇವಿಯು ಅವನಲ್ಲಿ ಪ್ರಸನ್ನಳಾಗಲಿಲ್ಲ ಆವಿಪ್ರನು ಏಕಾಕಿಯಾಗಿ, ಯಾರೊಂದಿಗೂ ಮಾತನಾಡದೆ ಬಣಗಿದ ದೇಹದಿಂದಲೂ ಕುಗ್ಗಿದ ಮನಸ್ಸಿನಿಂದಲೂ ಹೋಮ ಮಾಡುತ್ತಲೇ ಇದ್ದನು. ಈಸಮಾಚಾರವು ಚಾರರಮೂಲಕ ವಿಕ್ರಮಾದಿತ್ಯನ ಕಿವಿಯನ್ನು ಮುಟ್ಟಿತು. ಆತನು ಕೂಡಲೇ ಹೊರಟು, ಆವಿಪ್ರನಬಳಿ ಸೇರಿ, ತಾನೂ ದೇವಿಯನ್ನು ಪ್ರಾರ್ಥಿಸಿ, ಕಡೆಗೆ ಆಕೆಯು ಪ್ರತ್ಯಕ್ಷಳಾಗುವುದಕ್ಕೋಸ್ಕರ ತನ್ನ ದೇಹವನ್ನೇ ಹೋಮದಲ್ಲಿ ಅರ್ಪಿಸುವುದಾಗಿ ಹೇಳಿ, ಕತ್ತಿಯನ್ನೆಳೆದು ತನ್ನ ಕೊರಳಮೇಲೆ ಹೊಡೆದುಕೊಂಡನು. ಏಟು ತಾಕುವುದರೊಳಗಾಗಿ ದೇವತೆಯು ಸಾಕ್ಷಾತ್ತಾಗಿನಿಂತು " ರಾಜನೆ, ನಿನ್ನ ದೃಢ ಮನಸ್ಸಿಗೆ ಮೆಚ್ಚಿದೆನು. ಈಬ್ರಾಹ್ಮಣನಿಗೆ ಭಕ್ತಿಯಿದ್ದರೂ ಅದು ಚಂಚಲವಾದುದು. ನಿನಗಿರುವ ಧೀರಬುದ್ಧಿಯು ಅವನಿಗಿಲ್ಲ ಆದುದರಿಂದಲೇ ನಾನು ಅವನಲ್ಲಿ ಒಲಿಯಲಿಲ್ಲ. ನಿನಗೆ ಬೇಕಾದ ವರವನ್ನು ಕೇಳು " ಎಂದಳು. ವಿಕ್ರಮನು " ತಾಯಿ, ಈಬ್ರಾಹ್ಮಣನ ಇಷ್ಟವನ್ನು ನೆರವೇರಿಸಿ, ಕಷ್ಟವನ್ನು ನೀಗು. ಅದೇ ನನ್ನಿಷ್ಟವು. " ಎಂದನು. ಅಂಬಿಕೆಯು ವಿಕ್ರಮನ ಪರೋಪಕಾರಬುದ್ಧಿಯಿಂದ ಮತ್ತಷ್ಟು ಸಂತುಷ್ಟಳಾಗಿ, ಆತನನ್ನಾಶೀರ್ವದಿಸಿ, ವಿಪ್ರನಲ್ಲಿಯೂ ಅನುಗ್ರಹಿಸಿದಳು. ವಿಕ್ರಮನಲ್ಲಿದ್ದ ಇಂತಹ ಧೈರ್ಯಔದಾರ್ಯಗಳು ನಿನ್ನಲ್ಲಿರುವುವೆ?

ಭೋಜನು ನಿರುತ್ತರನಾದನು.

ಇನ್ನೊಂದುಸಲ ಭೋಜನು ವಿಕ್ರಮಪೀಠವನ್ನಾರೋಹಿಸ ಬಂದಾಗ ಮೂರನೆಯ ಸೋಪಾನದ ಮೇಲಿನ ಪಾಂಚಾಲಿಕೆಯು ಹೀಗೆಂದಿತು:

"ಎಲೈ ರಾಜನೆ, ವಿಕ್ರಮರಾಜನು ಒಂದು ಕಾಲದಲ್ಲಿ

ಮಹಾಯಜ್ಞವೊಂದನ್ನು ಉಪಕ್ರಮಿಸಿ, ಆ ಸಮಯಕ್ಕೆ ಸಮುದ್ರರಾಜನನ್ನು ಕರೆತರಲು ಒಬ್ಬ ಬ್ರಾಹ್ಮಣನನ್ನು ಕಳುಹಿಸಿಕೊಟ್ಟನು. ಆಬ್ರಾಹ್ಮಣನು ಸಮುದ್ರತೀರವನ್ನುಸೇರಿ, ಸಮುದ್ರನನ್ನು ಸ್ತುತಿಸಿ, ವಿಕ್ರಮನ ಬಿನ್ನಪವನ್ನು ವಿವರಿಸಿದನು. ಸಾಗರನು ವಿಕ್ರಮನು ಮಾಡಿದ ಮರ್ಯಾದೆಯಿಂದ ಸಂತೋಷಹೊಂದಿ, ತನ್ನಅನುಗ್ರಹವನ್ನು ತೋರಿಸುವುದಕ್ಕಾಗಿ ನಾಲ್ಕು ರತ್ನಗಳನ್ನು ಬ್ರಾಹ್ಮಣನ ಕೈಯಲ್ಲಿ ಕೊಟ್ಟು ಆತನಿಗೆ ಕಳುಹಿಸಿದನು. ಅವುಗಳಲ್ಲಿ ಒಂದು ಬೇಕಾದ ಚಿನ್ನರನ್ನಗಳನ್ನು ಕೊಡಬಲ್ಲುದು; ಎರಡನೆಯದು ತಿಂಡಿತೀರ್ಥಗಳನ್ನು ಕೊಡಬಲ್ಲುದು; ಮೂರನೆಯದು ಆನೆಕುದರೆ ಮುಂತಾದುವುಗಳನ್ನು ಕೊಡತಕ್ಕದು; ನಾಲ್ಕನೆಯದು ಒಡವೆ ವಸ್ತ್ರಗಳನ್ನ ಕೊಡಬಲ್ಲುದು. ಈಮಣಿಗಳನ್ನು ಬ್ರಾಹ್ಮಣನು ತರುವವೇಳೆಗೆ ಯಜ್ಞವು ಮುಗಿದುಹೋಗಿತ್ತು. ವಿಕ್ರಮನು ಆಬ್ರಾಹ್ಮಣನಿಗೆ ಮತ್ತೇನ ಕೊಡುವುದಕ್ಕೂ ತೋರದೆ, ಆರತ್ನಗಳಲ್ಲಿ ಬೇಕಾದಒಂದನ್ನು ತೆಗೆದುಕೊಳ್ಳಹೇಳಿದನು. ಆಬ್ರಾಹ್ಮಣನ ಮನೆಯವರಾದರೋ ಒಬ್ಬೊಬ್ಬರು ಒಂದೊಂದು ಬೇಕೆಂದು ಮುಷ್ಕರ ಹಿಡಿದರು. ಇದುವಿಕ್ರಮನಿಗೆ ತಿಳಿಯಲು ಆತನು ಆನಾಲ್ಕು ಮಣಿಗಳನ್ನೂ ಬ್ರಾಹ್ಮಣನಿಗೇ ಕೊಟ್ಟುಬಿಟ್ಟನು. ಹೇಭೋಜಪ್ರಭೋ ಇಂತಹ ಔದಾರ್ಯವು ನಿನ್ನಲ್ಲುಂಟೆ ? ”

ಭೋಜನಿಂದ ಮಾತೇ ಹೊರಡಲಿಲ್ಲ.

ಭೋಜನು ನಾಲ್ಕನೆಯಸಾರಿ ವಿಕ್ರಮಪೀಠವನ್ನಾಕ್ರಮಿಸಲು ಉಜ್ಜುಗಿಸಿದನು. ಆಗನಾಲ್ಕನೆಯ ಪುತ್ಥಳಿಯು ಹೀಗೆಂದಿತು

“ ವಿಕ್ರಮನೊಂದುವೇಳೆ ಬೇಟೆಗೆ ಹೋಗಿ, ಅಡವಿಯಲ್ಲಿ

ದಾರಿತಪ್ಪಿ ಅಲೆಯುತ್ತಿದ್ದನು. ಆಗ ಒಬ್ಬ ಬ್ರಾಹ್ಮಣನು ಆತನಿಗೆದುರು ಬಿದ್ದು ಆತನನ್ನು ಉಜ್ಜಯಿನಿಗೆ ಕರೆತಂದನು. ಈ ಉಪಕಾರಕ್ಕೆ ತಾನು ಪ್ರತಿಮಾಡಬೇಕೆಂದು ವಿಕ್ರಮನು ಅನೇಕಾವರ್ತಿ ಆ ಬ್ರಾಹ್ಮಣನೊಡನೆ ಹೇಳುತ್ತಿದ್ದನು. ಆತನು ಒಂದು ದಿನ ರಾಜನ ಮನಸ್ಸನ್ನು ಪರೀಕ್ಷಿಸಬೇಕೆಂದು, ರಾಜಕುಮಾರನನ್ನು ತನ್ನ ಮನೆಯಲ್ಲಿ ಬಚ್ಚಿಟ್ಟು, ಆ ಹುಡುಗನ ವಜ್ರಮೇಲಿನ ಒಡವೆಯೊಂದನ್ನು ಅಂಗಡಿಬೀದಿಗೆ ತಂದು ಮಾರಾಟದ ನಿಮಿತ್ತದಿಂದ ಎಲ್ಲರಿಗೂ ತೋರಿಸುತ್ತಿದ್ದನು. ರಾಜಭಟರಿದನ್ನರಿತು ಅವನೇ ರಾಜಪುತ್ರನನ್ನು ಕದ್ದಿರಬೇಕೆಂದು ನಿಶ್ಚಯಿಸಿ, ಅವನನ್ನು ಹಿಡಿದು ರಾಜನ ಮುಂದೆ ತಂದು ನಿಲ್ಲಿಸಿದರು. ಅವನಾಗ "ಹೇರಾಜನೆ, ನಾನು ದರಿದ್ರನು. ಆದರೂ ನಿನ್ನನ್ನು ಯಾಚಿಸಲಿಷ್ಟವಿಲ್ಲದೆ, ನಿನ್ನ ಮಗನನ್ನು ಕೊಂಡೊಯ್ದು ತಲೆಯೊಡೆದು, ಅವನ ಆಭರಣಗಳನ್ನು ಮಾರಿ ಹಣಸಂಪಾದಿಸುತಲಿರುವೆನು" ಎಂದನು. ವಿಕ್ರಮನು ಸ್ವಲ್ಪವೂ ಕೋಪಗೊಳ್ಳದೆ "ಎಲೈ ವಿಪ್ರನೆ, ಭಯವು ಬೇಡ. ನೀನುಮಾಡಿದ ಉಪಕಾರವನ್ನು ನಾನು ಮರೆತಿಲ್ಲ. ನನ್ನ ಮಗನಿಗಾದ ಗತಿಯು ದೈವಕಾರ್ಯವೇ. ದೈವಸಂಕಲ್ಪವಿಲ್ಲದೆ ಯಾವುದೂ ನಡೆಯದಲ್ಲವೆ ? ಆದಕಾರಣ ನಿನ್ನಿಂದೇನೂ ತಪ್ಪಿಲ್ಲ. ನನ್ನ ಭಂಡಾರದಿಂದ ನಿನಗೆ ಬೇಕಾದಷ್ಟು ಧನವನ್ನು ಪಡೆದುಹೋಗು" ಎಂದನು. ಬ್ರಾಹ್ಮಣನು ತುಂಬಾಸಂತುಷ್ಟನಾಗಿ ರಾಜಪುತ್ರನನ್ನು ತಂದೊಪ್ಪಿಸಿ, ತನ್ನ ನಿಜವಾದ ಉದ್ದೇಶವನ್ನರುಹಿ, ಮನ್ನಣೆಯನ್ನು ಬೇಡಿದನು. ವಿಕ್ರಮನಲ್ಲಿದ್ದ ಕೃತಜ್ಞತಾ ಕಾರುಣ್ಯಗಳು ನಿನ್ನಲ್ಲಿ ಉಂಟೇನೈ, ರಾಜನೆ ?"

ಭೋಜನು ಏನತಾನೆ ಹೇಳಬಹುದು ?

ಐದನೆಯಾವರ್ತಿ ಸಾಲಭಂಜಿಕೆಯು ಹೀಗೆಂದಿತು.

" ಒಂದುಸಮಯದಲ್ಲಿ ವಿಕ್ರಮಭೂಪನು ಬಹುಬೆಲೆಯುಳ್ಳ ಹತ್ತು ರತ್ನಗಳನ್ನು ಎಂಟುದಿನಗಳೊಳಗಾಗಿ ಕೊಂಡುತಾ ರೆಂದು ತನ್ನ ಭೃತ್ಯನೊಬ್ಬನನ್ನು ದೂರದೇಶದಲ್ಲಿದ್ದ ರತ್ನವ್ಯಾ ಪಾರಿಯ ಬಳಿಗೆ ಕಳುಹಿಸಿದನು. ಆಭೃತ್ಯನುಹೋಗಿ ರತ್ನಗ ಳನ್ನು ಕೊಂಡು ಹಿಂದಿರುಗಿ ಬರುವಾಗ, ವಿಶೇಷ ಮಳೆ ಬಿದ್ದು ದಾರಿಯಲ್ಲಿ ಅಡ್ಡವಾಗಿದ್ದ ನದಿಯು ಉಕ್ಕಿ ಹರಿಯುತ್ತಿತ್ತು. ಹೊಳೆಯನ್ನು ದಾಟಿಸೆಂದು ಅಂಬಿಗನನ್ನು ಕೇಳಿದನು. ಅವನು ಆಗಲಾರದೆಂದು ಹೇಳಿದನು. ಭೃತ್ಯನು ತಾನು ವಹಿಸಿದ್ದ ರಾಜ ಕಾರ್ಯವನ್ನು ವಿವರಿಸಿದನು. ಅದಕ್ಕವನು ಹತ್ತುರತ್ನಗಳಲ್ಲಿ ಐದ ನ್ನುತನಗೆ ಕೊಟ್ಟರೆ ಹರಿಗೋಲ ನಡಿಸುವದಾಗಿ ಹೇಳಿದನು. ಕಾ ಲವು ಮಿಂಚಿ ಹೋಗುವುದೆಂಬ ಭಯದಿಂದ ರಾಜಭೃತ್ಯನು ಅದಕ್ಕೊಪ್ಪಿ, ಅಂಬಿಗರವನಿಗೆ ಐದು ಮಣಿಗಳನ್ನು ಕೊಟ್ಟು ಉಳಿದವನ್ನು ದೊರೆಗೊಪ್ಪಿಸಿ, ಆದಸಂಗತಿಯನ್ನು ಹೇಳಿದನು. ವಿಕ್ರಮನು ಅವನ ಕಾಲನಿಯಮವನ್ನು ಮೆಚ್ಚಿ ಆಐದುರತ್ನಗ ಳನ್ನು ಭೃತ್ಯನಿಗೇ ಬಹುಮಾನವಾಗಿ ಕೊಟ್ಟುಬಿಟ್ಟನು. ಹೇಭೋ ಜಭೂಪತೆ, ಈಬಗೆಯ ಗುಣವು ತಮ್ಮಲ್ಲಿರುವುದೋ ? "

ಯಥಾಪ್ರಕಾರ ಭೋಜನು ಅವಾಕ್.

ಆರನೆಯ ಗೊಂಬೆಯು ಭೋಜನಿಗೆ ಹೇಳಿದ ಕಥೆ ಯೆಂತೆಂದರೆ:

" ವಿಕ್ರಮನು ಒಂದಾನೊಂದುವೇಳೆ ವನವಿಹಾರದಲ್ಲಿದ್ದಾಗ ಒಬ್ಬಾನೊಬ್ಬ ಬ್ರಹ್ಮಚಾರಿಯು ಅದನ್ನು ಕಂಡು, ರಾಜನಲ್ಲಿಗೆ ಹೋಗಿ, "ಎಲೈರಾಜನೆ, ಹುಟ್ಟಿದಾಗಿನಿಂದಲೂ ವ್ರತೋಪವಾ ಸಗಳನ್ನು ಮಾಡಿ ಬಳಲಿರುವೆನು. ಸಂಸಾರಸುಖದಲ್ಲಿ ನನಗೆ ಈಗ ಅಪೇಕ್ಷೆಹುಟ್ಟಿರುವುದು. ಅವನ್ನೀಡೇರಿಸಲು ನಿನಗಿಂತಲೂ

ಶಕ್ತರಾರು ? ” ಎಂದು ವಿನಯದಿಂದ ಬೇಡಿದನು. ವಿಕ್ರಮನು ಆತನಿಗೆ ಒಂದು ಗ್ರಾಮವನ್ನೇ ದಾನವಾಗಿಕೊಟ್ಟು ಆತನ ವಿವಾಹಕ್ಕೂ ಸುಖಜೀವನಕ್ಕೂ ತಕ್ಕ ಅನುಕೂಲ್ಯಗಳನ್ನು ಒದಗಿಸಿಕೊಟ್ಟನು. ಇಂತಹ ಕಾರ್ಯಗಳನ್ನು ತಾವೆಷ್ಟು ಮಾಡಿರುವಿರಿ ? ”

ಭೋಜನು ಏನೂ ಹೇಳಲಿಲ್ಲ.

ಏಳನೆಯ ಸಲ ಭಾಜಿಕೆಯು ನುಡಿದ ವೃತ್ತಾಂತವೇನೆಂದರೆ:

“ ಪಶ್ಚಿಮ ಸಮುದ್ರದಲ್ಲೊಂದು ದ್ವೀಪವುಂಟು. ಅದರಲ್ಲೊಂದು ಪರ್ವತದಮೇಲೆ ಭುವನೇಶ್ವರೀ ದೇವಿಯ ಆಲಯವುಂಟು ಪೂರ್ವಕಾಲದಲ್ಲಿ, ಆದರಲ್ಲಿನ ದೇವತಾವಿಗ್ರಹದ ಪಕ್ಕದಲ್ಲಿ, ತಲೆಯಿಲ್ಲದ ಸ್ತ್ರೀದೇಹವೊಂದೂ ಪುರುಷ ದೇಹವೊಂದೂ ಇದ್ದುವು. ಅಲ್ಲಿ ಗೋಡೆಯಮೇಲೆ “ ಪರೋಪಕಾರಿಯಾದ ಮಹಾಪುರುಷನು ತನ್ನ ಕೊರಳ ರಕ್ತದಿಂದ ಈದೇವಿಯನ್ನಾರಾಧಿಸಿದರೆ ಈಶರೀರಗಳು ಸಜೀವವಾಗುವುವು” ಎಂದು ಬರೆಯಲ್ಪಟ್ಟಿತ್ತು. ಈಸಂಗತಿಯನ್ನು ವಿಕ್ರಮಾದಿತ್ಯನು ಹೇಗೋ ಕೇಳಿ, ಆದೇವತಾಲಯವನ್ನು ಸೇರಿ, ದೇವತೆಗೆ ನಮಸ್ಕರಿಸಿ ರಕ್ತಕ್ಕೋಸ್ಕರ ಖಡ್ಗವನ್ನು ತನ್ನ ಕಂಠದೊಳಕ್ಕೆ ಹೊಗಿಸಿದನು. ಕೂಡಲೆ ದೇವಿಯು ಪ್ರಸನ್ನಳಾಗಿ, ಆಮುಂಡಗಳಿಗೆ ತಲೆಯನ್ನೂ ಜೀವವನ್ನೂ ಕೊಟ್ಟು, ಅವರನ್ನು ತಮ್ಮ ರಾಜ್ಯಕ್ಕೆ ಬೀಳ್ಕೊಟ್ಟು, ವಿಕ್ರಮನನ್ನೂ ಆಶೀರ್ವದಿಸಿದಳು. ವಿಕ್ರಮನ ಈ ಸಾಹಸಪರೋಪಕಾರಗಳಿಗೆ ಸಮವಾದ ಗುಣಗಳು ತಮ್ಮಲ್ಲಿವುವು ? ”

**ಭೋಜನು ಮೂಕನಾಗಿದ್ದನು.**

ಎಂಟನೆಯ ಸಾಲಭಂಜಿಕೆಯು ಕಥಿಸಿದರೀತಿ ಯೆಂತೆನೆ:

"ಕಾಶ್ಮೀರ ದೇಶದಲ್ಲಿ ಒಬ್ಬಾನೊಬ್ಬ ಧನಿಕನು ಬಹುದ್ರವ್ಯ ವನ್ನು ವ್ಯಯಮಾಡಿ ಒಂದು ದೊಡ್ಡ ಕೆರೆಯನ್ನು ತೋಡಿಸಿ ದ್ದನು. ಆದರೆ ಏನುಮಾಡಿದರೂ, ಎಷ್ಟುದಿನಗಳು ಕಾದರೂ ಅದಕ್ಕೆ ನೀರೇ ಬರಲಿಲ್ಲ. ಧನಿಕನು ಚಿಂತಾಸಮುದ್ರದಲ್ಲಿ ಮುಳು ಗಿರಲು, ಒಬ್ಬ ಋಷಿಯು ಅವನಲ್ಲಿಗೆಬಂದು "ಎಲೈ, ಪರೋಪ ಕಾರಿಯಾದ ಒಬ್ಬ ಮಹಾಪುರುಷನು ತನ್ನ ರಕ್ತವನ್ನೀ ಕೆರೆಯ ಅಂಗಳದಲ್ಲಿ ಚೆಲ್ಲಿದ ಹೊರತು ಇಲ್ಲಿನೀರು ನಿಲ್ಲುವುದಿಲ್ಲ." ಎಂದು ಹೇಳಿದನು. ಧನಿಕನು ಮತ್ತಷ್ಟು ಚಿಂತಾಕ್ರಾಂತನಾದನು. ವಿಕ್ರಮನೀ ಸಂಗತಿಯನ್ನು ಕೇಳಿ, ತಾನೇ ಆಕೆರೆಗೆ ಬಂದು ತನ್ನ ರಕ್ತವನ್ನು ಚೆಲ್ಲಲುದ್ಯುಕ್ತನಾಗಿ ಕಠಾರಿಯನ್ನು ಒರೆ ಯಿಂದ ತೆಗೆದನು. ಆನಿಮಿಷದಲ್ಲಿಯೇ ಅಲ್ಲೊಂದುಕಡೆ ಅಕ ಸ್ಮಾತ್ತಾಗಿ ನೆಲದಿಂದ ನೀರು ಉಕ್ಕಿಹರಿಯಲಾರಂಭಿಸಿತು. "ವಿಕ್ರಮ, ನೀನೇಧೀರನು. ನೀನು ಕೆರೆಯ ಕಟ್ಟೆಯನ್ನು ಹತ್ತುವಷ್ಟರೊಳಗೆ ಕೆರೆಯು ತುಂಬಿರುವುದು." ಎಂದು ಅಶರೀರವಾಣಿಯಾಯಿತು. ಹಾಗೆಯೇ, ವಿಕ್ರಮನು ಏರಿಯನ್ನು ಹತ್ತಿ ದೃಷ್ಟಿಯನ್ನುಹಿಂದಿರುಗಿಸುವ ವೇಳೆಗೆ ತಟಾಕವು ನಿರ್ಮ ಲೋದಕದಿಂದ ಪರಿಪೂರ್ಣವಾಗಿತ್ತು. ಇಂತಹ ಪ್ರಭಾವವು ತಮ್ಮಲ್ಲೂಉಂಟೊ ?"

ಭೋಜನು ಬಾಗಿದ ತಲೆಯನ್ನು ಮೇಲಕ್ಕೆತ್ತಲಿಲ್ಲ.

ಭೋಜನಿಗೆ ವಿಕ್ರಮಾದಿತನ ವೃತ್ತಾಂತವನ್ನು ಕೇಳುವುದರಲ್ಲಿ ಆಸಕ್ತಿಯು ವಿಶೇಷವಾಯಿತು. ಸಿಂಹಾ

ಸನದ ಒಂಬತ್ತನೆಯ ಪುತ್ತಲಿಕೆಯು ಆತನೊಡನೆ ಹೀಗೆಂದಿತು.

"ಕಾಂಚೀನಗರದಲ್ಲಿ ಬಲುರೂಪವತಿಯಾದ ತರುಣಿಯೊಬ್ಬಳು. ರಾತ್ರಿಕಾಲದಲ್ಲಿ ಆಕೆಯು ನಿದ್ರೆಯಲ್ಲಿರುವಾಗ ಒಬ್ಬಾನೊಬ್ಬ ರಾಕ್ಷಸನು ಬಂದು ಆಕೆಯ ವ್ಯೈರಕ್ತವನ್ನ ಹೀರಿಹೋಗುತ್ತಿದ್ದನು. ವಿಕ್ರಮನು ಈಸಮಾಚಾರವನ್ನರಿತು, ಅಲ್ಲಿಗೆ ಹೋಗಿ, ಆರಾಕ್ಷಸನ ಸಮಯವನ್ನು ಕಾದಿದ್ದು, ಅವನು ಬಂದೊಡನೆಯೆ ಅವನನ್ನು ಕೊಂದು, ಆಕೆಯ ಪೀಡೆಯನ್ನು ತೊಲಗಿಸಿ, ಆಕೆಯನ್ನು ಅನುರೂಪನಾದ ವರನಿಗೆ ಕೊಡಿಸಿ ಮದುವೆ ಮಾಡಿಸಿ, ಅವರ ಸುಖಕ್ಕೆ ಕಾರಣನಾದನು. ಇಂತಹಸಂದರ್ಭವು ತಮ್ಮಿಂದೇನಾದರೂ ಇದ್ದರೆ ತಿಳಿಸಿರಿ."

ಭೋಜನು ಮುಖವನ್ನು ಹಿಂದಿರುಗಿಸಿದನು.

ಹತ್ತನೆಯ ಸಾಲಭಂಜಿಕೆಯು ಹೀಗೆಂದಿತು.

"ಒಬ್ಬಾನೊಬ್ಬ ಮಹಾಯೋಗಿಯು ವಿಕ್ರಮಾದಿತ್ಯನ ಬಳಿಗೆ ಬಂದು ಆತನಿಗೊಂದು ರಹಸ್ಯವಾದ ಮಂತ್ರವನ್ನು ಉಪದೇಶಿಸಿದನು. ಆತನು ಬಹುನಿಯಮದಿಂದ ಒಂದು ವರ್ಷ ಆಮಂತ್ರವನ್ನು ಜಪಿಸಿ ಹೋಮಮಾಡಲು, ಒಬ್ಬ ಪುರುಷನು ಯಜ್ಞಕುಂಡದಲ್ಲಿ ಹುಟ್ಟಿ, ಒಂದು ದಿವ್ಯವಾದ ಫಲವನ್ನು ರಾಜನಿಗಿತ್ತು "ಎಲೈ ರಾಜನೆ, ಈಹಣ್ಣನ್ನು ತಿಂದವರಿಗೆ ಮುಪ್ಪುರೋಗ ಸಾವುಗಳಿಲ್ಲವು" ಎಂದುಹೇಳಿ ಅದೃಶ್ಯನಾದನು. ಆಸಮಯಕ್ಕೆ ಸರಿಯಾಗಿ ಕುಷ್ಟರೋಗದಿಂದ ಪೀಡಿತನಾದವನೊಬ್ಬನು ರಾಜನಿದ್ದೆಡೆಗೆ ಬಂದು, ವಿಕ್ರಮನನ್ನು ಕುರಿತು "ಮಹಾರಾಜನೆ, ನೀನೇ ನಿನ್ನ ಪ್ರಜೆಗಳಿಗೆ ತಂದೆಯು, ನೀನೇತಾಯಿಯು, ನೀನೇ ಬಂಧುವು, ನೀನೇ ಆಪ್ತ ಮಿತ್ರನು, ನಮ್ಮ ಕಷ್ಟಗ

ಳನ್ನು ನೀನಲ್ಲದೆ ಮತ್ತಾರೂ ಹೋಗಲಾಡಿಸಲಾರರು. ಈಗ ನಾನು ಮಹಾ ವ್ಯಾಧಿಯಲ್ಲಿ ನರಳುತ್ತಿರುವೆನು. ನನ್ನದೇಹವು ಯಾವಕಾರ್ಯಕ್ಕೂ ಉಪಯೋಗವಿಲ್ಲದೆ ಇದೆ. ನನ್ನ ಕಷ್ಟವನ್ನ ನೀಗಲು ನೀನೊಬ್ಬನೇ ಶಕ್ತನು '' ಎಂದು ಮೊರೆಯಿಟ್ಟನು. ವಿಕ್ರಮನು ತಾನು ಸಂಪಾದಿಸಿದ್ದ ದಿವ್ಯಫಲವನ್ನು ತಡಮಾಡದೆ ಅವನಿಗೆ ಕೊಟ್ಟುಬಿಟ್ಟನು. ಭೋಜಮಹಾರಾಜರು ಹಾಗೇನಾದರೂ ಮಾಡಿರುವರೋ ? ''

ಭೋಜನು ತಲೆಬಾಗಿದನು, — ನಾಚಿಕೆಯಿಂದಲೋ ಏನೋ!

ಹನ್ನೊಂದನೆಯ ಪಾಂಚಾಲಿಕೆಯು ಹೇಳಿದುದೇನಂದರೆ

'' ಪಲಾಶ ನಗರವೆಂಬ ಊರಿನಬಳಿ ಶೈವಾಲಕವೆಂಬ ಬೆಟ್ಟವಿರುವುದು. ಅದರಲ್ಲಿ ಬಬ್ರರಾಕ್ಷಸನು ವಾಸವಾಗಿದ್ದು, ಆಊರಿನಲ್ಲಿದ್ದವರನ್ನು ಬೇಕಾದಂತೆ ಭಕ್ಷಿಸುತ್ತಿದ್ದನು. ಆಜನರು ಅವನಿಗೆ ಏನುಮಾಡುವುದಕ್ಕೂ ಶಕ್ತಿಯಿಲ್ಲದೆ, ತಮ್ಮನ್ನೆಲ್ಲರನ್ನೂ ರಾಕ್ಷಸನು ಸಿಕ್ಕಿದಂತೆ ಕೊಲ್ಲದಿರಬೇಕೆಂದೂ, ತಾವೇ ದಿನಕ್ಕೊಬ್ಬನಂತೆ ಸರದಿಯ ಮೇರೆಗೆ ಅವನ ಆಹಾರಕ್ಕಾಗಿ ಹೋಗುವಂತೆಯೂ ಅವನಿಗೆ ಹೇಳಿಕೊಂಡರು. ಅವನು ಹಾಗೆಯೇ ಒಪ್ಪಲು, ಕೆಲವುದಿನ ಹಾಗೆಯೇ ನಡೆಯಿತು:—ಒಂದೊಂದು ದಿನ ಒಂದೊಂದು ಮನೆಯವರು ಕಳುಹುತ್ತಿದ್ದರು. ಒಂದುದಿನಬಡಮುದುಕನ ಮನೆಯಸರದಿ ಬಂತು. ಆಮನೆಯಲ್ಲಿದ್ದವರು ಒಬ್ಬ ಮುದುಕ, ಅವನ ಹೆಂಡತಿ ಮುದುಕಿ,ಅವನ ಮಗ ಹುಡುಗ. ಮುದುಕನೇ ರಾಕ್ಷಸನಿಗೆ ಆಹಾರವಾಗಿಹೋದರೆ, ಮುದಕಿಯಾದ ಹೆಂಡತಿಯು ವಿಧವೆಯಾಗುವಳು. ಮುದುಕಿಯು ಹೋದರೆ ಮಗನಿಗೆ ರಕ್ಷಕರಿಲ್ಲದೆ ಹೋಗುವರು. ಮಗನು ಹೋದರೆ

ವಂಶವೇನಾಶವಾಗುವುದು. ಈ ದುಃಖದಲ್ಲಿ ಅವರು ಹಿಂದೆ ಹದಿನೈದು ದಿನಗಳಿಂದಲೂ ಗೋಳಾಡುತ್ತಿದ್ದರು. ಇದನ್ನು ವಿಕ್ರಮನರಿತು, ಯಾರಿಗೂ ಹೇಳದಂತೆ, ತಾನೇ ಗೊತ್ತಾದ ಹೊತ್ತಿಗೆ ಮುಂಚೆಯೇ ಗೊತ್ತಾದ ಸ್ಥಳಕ್ಕೆ ಹೋಗಿ ರಾಕ್ಷಸನಿಗಾಗಿ ಕಾದಿದ್ದನು. ಅವನು ಬಂದು ಈತನನ್ನು ನೋಡಿ, ಈತನ ಲಕ್ಷಣಗಳಿಂದ ಈತನಾರೋ ಮಹಾಪುರುಷನೆಂದು ಬಗೆದು,ಮಾತನಾಡಿಸಿದನು. ವಿಕ್ರಮನು ತನ್ನ ಹೆಸರನ್ನು ಹೇಳದೆ ರಾಕ್ಷಸನ ಕ್ರೂರಕರ್ಮವನ್ನು ದೂಷಿಸಿ, ನಡೆದಸಂಗತಿಯನ್ನು ವಿವರಿಸಿದನು. ರಾಕ್ಷಸನು ಈತನ ಪರೋಪಕಾರ ಬುದ್ಧಿಯಿಂದ ಮನಕರಗಿದವನಾಗಿ, ಅಲ್ಲಿಂದ ಮುಂದಕ್ಕೆ ಎಂದೆಂದಿಗೂ ಪಲಾಶನಗರದವರ ಗೋಜಿಗೇ ಹೋಗದೆ, ಯಾರಿಗೂ ಹಿಂಸೆ ಮಾಡದೆ ಇದ್ದನು.''

* * *

### ಹನ್ನೆರಡನೆಯ ಬೊಂಬೆಯು ವಿವರಿಸಿದ ಕಥೆ:—

''ಹಿಮಾಚಲದ ತಪ್ಪಲಿನಲ್ಲಿ ಒಂದು ನಗರ. ಆ ನಗರಕ್ಕೆ ಅನತಿದೂರದಲ್ಲಿ ಒಂದು ಬಿದಿರು ಮೆಳೆಗಳ ಕಾಡು. ಆ ಕಾಡಿನಮಧ್ಯಭಾಗದಿಂದ ಪ್ರತಿಅರ್ಧರಾತ್ರಿಯೂ ಆರ್ತಸ್ವರವು ಊರಿಗೆ ಕೇಳಬರುವುದು. ಆ ಸ್ವರವು ಒಬ್ಬ ಹೆಂಗಸಿನದು. ಆ ಹೆಂಗಸು ಯಾರೋ ಯಾರಿಗೂ ತಿಳಿಯದು. ಯಾರಿಗೂ ಆ ಕಾಡನ್ನು ಒಳಹೊಕ್ಕು ನಿಜಸ್ಥಿತಿಯನ್ನು ಕಂಡುಹಿಡಿಯಲು ಧೈರ್ಯವಿಲ್ಲ. ಹೀಗೆ ಕೆಲವುಕಾಲ ನಡೆದ ಮೇಲೆ, ಈ ಸಂಗತಿಯು ವಿಕ್ರಮನ ಕಿವಿಗೆ ಬಿತ್ತು ಆತನು ಕೂಡಲೆ ಉಜ್ಜಯಿನಿಯಿಂದ ಹೊರಟು ಆ ಅರಣ್ಯಮಧ್ಯವನ್ನು ಸೇರಿ, ಅರ್ಧರಾತ್ರಿಯಲ್ಲಿ ಅಲ್ಲಿ ಒಬ್ಬ ಹೆಂಗಸನ್ನು ಒಬ್ಬ ರಾಕ್ಷಸನು ಹಿಂಸಿಸುತ್ತಿದ್ದುದ ಕಂಡು, ಆ ರಾಕ್ಷಸನನ್ನು ಕೊಂದನು ದೀನಸ್ವರದಿಂದ ಗೋಳಿಡುತ್ತಿದ್ದ ಆಹೆಂ

ಗಸು ರಾಕ್ಷಸಸಂಹಾರದಿಂದ ಸಂತೋಷಿಸಿ,ತನ್ನವೃತ್ತಾಂತವನ್ನು ರಾಜನಿಗೆ ತಿಳಿಸಿದಳು:"ನಾನು ನನ್ನ ಪತಿಯನ್ನುಪ್ರೀತಿಸದೆ ಆತನ ಇಷ್ಟಕ್ಕೆ ವಿರೋಧವಾಗಿ ನಡೆಯುತ್ತಿದ್ದ ಕಾರಣ,ಆತನು ಸಾಯುವಕಾಲದಲ್ಲಿ ನನ್ನನ್ನು ಈ ವನದಲ್ಲಿ ರಾಕ್ಷಸನ ಬಾಧೆಗೆ ಗುರಿಯಾಗುವಂತೆ ಶಪಿಸಿದನು. ಆಗ ನಾನು ಭಯಪಟ್ಟು ಆತನ ಪಾದಗಳಿಗೆರಗಿ ಮನ್ನಣೆಯನ್ನ ಬೇಡಿದೆನು. ಆತನು ಒಬ್ಬ ಮಹಾ ಪುರುಷನಿಂದ ನನಗೆ ಶಾಪವಿಮೋಚನೆ ಯಾದಿ ತಂದು ಹೇಳಿದನು. ಈಗ ನೀನು ರಾಕ್ಷಸಭಯದಿಂದ ನನ್ನನ್ನು ತಪ್ಪಿಸಿದೆ. ನೀನು ಮಹಾಪುರುಷನೇ ಸರಿ ಇನ್ನು ನಾನು ಈ ಹಾಳು ದೇಹವನ್ನು ಬಿಡುವೆನು. ನನ್ನಲ್ಲಿಚಿನ್ನದಿಂದ ತುಂಬಿದ ಒಂಭತ್ತು ದೊಡ್ಡ ಕೊಪ್ಪರಿಗೆಗಳಿವೆ. ಅದನ್ನು ನೀನೇ ದಯೆಯಿಂದ ಸ್ವೀಕರಿಸು " ಎಂದು ಅವಳು ಹೇಳುತ್ತಾ ಹರಣವನ್ನು ಬಿಟ್ಟಳು. ವಿಕ್ರಮನು ವಿಸ್ಮಿತನಾಗಿ, ಆ ಹೊನ್ನನ್ನೆಲ್ಲಾ ಧರ್ಮಕಾರ್ಯಗಳಿಗೆ ವಿನಿಯೋಗಿಸಿ, ಉಜ್ಜಯಿನಿಗೆ ಹಿಂದಿರುಗಿದನು "

ಈ ಕಥೆಯನ್ನುಕೇಳಿ ಭೋಜನು ಅಂತಃಪುರಕ್ಕೆ ಹಿಂದಿರುಗಿದನು.

* * *

ಹದಿಮೂರನೆಯ ಪುತ್ಥಳಿಯು ಭೋಜನೊಡನೆ ಹೀಗೆಂದಿತು; —

"ಒಂದಾನೊಂದು ಸಲ ವಿಕ್ರಮರಾಜನು ತನ್ನರಾಜ್ಯದ ನಿಜಸ್ಥಿತಿಯನ್ನರಿಯಲು ವೇಷಧಾರಿಯಾಗಿ ದೇಶಸಂಚಾರ ಮಾಡುತ್ತಿದ್ದಾಗ, ಒಂದೂರಿನಲ್ಲಿ ಒಂದು ನದೀತೀರದಲ್ಲಿ ಕೆಲವು ಜನರು ಸೇ

ರಿ ಪುರಾಣ ಶ್ರವಣ ಮಾಡುತ್ತಿದ್ದರು. ವಿಕ್ರಮನು ಅದನ್ನು ಕಂಡು ತಾನೂ ಅಲ್ಲಿ ಕುಳಿತನು. ಪೌರಾಣಿಕನು ಈ ಮನುಷ್ಯದೇಹವು ಅಶಾಶ್ವತವೆಂದೂ, ಈದೇಹವನ್ನು ಪರೋಪಕಾರಕ್ಕಾಗಿ ವಿನಿಯೋಗಿಸಬೇಕೆಂದೂ ಮಂತಾಗಿ ಹೇಳುತ್ತಿದ್ದನು. ಆ ಹೊತ್ತಿಗೆ ಸರಿಯಾಗಿ ನದೀಮಧ್ಯದಿಂದ "ಅಯ್ಯಾ ಪುಣ್ಯಾತ್ಮರೇ, ನಾನು ಮುದಿಬ್ರಾಹ್ಮಣ, ನನ್ನ ಹೆಂಡತಿಮುದುಕಿ, ನಾವಿಬ್ಬರೂ ನದಿಯಲ್ಲಿ ಮುಳುಗಿ ಹೋಗುತ್ತಿದ್ದೇವೆ. ಯಾರಾದರೂ ಬಂದು ನಮ್ಮನ್ನು ಗಡ್ಡೆಗೆಹಾಕಿರಿ" ಎಂಬ ವಾಕ್ಯಗಳು ಕೇಳ ಬಂದವು. ಕುತೂಹಲದಿಂದ ಪರೋಪಕಾರ ಮಹಿಮೆಯನ್ನು ಕೇಳುತ್ತಿದ್ದವರಾರೂ ಮೇಲಕ್ಕೇ ಏಳಲಿಲ್ಲ ವಿಕ್ರಮನು ತಡಮಾಡದೆ ನದಿಯೊಳಕ್ಕೆ ಧುಮ್ಮಿಕ್ಕಿ, ಅವರಿಬ್ಬರನ್ನೂ ತೀರಕ್ಕೆ ತಂದನು. ಕೃತಜ್ಞನಾದ ಬ್ರಾಹ್ಮಣನು ವಿಕ್ರಮನ ಉಪಕಾರವನ್ನು ವಿಶೇಷವಾಗಿ ಸ್ತುತಿಸಿ, ತಾನು ಅನೇಕ ವರ್ಷಗಳು ವೇದಶಾಸ್ತ್ರಾಧ್ಯಯನವನ್ನೂ ಯಜ್ಞ ದಾನತಪಸ್ಸುಗಳನ್ನೂ ಮಾಡಿ ಸಂಪಾದಿಸಿದ ಪುಣ್ಯವನ್ನು ವಿಕ್ರಮನಿಗೆ ಧಾರೆಯೆರೆದನು. ಆ ವೇಳೆಗೆ ಅಲ್ಲಿಗೊಬ್ಬ ಬ್ರಹ್ಮರಾಕ್ಷಸನು ಬಂದು ವಿಕ್ರಮನನ್ನು ಕುರಿತು "ಅಯ್ಯಾ ಮಹಾಪುರುಷನೆ, ವಿದ್ಯಾಗರ್ವವು ನನ್ನಲ್ಲಿ ವಿಶೇಷವಾಗಿದ್ದ ಕಾರಣ ಬ್ರಾಹ್ಮಣನಾದ ನಾನು ರಾಕ್ಷಸನಾದೆ. ನೀನು ಪರೋಪಕಾರಿಯಾದ ಕಾರಣ, ಈಗ ನಿನಗೀಬ್ರಾಹ್ಮಣನಿಂದ ಬಂದಿರುವ ಪುಣ್ಯವನ್ನು ನನಗೆ ಕೊಡು. ಅದರಿಂದ ನನ್ನರಾಕ್ಷಸತ್ವವು ಹೋಗುವುದು" ಎಂದು ಕೇಳಿದನು. ವಿಕ್ರಮನು ಹಾಗೆಯೇ ಮಾಡಿದನು. ಆಗ ಅವನು ನಿಜರೂಪಕ್ಕೆ ಬಂದು ವಿಕ್ರಮನನ್ನು ಕೊಂಡಾಡಿದನು."

ಇದನ್ನು ಕೇಳಿದಮೇಲೆ ಭೋಜನು ಅಲ್ಲಿಸಿಲ್ಲಲಿಲ್ಲ.

* * *

## ಹದಿನಾಲ್ಕನೆಯ ಸಾಲಭಂಜಿಕೆಯು ಹೇಳಿದವೃತ್ತಾಂತ.

"ಒಂದು ಸಂದರ್ಭದಲ್ಲಿ ಒಬ್ಬ ಯೋಗೀಶ್ವರನು ವಿಕ್ರಮರಾಜನಿಗೆ ಒಂದು ಶಿವಲಿಂಗವನ್ನು ಕೊಟ್ಟು "ಇದನ್ನು ಭಕ್ತಿಯಿಂದ ಪೂಜಿಸು. ನಿನಗೆ ಬೇಕಾದ ವಸ್ತುಗಳೆಲ್ಲವನ್ನೂ ಇದುಕೊಡುವುದು'' ಎಂದು ಹೇಳಿದನು. ರಾಜನು ಅದನ್ನು ಸ್ವೀಕರಿಸಿದ ಕೆಲವು ಕಾಲದಮೇಲೆ ಒಬ್ಬ ಬ್ರಾಹ್ಮಣನು ಆತನಲ್ಲಿಗೆ ಬಂದು "ಅಯ್ಯಾ, ನಾಲ್ಕೈದುದಿನಗಳ ಕೆಳಗೆ ಯಾರೋ ನನ್ನ ಇಷ್ಟದೇವತಾಮೂರ್ತಿಯಾದ ಶಿವಲಿಂಗವನ್ನು ಅಪಹರಿಸಿದರು. ಆಗಿನಿಂದಲೂ ನಾನು ಉಪವಾಸವಾಗಿದ್ದೇನೆ. ''ಎಂದನು. ಕೂಡಲೆ ವಿಕ್ರಮನು ತನ್ನಲ್ಲಿದ್ದ ಈಶ್ವರಲಿಂಗವನ್ನು ಆತನಿಗೆ ಕೊಟ್ಟುಬಿಟ್ಟನು''.

ಭೋಜನು ಮನಸ್ಸಿನಲ್ಲಿ "ವಿಕ್ರಮನೆಲ್ಲಿ ನಾನೆಲ್ಲಿ"

ಎಂದು ಅಂದುಕೊಂಡು ಹಿಂದಿರುಗಿದನು.

* * *

## ಹದಿನೈದನೆಯ ಪ್ರತಿಮೆಯು ಕಥಿಸಿದ ಬಗೆ:—

"ಒಂದು ನಗರದಲ್ಲಿ' ಒಬ್ಬ ಪ್ರಾಯದ ಹೆಂಗಸು ರಾಜ್ಯಭಾರ ಮಾಡುತ್ತಿದ್ದಳು. ಆಕೆಗಿನ್ನೂ ಮದುವೆಯಾಗಿರಲಿಲ್ಲ. ಆಕೆಯು ಚೆಲ್ವಿಕೆಗೆ ತಾರುಮನೆಯೆಂದು ಎಲ್ಲರೂ ಹೇಳುತ್ತಿದ್ದರು. ಆಕೆಯು ಒಂದು ದೊಡ್ಡ ಕಬ್ಬಿಣದ ಕೊಪ್ಪರಿಗೆಯಲ್ಲಿ ಎಣ್ಣೆಯನ್ನು ಕಾಸಿಸಿ, ಯಾರು ಅದರೊಳಕ್ಕೆ ಧೈರ್ಯದಿಂದ ಬೀಳುವನೋ ಅವನನ್ನೇ ತಾನು ಮದುವೆಯಾಗುವುದಾಗಿ ಸಾರುತ್ತಿದ್ದಳು. ಈವರ್ತಮಾನವು ವಿಕ್ರಮನಿಗೆ ತಿಳಿಯಿತು, ಆತನು ಬಂದು ಆಕೆಯ ಮಾತಿನಂತೆ ಕಾದೆಣ್ಣೆಯ ಕಟಾಹದೊಳಕ್ಕೆಬಿದ್ದನು. ಅರೆಗಳಿಗೆಯೊಳಗಾಗಿ ಆತನ ದೇಹವೆಲ್ಲವೂ ಬೆಂದು ಮಾಂಸದ ಮುದ್ದೆಯಾ

ಂತು. ಆಗ ಕ್ರೂರಹೃದಯಳಾದ ಆ ಸ್ತ್ರೀಯು ಆ ಮುದ್ದೆಯ
ನ್ನು ಈಚೆಗೆ ತೆಗೆದು, ಅದರ ಮೇಲೆ ಯಾವುದೋ ನೀರನ್ನು ಚೆ
ದಳು. ಕೂಡಲೆ ವಿಕ್ರಮನು ತನ್ನ ಹಿಂದಿನ ಮನೋಹರ ರೂಪ
ಲ್ಲಿ ನಿಂತನು. ಆಕೆಯು ಆತನ ಧೈರ್ಯವನ್ನು ಕೊಂಡಾಡಿ, ಆತ
ಕೊರಳಲ್ಲಿ ಹೂಸರವನ್ನು ಹಾಕಲು ಬಂದಳು. ವಿಕ್ರಮನು
ಕೈಯನ್ನು ತಡೆದು, ತಾನು ಏಕಪತ್ನೀ ವ್ರತಸ್ಥನೆಂದು ಹೇಳಿ,
ಕೆಗೆತಕ್ಕವರನನ್ನು ತೋರಿಕೊಟ್ಟನು. ಆಕೆಯು ಆತನ ಮಾ
ಗೆಬಡಂಬಟ್ಟಳು. ವಿಕ್ರಮನು ಉಜ್ಜಯಿನಿಗೆ ಬಂದನು''

ಭೋಜನು ಅಂತಃಪುರಕ್ಕೆ ಹೋದನು.

*　　　*　　　*

## ಹದಿನಾರನೆಯ ಸಾಲಭಂಜಿಕೆಯು ಹೇಳಿದುದೆಂತೆಂದರೆ:—

ಒಂದು ದಿನ ಒಬ್ಬ ಬ್ರಾಹ್ಮಣನು ವಿಕ್ರಮಾರ್ಕ ಮಹಾರಾಜ
ಬಳಿಗೆ ಬಂದು ಈರೀತಿ ಪ್ರಾರ್ಥಿಸಿದನು: "ಪ್ರಭುವೇ, ನನಗೆ
ಂಟುಮಂದಿ ಗಂಡುಮಕ್ಕಳು, ಹೆಣ್ಣುಮಗು ಮಾತ್ರ ಬಹು
ಂಲದವರೆಗೂ ಆಗಲಿಲ್ಲ. ಆಗ, ನನಗೊಬ್ಬ ಮಗಳಾದರೆ ಅವಳಿಗೆ
ಜಗದಂಬೆ'' ಯೆಂದು ಹಸರಿಟ್ಟು, ಅವಳಷ್ಟು ಭಾರ ಹೊನ್ನಿನೊ
ನೆ ಅವಳನ್ನು ನಾಲ್ಕು ವೇದಗಳನ್ನರಿತ ವಿಪ್ರನಿಗೆ ಕೊಟ್ಟು ಮ
ಮಾಡುವೆನೆಂದು ಶ್ರೀಜಗದಂಬೆಗೆ ಹರಸಿಕೊಂಡೆನು. ಅ
ಂತರ ನನಗೊಬ್ಬ ಪುತ್ರಿಯು ಹುಟ್ಟಿದಳು. ಈಗ ಅವಳಿಗೆ ವಿ
ಂಹಕಾಲವು ಸಮೀಪಿಸಿದೆ. ಆದರ ನನ್ನ ಹರಕೆಯನ್ನು ಸಲ್ಲಿಸ
ಸಾಮರ್ಥ್ಯವಿಲ್ಲ. ಅದನ್ನು ನೀವಲ್ಲದೆ ಮತ್ತಾರು ಕೊಡಬಲ್ಲ
?'' ಎಂದನು. ವಿಕ್ರಮನು ಅವನಿಗೆ ಬೇಕಾದಷ್ಟು ಚಿನ್ನವ
ನ್ನು ಆಗಲೇ ಕೊಡಿಸಿದನು

ಭೋಜನು ಅಚ್ಚರಿಯಿಂದ ತಲೆದೂಗಿದನು.

ಹದಿನೇಳನೆಯ ಪ್ರತಿಮೆಯು ಈ ಕೆಳಗಣ ಕಥೆಯನ್ನು ವಿಸ್ತರಿಸಿತು.—

"ಒಬ್ಬ ರಾಜನು ವಿಕ್ರಮನಿಗಿಂತಲೂ ಐಶ್ವರ್ಯಶಾಲಿಯಾಗ ಬೇಕೆಂದೂ, ಅದರಿಂದ ಪರೋಪಕಾರಮಾಡಿ ವಿಕ್ರಮನಿಗಿಂತಲೂ ಕೀರ್ತಿಶಾಲಿಯಾಗಬೇಕೆಂದೂ ಬಯಸಿ, ಒಬ್ಬ ದೇವತೆಯನ್ನು ಉಪಾಸನೆಮಾಡುತ್ತಿದ್ದನು. ಎಷ್ಟು ದಿನವಾದರೂ ಅವನ ಕೋರಿಕೆಯು ಕೈಗೂಡಲಿಲ್ಲ. ವಿಕ್ರಮನು ಇದನ್ನರಿತು ಪಶ್ಚಾತ್ತಾಪಗೊಂಡು ಆ ರಾಜನಿದ್ದೆಡೆಗೆ ಬಂದು, ತಾನೇ ಆ ದೇವತೆಗೆ ಆಹುತಿಯಾಗಿ ಅಗ್ನಿಕುಂಡದೊಳಕ್ಕೆ ಇಳಿದನು ಕೂಡಲೆ ದೇವಿಯು ಕಣ್ಣಿದಿರಿಗೆ ಬಂದು, "ಎಲೈ, ಮಹಾಪುರುಷನೆ, ನಿನಗೇನು ಬೇಕು?" ಎಂದಳು. ವಿಕ್ರಮನು "ತಾಯಿ, ಈ ರಾಜನಿಗೆ ಪ್ರತಿನಿತ್ಯವೂ ಏಳು ಕೊಪ್ಪರಿಗೆಯಷ್ಟು ಧನವನ್ನು ಅನುಗ್ರಹಿಸು," ಎಂದು ಬೇಡಿದನು. ದೇವಿಯು ಅದಕ್ಕೆ ಸಮ್ಮತಿಸಿ, ವಿಕ್ರಮನನ್ನು ಆಶೀರ್ವದಿಸಿ ಅಂತರ್ಧಾನವಾದಳು."

ಭೋಜನು ಆ ಸ್ಥಳದಿಂದ ತೆರಳಿದನು.

* * *

ಹದಿನೆಂಟನೆಯ ಸಾರಿ ಭೋಜನು ವಿಕ್ರಮಪೀಠದ ಬಳಿ ಸೇರಲು ಮತ್ತೊಂದು ಸಾಲಭಂಜಿಕೆಯು ಹೀಗೆಂದಿತು:—

"ವಿಕ್ರಮರಾಜನು ಒಂದಾವರ್ತಿ ಒಬ್ಬ ದೇಶಸಂಚಾರಿಯನ್ನು ಕಂಡು, ಅವನು ನೋಡಿದ ವಿಶೇಷಗಳೇನೆಂದು ಕೇಳಿದನು. ಅವನು ಹೀಗೆ ಬಿನ್ನಯಿಸಿದನು: "ಉದಯ ಪರ್ವತದಲ್ಲಿ ಸೂರ್ಯನ ಅರಮನೆಯಿದೆ. ಅದರ ಪಕ್ಕದಲ್ಲಿ ದೇವಗಂಗಾನದಿಯು ಹರಿಯು

ತಲಿದೆ. ಸೂರ್ಯನು ತನ್ನ ಮನೆಯಿಂದ ಹೊರಗೆ ಹೊರಡುವವೇಳೆಗೆ ಸರಿಯಾಗಿ ಗಂಗಾನದಿಯಲ್ಲಿ ಒಂದು ಚಿನ್ನದ ಕಂಬವು ಉತ್ಪತ್ತಿಯಾಗುವುದು. ಅದರ ಮೇಲುಗಡೆ ಒಂದು ನವರತ್ನ ಖಚಿತ ಸಿಂಹಾಸನವಿರುವುದು. ಸೂರ್ಯನು ಮೇಲೆ ಹೋದಹಾಗೆಲ್ಲಾ ಕಂಬವೂ ಬೆಳೆದು ಸೂರ್ಯಮಂಡಲವನ್ನು ಸೇರುವುದು. ಆಮೇಲೆ ಸೂರ್ಯನು ಇಳಿದ ಹಾಗೆಲ್ಲಾ ಕಂಬವೂ ಇಳಿದು, ಸೂರ್ಯಾಸ್ತಮಯವಾಗುತಲೆ ಅದು ನದಿಯಲ್ಲಿ ಮುಳುಗಿ ಹೋಗುವುದು. ನಾನು ನೋಡಿರುವುದರಲ್ಲೆಲ್ಲಾ ಇದೇ ಪರಮಾಶ್ಚರ್ಯವು." ಈ ಮಾತನ್ನು ಕೇಳಿದ ವಿಕ್ರಮನು ತತ್‌ಕ್ಷಣವೇ ಹೊರಟು ಉದಯಾದ್ರಿಯನ್ನು ಸೇರಿ, ಸೂರ್ಯೋದಯಸಮಯವನ್ನು ಕಾದಿದ್ದು ಕಂಬವು ಕಾಣಿಸಿಕೊಂಡ ಕೂಡಲೆ ಅದನ್ನು ಹಿಡಿದು, ಅದರ ಮೇಲಿನ ಸಿಂಹಪೀಠದ ಮೇಲೆ ಕುಳಿತನು. ಕಂಬವು ಮೇಲು ಮೇಲಕ್ಕೆ ಹೋದಹಾಗೆಲ್ಲಾ ಸೂರ್ಯನ ತಾಪವು ಹೆಚ್ಚಾಯಿತು. ಮಧ್ಯಾಹ್ನದ ವೇಳೆಗೆ ಆತನ ಶರೀರವು ಸುಟ್ಟು ಇದ್ದಲಿನಂತೆ ಆಗಿತ್ತು. ಸೂರ್ಯನು ಅದನ್ನು ಕಂಡು, ಅವನಾರೋ ಮಹಾಧೀರನೇ ಎಂದು ನಿಶ್ಚಯಿಸಿ, ಆ ಶರೀರದ ಮೇಲೆ ಅಮೃತದ ಮಳೆಯನ್ನು ಸುರಿಸಿದನು. ಕೂಡಲೆ ವಿಕ್ರಮನು ಚೇತರಿಸಿಕೊಂಡು ಭಗವಂತನಾದ ಆದಿತ್ಯನನ್ನು ಬಹುವಾಗಿ ಸ್ತೋತ್ರಮಾಡಿದನು ಕರ್ಮಸಾಕ್ಷಿಯಾದ ರವಿಯು ವಿಕ್ರಮನಮನೋದಾರ್ಢ್ಯವನ್ನು ಕೊಂಡಾಡಿ, ಆತನಿಗೆ ಎರಡು ರತ್ನ ಕುಂಡಲಗಳನ್ನು ಕೊಟ್ಟು, ಅವು ದಿನಕ್ಕೆ ಎಂಭತ್ತುಮಣ ಸುವರ್ಣವನ್ನು ಕೊಡತಕ್ಕವೆಂದು ಹೇಳಿದನು. ರಾಜನು ಅದನ್ನು ಪಡೆದು ಹಿಂದಿರುಗಿದನು. ದಾರಿಯಲ್ಲಿ ಒಬ್ಬ ದರಿದ್ರನು ವಿಕ್ರಮನಲ್ಲಿಗೆ ಬಂದು, ತನ್ನದು ಬಲುದೊಡ್ಡ ಸಂಸಾರವೆಂದೂ, ತಾನು ತುಂಬಾ ಬಡವನೆಂದೂ ಹೇಳಿಕೊಂ

ಡನು. ರಾಜನು ಸೂರ್ಯದತ್ತವಾದ ಕರ್ಣಾಭರಣಗಳನ್ನು ಅವನಿಗೆ ಕೊಟ್ಟು ಬಿಟ್ಟನು.''

ಭೋಜನು ನಾಚಿಕೆಯಿಂದ ಆ ಸ್ಥಳವನ್ನು ಬಿಟ್ಟನು.

*　　*　　*

## ಹತ್ತೊಂಬತ್ತನೆಯ ಸಾಲಭಂಜಿಕೆಯು ಹೇಳಿದ ಉಪಾಖ್ಯಾನ;—

''ವಿಕ್ರಮರಾಜನು ಒಂದಾವರ್ತಿ ಒಡ್ಡೋಲಗದಲ್ಲಿರಲು, ಒಬ್ಬ ವನಪಾಲಕನು ಬಂದು, ಒಂದು ಕಾಡಹಂದಿಯಿಂದ ಜನಗಳಿಗೂ, ದನಗಳಿಗೂ, ಬೆಳೆಗಳಿಗೂ ಹಾನಿಯಾಗಿರುವುದೆಂದು ಅರಿಕೆ ಮಾಡಿದನು. ರಾಜನು ಅದನ್ನು ಧ್ವಂಸಮಾಡಲೆಣಿಸಿ, ಬೇಟೆಗೆ ಹೊರಟು, ಆ ಮೃಗವನ್ನಟ್ಟಿಕೊಂಡು ಹೋದನು. ಕಡೆಗೆ ಅದು ಒಂದು ದೊಡ್ಡಬಿಲವನ್ನು ಹೊಕ್ಕಿತು. ವಿಕ್ರಮನು ಹಿಂಬಾಲಿಸಿಹೋದನು. ಬಹುದೂರ ನೆಲದೊಳಗೆ ಹೋಗಲಾಗಿ ಮಹಾಪ್ರಕಾಶವೊಂದು ಕಾಣಬಂದಿತು. ಹಾಗೆಯೇ ಹೋಗಲು ವಿಕ್ರಮನು ಪಾತಾಳರಾಜ್ಯವನ್ನು ಸೇರಿದನು. ಅಲ್ಲಿ ಬಲಿಚಕ್ರವರ್ತಿಯು ಆಳುತ್ತಿದ್ದನು. ವಿಕ್ರಮನು ಆತನ ದರ್ಶನವನ್ನು ತೆಗೆದುಕೊಂಡನು. ಬಲಿಯು ವಿಕ್ರಮನನ್ನು ಸನ್ಮಾನಿಸಿ, ಸ್ನೇಹಿತನನ್ನಾಗಿ ಮಾಡಿಕೊಂಡು, ಒಂದು ರಸವನ್ನೂ ಒಂದು ರಸಾಯನವನ್ನೂ ಬಹುಮಾನವಾಗಿ ಕೊಟ್ಟು, ಕಳುಹಿಸಿ ಕೊಟ್ಟನು. ವಿಕ್ರಮನು ಬರುತ್ತಿರುವಾಗ ದಾರಿಯಲ್ಲಿ ಒಬ್ಬ ಬಡವನು ಬಂದು ಧನವನ್ನು ಯಾಚಿಸಲು, ಆ ತ್ಯಾಗಿಯು ''ನನ್ನಲ್ಲಿ ಈಗ ಧನವಿಲ್ಲ. ಈ ರಸವನ್ನು ನೀನು ಯಾವುದಕ್ಕೆ ಸೋಕಿಸಿದರೆ ಅದು ಹೊನ್ನಾಗುವುದು, ಈ ರಸಾಯನವನ್ನು ಭುಜಿಸಿದರೆ ಮುಪ್ಪುಸಾವುರೋ

ಗ ಹಸಿವುಗಳಿಲ್ಲದೆ ಇರುವುದು" ಎಂದು ಹೇಳಿ, ಬಲಿಯು ಕೊಟ್ಟಿದ್ದ ವಸ್ತುಗಳನ್ನು ಅವನಿಗೆ ಕೊಟ್ಟನು. ಹೇ ರಾಜನೆ, ಈ ವಿಷಯದಲ್ಲಿ ನೀನೇನ ಹೇಳುವೆ ?"

ಭೋಜನು ಏನೂ ಹೇಳಲಿಲ್ಲ.

* * *

## ಇಪ್ಪತ್ತನೆಯ ಪ್ರತಿಮೆಯು ಹೇಳಿದ ವಾರ್ತೆ:—

"ಒಂದಾವರ್ತಿ, ವಿಕ್ರಮನು ದೇಶಾಟನ ಮಾಡುತ್ತಿರುವಾಗ ಕೆಲವು ಮಂದಿ ವಿದೇಶಿಗಳಿಂದ ತ್ರಿಕಾಲನಾಥನೆಂಬ ಮಹಾಯೋಗಿಯ ವಿಷಯವನ್ನು ಕೇಳಿದನು. ಆತನ ದರ್ಶನವನ್ನು ಅಪೇಕ್ಷಿಸಿ, ಕೂಡಲೇ ಅಲ್ಲಿಂದ ಪ್ರಯಾಣಮಾಡಿ, ಹನ್ನೆರಡು ಯೋಜನಗಳನ್ನು ನಡೆದು, ಘೋರವಾದ, ಜನರೆಂದೂ ತಿರುಗದ ಅರಣ್ಯದ ಮಧ್ಯವನ್ನು ಮುಟ್ಟಿ, ಅಲ್ಲಿದ್ದ ಕಡಿದಾದ ಬೆಟ್ಟವನ್ನು ಹತ್ತಿ, ದಾರಿಯಲ್ಲಿ ಭಯಂಕರವಾದ ಹಾವಿನಿಂದ ಕಚ್ಚಲ್ಪಟ್ಟವನಾಗಿ, ಕಡೆಗೆ ಆ ಯೋಗಿಯನ್ನು ಕಂಡು ನಮಸ್ಕರಿಸಿದನು. ಆತನು ವಿಕ್ರಮನ ಭಕ್ತಿಗೂ, ದೃಢಭಾವಕ್ಕೂ ಮೆಚ್ಚಿ, ಒಂದು ಗುಳಿಗೆಯನ್ನೂ ಒಂದು ಕಟ್ಟಿಗೆಯನ್ನೂ, ಒಂದು ಬೊಂತೆಯನ್ನೂ ವಿಕ್ರಮನಿಗೆ ಕೊಟ್ಟು, ಅವುಗಳ ಗುಣಗಳನ್ನು ವಿವರಿಸಿ, ಆಶೀರ್ವದಿಸಿ ಕಳುಹಿದನು. ರಾಜನು ಹಿಂದಕ್ಕೆ ಬರುವಾಗ, ರಾಜ್ಯವನ್ನ ಕಳೆದುಕೊಂಡು, ಆತ್ಮಹತ್ಯಮಾಡಿಕೊಳ್ಳಬೇಕೆಂದು ತೀರ್ಮಾನಿಸಿದ್ದ ಒಬ್ಬ ರಾಜಪುತ್ರನನ್ನು ಕಂಡು, ಆ ಗುಳಿಗೆಯನ್ನೂ, ಕೋಲನ್ನೂ, ಬೊಂತೆಯನ್ನೂ ಅವನಿಗೆ ಕೊಟ್ಟು, "ಎಲೈ, ಈ ಮಾತ್ರೆಯಿಂದ ಭೂಮಿಯ ಮೇಲೆ ಎಷ್ಟು ಸಲ ಗೀಚಿದರೆ ಅಷ್ಟು ಯೋಜನಗಳನ್ನು ಒಂದು ನಿಮಿಷದಲ್ಲಿ ದಾಟುವಿ. ಈ ದಂಡವನ್ನು ಎಡಗೈಲಿ ಹಿಡಿದರೆ ನಿನ್ನ ಸ್ವಂತ ಸೈನ್ಯವೆಲ್ಲವೂ ಬದುಕುವುದು ; ಬಲಗೈಲಿ ಹಿಡಿದರೆ ಶತ್ರುಸೈನ್ಯವು ನಾಶವಾಗುವುದು. ಈ ಕಂತೆಯು ನಿನಗೆ

ಬೇಕಾದುದನ್ನು ಕೊಡಬಲ್ಲುದು,ಇದನ್ನು ಹೊದ್ದರೆ ನಿನಗೆ ಬೇಕಾದರೂಪವು ಬರುವುದು. ಇವುಗಳ ಸಹಾಯದಿಂದ ನಿನ್ನರಾಜ್ಯವನ್ನುನೀನು ಪಡೆಯುವಿ'' ಎಂದು ಹೇಳಿ, ಉಜ್ಜಯಿನಿಗೆ ಬಂದನು. ಆರಾಜಕುಮಾರನು ರಾಜ್ಯಸಂಪಾದನೆ ಮಾಡಿ, ವಿಕ್ರಮನಿಗೆ ಕೃತಜ್ಞನೂ, ಸಾಮಂತ ರಾಜನೂ ಆಗಿದ್ದನು.''

ಭೋಜನು ಹಿಂದಿನಂತೆಯೇ ನಿರುತ್ತರನಾಗಿದ್ದನು.

* * *

## ಇಪ್ಪತ್ತೊಂದನೆಯ ಸಾಲ ಭಂಜಿಕೆಯು ಹೇಳಿದ ಚರಿತ್ರೆ:—

"ಒಂದು ಮಹಾರಣ್ಯದ ನಡುವೆ ಒಂದು ದೇವತಾಲಯವಿರುವುದು. ಅದರ ಮುಂದೆ ಒಂದು ಸರೋವರವಿರುವುದು. ಅದರಲ್ಲಿ ಒಂದು ಕಡೆಯ ನೀರು ಯಾವಾಗಲೂ ಬೆಚ್ಚಗಿರುವುದು. ಆಭಾಗದಿಂದ ಪ್ರತಿರಾತ್ರಿಯೂ ಎಂಟು ಮಂದಿಹೆಂಗಸರು ಹೊರಟುಬಂದು, ಸೂರ್ಯೋದಯದವರೆಗೂ ಆದೇವತಾಲಯದಲ್ಲಿ ಪೂಜಿಸುತ್ತಿರುವರು. ಈ ಸಮಾಚಾರವನ್ನು ವಿಕ್ರಮನು ಕೇಳಿ, ಆ ಸ್ಥಳಕ್ಕೆ ಬಂದು,ಆಸ್ತ್ರೀಯರು ದೇವತಾಲಯದಿಂದ ಹಿಂದಿರುಗುವವೇಳೆಯನ್ನು ಕಾದಿದ್ದು, ಅವರಿಗೆ ಕಾಣಿಸಿಕೊಂಡನು. ಅವರಲ್ಲೊಬ್ಬಾಕೆಯು ಆತನನ್ನು ಬಾರೆಂದು ಕರೆಯಲು, ಆತನು ಅವರಹಿಂದೆ ಹೋಗಿ ನಾಗಲೋಕವನ್ನು ಸೇರಿದನು. ಅವರು ಅಲ್ಲಿ ಆತನನ್ನು ಉಪಚರಿಸಿ, ವಿಚಾರಿಸಿ, ತಾವು ಅಷ್ಟ ಸಿದ್ಧಿಯರೆಂದು ತಿಳಿಸಿ, ಎಂಟು ರತ್ನಗಳನ್ನು ಆತನಿಗೆ ಕೊಟ್ಟರು. ಆತನು ಅವುಗಳೊಡನೆ ತನ್ನೂರಿಗೆ ಬರುತ್ತಿರುವಾಗ ಯಾಚಕನೊಬ್ಬನು ಇದಿರು ಬೀಳಲು, ಅವುಗಳನ್ನವನಿಗೆ ದಾನಮಾಡಿ ಬಿಟ್ಟನು.''

ಭೋಜನು ವಿಕ್ರಮನ ಈ ವಿಚಿತ್ರ ಚರ್ಯೆಗಳನ್ನು ಕುರಿತು ಚಿಂತಿಸುತ್ತಿದ್ದನು.

## ಇಪ್ಪತ್ತೆರಡನೆಯ ಸಾಲಭಂಜಿಕೆಯು ಕೀರ್ತಿಸಿದ ರೀತಿಯು ಹೇಗೆಂದರೆ;—

"ಒಂದು ಸಾರಿ ವಿಕ್ರಮರಾಜನು ಕೃಶನೂ ಚಿಂತಾಕ್ರಾಂತನೂ ಆಗಿದ್ದ ಒಬ್ಬ ಪುರುಷನನ್ನು ಕಾಣಲು, ಅವನ ಅವಸ್ಥೆಗೆ ಕಾರಣವೇನೆಂದು ಪ್ರಶ್ನಿಸಿದನು. ಅವನು "ಎಲೈ, ನೀನು ಯಾರೋ ಮಹನೀಯನಂತೆ ಕಾಣುವಿ. ಇಲ್ಲಿಗೆ ಕೊಂಚದೂರದಲ್ಲಿ ನೀಲಪರ್ವತವಿರುವುದು, ಅದರ ತುದಿಯಲ್ಲಿ ಒಂದು ಗವಿಯಿದೆ, ಅದರ ನಡುವೆ ಶ್ರೀಕಾಮಾಕ್ಷೀದೇವಿಯ ಮೂರ್ತಿಯಿದೆ, ಅದರ ಹಿಂಭಾಗದಲ್ಲಿ ಇನ್ನೊಂದು ಗುಹೆಯಿದೆ, ಅದರ ಬಾಗಲು ಮುಚ್ಚಿಟ್ಟಿದೆ, ಅದರ ಒಳಗಡೆ ಒಂದು ಬಗೆಯರಸದ ಮಡಕೆಯಿದೆ ಆ ರಸವು ಯಾವವಸ್ತುವಿಗೆ ತಗುಲವುದೋ ಆವಸ್ತುವು ಚಿನ್ನವಾಗುವುದು. ಆ ರಸವನ್ನಪೇಕ್ಷಿಸಿ, ನಾನು ಹನ್ನೆರಡು ವರ್ಷಗಳಿಂದಲೂ ಕಾಮಾಕ್ಷಿಯನ್ನು ಕುರಿತು ತಪಸ್ಸುಮಾಡುತ್ತಿರುವೆನು; ಆದರೂ ಆಒಳಗಿನ ಗುಹೆಯ ಬಾಗಿಲು ಮುಚ್ಚಿಕೊಂಡೇ ಇದೆ, ತೆಗೆಯಲಾಗದು." ಎಂದನು. ಕೂಡಲೆ ವಿಕ್ರಮನು ತಾನೇ ಆ ಗವಿಯೊಳಕ್ಕೆ ಹೋಗಿ ಒಳಗಿನ ಗುಹೆಯಮುಂದೆನಿಂತು ತನ್ನ ಕಂಠರಕ್ತವನ್ನೇ ದೇವತೆಗೆ ಆಹುತಿಕೊಡಲು ಉದ್ಯುಕ್ತಪಟ್ಟನು. ಆಗ ದೇವತೆಯು ಆತನ ಸಾಹಸಕ್ಕೂ, ಚಿತ್ತಸ್ಥೈರ್ಯಕ್ಕೂ ಮೆಚ್ಚಿ ಆತನಲ್ಲಿ ಪ್ರಸನ್ನಳಾಗಿ ಆತನು ಬೇಡಿದಂತೆ ರಸಕುಂಭವನ್ನು ದೀನನಾದ ಪುರುಷನಿಗೆ ಕೊಟ್ಟು ವಿಕ್ರಮನಿಗೆ ಅನೇಕ ವರಗಳನ್ನಿತ್ತಳು. ಭೋಜನು ಇಂತಹ ಕಾರ್ಯಗಳನ್ನೆಷ್ಟುಮಾಡಿರುವನು ? "

ಪ್ರತ್ಯುತ್ತರವಿಲ್ಲ.

*　　*

ಇಪ್ಪತ್ತು ಮೂರನೆಯ ಮೆಟ್ಟಲಿನ ಸ್ತ್ರೀಮೂರ್ತಿಯು ಹೀಗೆಂದಿತು:-

"ಎಲೈರಾಜನೆ, ಒಂದಾನೊಂದು ರಾತ್ರಿ ವಿಕ್ರಮ ಭೂಪಾಲನು ತಾನು ಎಮ್ಮೆಯನ್ನೇರಿ ದಕ್ಷಿಣದಿಕ್ಕಿಗೆ ಪ್ರಯಾಣಮಾಡಿದಂತೆ ಕನಸಕಂಡನು. ಮೂರಣೆಯ ದಿನ ಆ ಸಂಗತಿಯನ್ನು ಶಾಸ್ತ್ರಜ್ಞರಿಗೆ ತಿಳಿಸಲು,ಅವರು ಆ ಸ್ವಪ್ನವು ಅನಿಷ್ಟಸೂಚಕವೆಂದೂ,ಆ ಅನಿಷ್ಟವು ಪರಿಹಾರವಾಗುವುದಕ್ಕಾಗಿ ರಾಜನು ತನ್ನ ರಾಜ್ಯದಲ್ಲಿನ ಕುರುಡ, ಕುಂಟ, ಮೂಗ,ಅನಾಥರಿಗೂ, ಬ್ರಾಹ್ಮಣರಿಗೂ ಅನ್ನದಾನ ವಸ್ತ್ರದಾನಗಳನ್ನು ಮಾಡಬೇಕೆಂದೂ ಹೇಳಿದರು. ವಿಕ್ರಮನು ಅವರ ವಚನವನ್ನು ಶಿರಸಾವಹಿಸಿ, ತನ್ನ ಭಂಡಾರದಬಾಗಿಲುಗಳನ್ನು ಮೂರುದಿನಗಳು ತೆರೆದಿಟ್ಟು,ಬೇಕಾದವರು ಬೇಕಾದಷ್ಟು ಹಣವನ್ನು ತೆಗೆದುಕೊಂಡು ಹೋಗುವಂತೆ ಆಜ್ಞಾಪಿಸಿದನು. ಈ ಔದಾರ್ಯದಿಂದ ಜನರೆಲ್ಲರೂ ಆಶ್ಚರ್ಯಪಟ್ಟರಲ್ಲದೆ, ಅನ್ನವಸ್ತ್ರಧನಗಳನ್ನು ಮನದಣಿಯಪಡೆದು ಸುಖಿಸಿದರು. ಈ ಧಾರಾಳಬುದ್ಧಿಯು ತಮಗೂ ಉಂಟೊ ? "

ಭೋಜನು ಏನುತಾನೆ ಹೇಳಿಯಾನು ?

*　　　*　　　*

ಇಪ್ಪತ್ತನಾಲ್ಕನೆಯ ಪಾಂಚಾಲಿಕೆಯು ಹೇಳಿದಕಥೆ:-

"ವಿಕ್ರಮನರಾಜ್ಯದಲ್ಲಿ ಪುರಂದರಪುರಿಯೆಂಬ ಪಟ್ಟಣ. ಅದರಲ್ಲಿ ಒಬ್ಬ ಧನಿಕ. ಆತನು ಸಾಯುವಾಗ ತನ್ನ ನಾಲ್ವರು ಮಕ್ಕಳನ್ನು ಕರೆದು, "ಎಲೈ, ನನ್ನ ಆಸ್ತಿಯಲ್ಲಿ ನಿಮ್ಮ ನಿಮ್ಮ ಭಾಗಗಳನ್ನು ನಾನು ಮಲಗಿರುವ ಮಂಚದ ಕಾಲುಗಳ ಕೆಳಗೆ ಇಟ್ಟಿರುವೆನು. ಅದನ್ನು ಪಡೆದು ಸುಖವಾಗಿ ಬಾಳಿರಿ" ಎಂದು ಹೇಳಿಪ್ರಾಣಬಿಟ್ಟನು. ಕೆಲವುಕಾಲದ ಮೇಲೆ ಮಕ್ಕಳು ತಮ್ಮ ತಂದೆಯ ಆಸ್ತಿಯನ್ನು ಹಂಚಿಕೊಳ್ಳಲು ನಿಶ್ಚಯಿಸಿ, ಆತನು ಹೇಳಿದ್ದಂತೆ

ಒಬ್ಬೊಬ್ಬನು ಮಂಚದ ಒಂದೊಂದು ಕಾಲುಕೆಳಗೆ ಅಗೆದನು. ನಾಲ್ವರಿಗೂ ನಾಲ್ಕು ತಾಮ್ರದ ಸಂಪುಟಗಳು ದೊರೆತವು. ಮೊದಲನೆಯವನ ಭರಣಿಯಲ್ಲಿ ಮಣ್ಣೂ, ಎರಡನೆಯವನದರಲ್ಲಿ ನೆಲ್ಲರೆಳೂ, ಮೂರನೆಯವನದರಲ್ಲಿ ಇದ್ದಲೂ, ನಾಲ್ಕನೆಯವನದರಲ್ಲಿಮೂಳೆಯೂ ಇದ್ದುವು. ಅವರು ಇದನ್ನು ಕಂಡು, ಆಶ್ಚರ್ಯಹೊಂದಿ, ಅದರ ಅರ್ಥವನ್ನು ಕಾಣಲಾರದೆ, ದೇಶದಲ್ಲಿನ ಪಂಡಿತರೆಲ್ಲರನ್ನೂ ಅದರ ಭಾವವೇನೆಂದು ವಿಚಾರಿಸಿದರು. ಯಾರೂ ಹೇಳಲಾರದೆ ಹೋದರು. ಈ ಸಂಗತಿಯು ವಿಕ್ರಮನ ಕಿವಿಯನ್ನೂ ಮುಟ್ಟಿತು. ಅದರ ಅಭಿಪ್ರಾಯವು ಆತನಿಗೂ ತೋರಲಿಲ್ಲ. ಕಡೆಗೆ ಈ ವರ್ತಮಾನವು ದಕ್ಷಿಣದೇಶದಲ್ಲಿದ್ದ ಪ್ರತಿಷ್ಠಾನಗರ (ಪೈಟ್ನ) ಕ್ಕೆಹೋಯಿತು. ಅಲ್ಲಿನ ವಿದ್ವಾಂಸರೂ ಅದನ್ನರಿಯಲಾರದೆ ಹೋಗಲು, ಅಲ್ಲಿನ ಒಬ್ಬ ಕುಂಬಾರನ ಮನೆಯಲ್ಲಿದ್ದ ಶಾಲೀವಾಹನನೆಂಬ ಹುಡುಗನು ಪುರಂಧರಪುರಿಯ ಧನಿಕನ ಅಭಿಪ್ರಾಯವನ್ನು ಹೀಗೆಂದು ವಿವರಿಸಿದನು: ಮಣ್ಣು ಭೂಮಿಯನ್ನೂ, ನೆಲ್ಲರೆಳು ಧಾನ್ಯವನ್ನೂ, ಇದ್ದಲು ಬಂಗಾರವನ್ನೂ, ಮೂಳೆಯು ಪ್ರಾಣಿಯನ್ನೂ ಸೂಚಿಸುತ್ತದೆ; ಆದಕಾರಣ ಜ್ಯೇಷ್ಠಪುತ್ರನು ತಂದೆಯ ಭೂಮಿಗಳನ್ನೂ, ದ್ವಿತೀಯನು ಆತನು ಶೇಖರಿಸಿದ್ದ ಧಾನ್ಯರಾಶಿಗಳನ್ನೂ, ತೃತೀಯನು ಒಡವೆ ಹಣಗಳನ್ನೂ, ಕನಿಷ್ಠನು ಗೋವೃಷಭಗಳನ್ನೂ ಪಡೆಯತಕ್ಕದು.'' ಈ ವಿಮರ್ಶೆಯಿಂದ ಆ ಧನಿಕನ ಮಕ್ಕಳೂ, ಸರ್ವರೂ ಸಂತೋಷಪಟ್ಟರು. ಇದು ವಿಕ್ರಮನಿಗೆ ತಿಳಿಯಲು, ಆತನು ವಿಸ್ಮಿತನಾಗಿ, ಶಾಲೀವಾಹನನನ್ನು ತನ್ನಲ್ಲಿಗೆ ಬರಹೇಳಿಕಾಗದಬರೆಸಿದನು. ಶಾಲೀವಾಹನನು ಆ ಕಾಗದವನ್ನು ನಿರಾಕರಿಸಿ, ತನಗೆ ವಿಕ್ರಮನಲ್ಲಿ ಕೆಲಸವೇನೂ ಇಲ್ಲವೆಂದೂ, ಆತನಿಗೆ ಕೆಲಸವಿದ್ದರೆ ಆತನೇ ಬರಬೇಕೆಂದೂ ಹೇಳಿಕಳುಹಿಸಿದನು. ವಿಕ್ರಮನು ಅದರಂತೆಯೇ ಪ್ರ

ಷ್ಠಾನನಗರಕ್ಕೆ ಬಂದು, ಪುನಃ ಹೇಳಿಕಳುಹಿಸಿದನು. ಶಾಲೀವಾಹನನು "ನಾನು ಒಬ್ಬಂಟಿಗನಾಗಿ ರಾಜನನ್ನು ಕಾಣುವುದಿಲ್ಲ; ಚತುರಂಗ ಬಲದೊಡನೆ ಕಾಣುವೆನು." ಎಂದು ಹೇಳಿ ಯುದ್ಧಕ್ಕೆ ಕಾಲಕೆರೆದನು. ವಿಕ್ರಮನು ಹಾಗೆಯೇ ಆಗಲೆಂದು ತನ್ನ ಸೈನ್ಯವನ್ನು ಯುದ್ಧಕ್ಕೆ ಜತೆಗೊಳಿಸಿದನು. ಶಾಲೀವಾಹನನು ತನ್ನ ಮನೆಯಲ್ಲಿದ್ದ ಮಣ್ಣಿನ ಆನೆ, ಕುದುರೆ, ರಥ, ಪದಾತಿಗಳಿಗೆ ಜೀವವನ್ನು ಕೊಟ್ಟು ಅವುಗಳನ್ನು ಕರೆತಂದನು. ವಿಕ್ರಮನ ಸೈನ್ಯಕ್ಕೂ ಶಾಲೀವಾಹನನ ಕೃತಕಸೈನ್ಯಕ್ಕೂ ಘೋರಯುದ್ಧವಾಗಿ, ಶಾಲೀವಾಹನನ ಸೇನೆಯು ನಾಶವಾಯಿತು. ಆಗಲವನು ಆದಿಶೇಷನನ್ನು ಕುರಿತು ಪ್ರಾರ್ಥಿಸಲು ಆತನು ಸರ್ಪಗಳನ್ನು ಕಳುಹಿಸಿ, ವಿಕ್ರಮನ ಸೇನೆಯನ್ನು ನಾಶಪಡಿಸಿದನು. ಆಗ ವಿಕ್ರಮನೂ ವಾಸುಕಿಯನ್ನು ಪ್ರಾರ್ಥಿಸಿ, ತನ್ನ ಸೇನೆಯನ್ನು ಬದುಕಿಸಲು ಅಮೃತವು ಬೇಕೆಂದು ಬೇಡಿದನು. ವಾಸುಕಿಯು ಅದರಂತೆ ಅಮೃತ ಕುಂಭವನ್ನು ವಿಕ್ರಮನಿಗೆ ಕೊಟ್ಟನು. ಆವೇಳೆಗೆ ಸರಿಯಾಗಿ ಬ್ರಾಹ್ಮಣನೊಬ್ಬನು ವಿಕ್ರಮನ ಬಳಿಗೆ ಬಂದು "ಎಲೈ ರಾಜನೆ, ನೀನು ದಾನಕರ್ಣನೆಂದು ಪ್ರಸಿದ್ಧನಲ್ಲವೆ ! ಈಗಲೀ ಅಮೃತಕಲಶವನ್ನು ನನಗೆ ಕೊಡುವೆಯಾ ? " ಎಂದನು. ವಿಕ್ರಮನು "ನಿನಗೀ ಸಮಾಚಾರವು ಹೇಗೆ ತಿಳಿಯಿತು ? " ಎಂದು ಕೇಳಲು, ಬ್ರಾಹ್ಮಣನು "ಶಾಲೀವಾಹನನಿಂದ" ಎಂದು ಹೇಳಿದನು. ಆದರೂ ವಿಕ್ರಮನು ತನ್ನ ಶತ್ರುವನ್ನು ಗಣಿಸದೆ, ಬ್ರಾಹ್ಮಣನಿಗೆ ಆ ಸಮಯದಲ್ಲಿ ಅಮೃತಕಲಶವನ್ನು ಕೊಟ್ಟೇಕೊಟ್ಟನು. ಇಂತಹ ಧಾರಾಳವಾದ ಹೃದಯವು ತಮಗುಂಟೆ ? "

ಭೋಜನು ಏನೂ ಹೇಳಲಾರದವನಾಗಿದನು.

*   *   *

ಇಪ್ಪತ್ತೈದನೆಯ ಸಾಲಭಂಜಿಕೆಯು ಹೀಗೆಂದಿತು:

"ಒಂದಾನೊಂದು ಕಾಲದಲ್ಲಿ ವಿಕ್ರಮಾದಿತ್ಯನ ರಾಷ್ಟ್ರದಲ್ಲಿ ಮಳೆಯಿಲ್ಲದೆ ಹೋಗಿ, ದುರ್ಭಿಕ್ಷವು ಪ್ರಾಪ್ತವಾಯಿತು. ರಾಜನು ನವಗ್ರಹಹೋಮಾದಿಗಳನ್ನೂ, ಬೇಕಾದಷ್ಟು ದಾನಧರ್ಮಗಳನ್ನೂ ಮಾಡಿದನು. ಆದರೂ ಅನಾವೃಷ್ಟಿಯು ಹೋಗಲಿಲ್ಲ. ಒಂದುದಿನ ರಾಜನು ಚಿಂತಾಕ್ರಾಂತನಾಗಿಕುಳಿತಿರಲು "ಎಲೈರಾಜನೆ, ನಿನ್ನ ಮಾಂಸವನ್ನೇ ಆಹುತಿಯಾಗಿ ಅರ್ಪಿಸುವಿಯಾದರೆ ಈ ದುರ್ಭಿಕ್ಷವು ಹೋಗುವುದು" ಎಂದು ಅಶರೀರವಾಣಿಯಾಯಿತು. ವಿಕ್ರಮನು ಕೊಂಚವೂ ತಡಮಾಡದೆ, ತನ್ನ ಖಡ್ಗವನ್ನು ಒರೆಯಿಂದ ತೆಗೆದು ಶಿರಚ್ಛೇದನ ಮಾಡಿಕೊಳ್ಳಲು ಯತ್ನಿಸಿದನು. ಕೂಡಲೆ ಆ ರಾಜ್ಯದ ಅಭಿಮಾನದೇವತೆಯು ಪ್ರಸನ್ನಳಾಗಿ, ರಾಜನಲ್ಲಿ ಅನುಗ್ರಹಿಸಿ, ಸುವೃಷ್ಟಿಯನ್ನು ಕೊಟ್ಟಳು. ಹೇ ಭೋಜಮಹಾರಾಜನೇ, ತಮ್ಮಲ್ಲಿ ಇಂತಹಮಹಿಮೆಯುಂಟೋ ? "

ಉತ್ತರವೇ ಇಲ್ಲ.

*　　　*　　　*

## ಇಪ್ಪತ್ತಾರನೆಯ ಸಾಲಭಂಜಿಕೆಯು ಕೊಟ್ಟ ಉದಾಹರಣೆ:

"ಒಂದಾನೊಂದುವೇಳೆ ವಿಕ್ರಮನು ಒಂದುಕಾಡಿನಲ್ಲಿ ಎಲ್ಲಿಗೋ ಹೋಗುತ್ತಿರಲು, ಮಾರ್ಗದಲ್ಲಿ ದುರ್ಬಲವಾಗಿ, ಕೃಶವಾಗಿದ್ದ ಒಂದು ಹಸುವು ಕೆಸರಿನಲ್ಲಿ ಸಿಕ್ಕಿ ಈಚೆಗೆ ಬರಲಾರದೆ ಸಂಕಟಪಡುತ್ತಿದ್ದುದನ್ನು ಕಂಡನು. ಆತನು ಕನಿಕರಪಟ್ಟವನಾಗಿ, ಬೇಗನೆ ತಾನೇ ಆ ಕೆಸರಿನೊಳಕ್ಕೆ ನುಗ್ಗಿ, ಬಹ ಸಾಹಸದಿಂದ ಅದನ್ನು ಕೆಸರಿನಿಂದ ಈಚೆಗೆ ಕರೆದು ತಂದು, ಅದರ ಮೈಯನ್ನು ತೊಳೆದು, ಅದಕ್ಕೆ ಗರಿಕೆಯ ಹುಲ್ಲನ್ನು ತಂದುಹಾಕಿ, ಅದನ್ನುಪಚರಿಸಿದನು. ಆಗ ಅದು ದಿವ್ಯವಾದ ರೂಪವನ್ನು ಧರಿಸಿ, "ಎಲೈ ರಾಜನೆ, ನಾನು ಕಾಮಧೇನು. ನೀನು ಪರಮದಯಾಳುವೆಂದು

ನಾರದನು ಇಂದ್ರ ಸಭೆಯಲ್ಲಿ ಹೇಳಲು, ನಿನ್ನ ಧರ್ಮವನ್ನು ಪರೀಕ್ಷಿಸಬೇಕೆಂದು, ದೇವೇಂದ್ರನ ಅಪ್ಪಣೆಯಂತೆ ನಾನಿಲ್ಲಿಗೆ ಬಂದು, ಈರೀತಿಮಾಡಿದೆನು. ದೀನಸಂರಕ್ಷಣೆಯಲ್ಲಿ ನಿನಗಿರುವ ಶ್ರದ್ಧೆಯಿಂದ ನಾನು ಸಂತೃಪ್ತಳಾದೆನು. ಬೇಕಾದವರವನ್ನು ಕೇಳು'' ಎಂದಿತು. ವಿಕ್ರಮನು ಆ ಕಾಮಧೇನುವೇ ತನ್ನ ಬಳಿ ಯಿರಬೇಕೆಂದು ಬಯಸಿದನು. ಆ ಧೇನುವು ಹಾಗೆಯೇ ಆಗಲೆಂದು ಒಪ್ಪಿ, ವಿಕ್ರಮನ ಅರಮನೆಯಲ್ಲಿಯೇ ಇದ್ದಿತು ಇದನ್ನರಿತ ಬ್ರಾಹ್ಮಣನೊಬ್ಬನು ಆಗೋವು ತನಗೆ ಬೇಕೆಂದು ವಿಕ್ರಮರಾಯನನ್ನು ಕೇಳಲು, ರಾಯನು ಪ್ರತಿಮಾತಾಡದೆ, ಸಂತೋಷದಿಂದ ಆದೇವಲೋಕದ ಧೇನುವನ್ನು ವಿಪ್ರನಿಗೆ ಕೊಟ್ಟನು. ನೀವೂ ಹಾಗೆ ಮಾಡಿರುವಿರೋ?''

ಭೋಜನು ತಲೆ ಬಾಗಿದನು.

*　　　*　　　*

## ಇಪ್ಪತ್ತೇಳನೆಯ ಸಾಲಭಂಜಿಕೆಯು ಉದ್ದೀರಿಸಿತೇನೆಂದರೆ:—

" ವಿಕ್ರಮರಾಜನು ಒಂದು ಸಮಯದಲ್ಲಿ ದೇಶಪರ್ಯಟನೆ ಮಾಡುತ್ತಾ, ಒಂದಾನೊಂದು ನಗರದ ಬಳಿ ಒಂದು ಮನೋಹರವಾದ ಸರೋವರವನ್ನೂ, ದೇವಮಂದಿರವನ್ನೂ ಕಂಡು, ನಾಲ್ಕೈದು ದಿನಗಳು ಅಲ್ಲಿನಿಲ್ಲಬೇಕೆಂದು ಸಂಕಲ್ಪಿಸಿ, ದೇವತಾಲಯವನ್ನು ಹೊಕ್ಕು ದೇವತಾ ಸಂದರ್ಶನವಮಾಡಿಕೊಂಡು ರಂಗಮಂಟಪಕ್ಕೆ ಬರಲು, ಅಲ್ಲಿ ಒಬ್ಬ ಸುಂದರಪುರುಷನು ದಿವ್ಯದುಕೂಲಗಳನ್ನುಟ್ಟು, ರತ್ನಾಭರಣಗಳನ್ನುತೊಟ್ಟು, ಗಂಧಪುಷ್ಪಗಳಿಂದ ಶೋಭಿಸುತ್ತಾ, ಸ್ತ್ರೀಜನರೊಡನೆ ವಿನೋದವಾಗಿ ಕುಳಿತಿದ್ದುದನ್ನು ನೋಡಿದನು, ಸ್ವಲ್ಪಹೊತ್ತಿನಲ್ಲಿ ಆವ್ಯಕ್ತಿಯೂ, ಅವನೊಡನೆ ಇದ್ದವರೂ ಹೊರಟು ಹೋದರು. ವಿಕ್ರಮನು ಅವ

ನೂರಿರಬಹುದೆಂದು ವಿಚಾರಿಸುತ್ತಿದ್ದನು. ಮಾರಣೆಯದಿನ ಆ
ತ್ತಿಯೋ ದೀನನಾಗಿ, ದಿಗಂಬರನಾಗಿ, ಆರಂಗಮಂಟಪಕ್ಕೆ ಬಂ
ು. ವಿಕ್ರಮನು ಅದನ್ನು ಕಂಡು ಮತ್ತಷ್ಟು ವಿಸ್ಮಿತನಾಗಿ,
ಯ್ಯಾ, ನೀನು ಯಾರು ? ನಿನ್ನೆ ರಾಜಕುಮಾರನಂತಿದ್ದ ಈದಿ
ಭಿಕ್ಷುಕನಂತೆ ಕಾಣಲು ಕಾರಣವೇನು ? '' ಎಂದು ಪ್ರಶ್ನಿಸಿ
ು. ಅವನು ''ಜೂಜೇ ಕಾರಣ'' ಎಂದನು. ವಿಕ್ರಮನು ''ಜೂ
ಡುವುದು ಪಾಪವೆಂದು ನಿನಗೆ ತಿಳಿಯದೆ?'' ಎಂದನು, ಅವನು
ದರಿಂದಲೇ ನನಗೆ ಜೀವನ'' ಎಂದನು. ಆವೇಳೆಗೆ ಯಾರೋ
ನಾಣಿಕರಿಬ್ಬರು ಆದೇವಾಲಯದೊಳಕ್ಕೆ ಬಂದು ಕುಳಿತು
ಕೊಂಡಿದ್ದರು. ಅವರಲ್ಲೊಬ್ಬನು ಮತ್ತೊಬ್ಬನನ್ನು ಕುರಿತು,
ಖನೆ, ಈ ಗೋಡೆಯ ಮೇಲಿನ ಪೈಶಾಚಭಾಷೆಯ ಶಾಸನ
ಈ ದೇವಾಲಯದ ಈಶಾನ್ಯಭಾಗದ ಗವಿಯಲ್ಲಿ ಚಿನ್ನರನ್ನ
ಂದ ತುಂಬಿದ ಕೊಡಗಳು ಮೂರಿವೆ. ಅವುಗಳ ಬಳಿ ಭೈರವೇ
ನ ಪ್ರತಿಮೆಯೊಂದಿದೆ. ನಿನ್ನ ಕಂಠರಕ್ತದಿಂದ ಅದನ್ನು ಪ್ರೋ
ದರೆ ಆಕೊಡಗಳು ನಿನ್ನ ವಶವಾಗುವುವು' ಎಂದು ತಿಳಿಸು
ೆ. '' ಎಂದು ಹೇಳಿದನು. ವಿಕ್ರಮನು ಅದನ್ನು ಕೇಳಿದೊಡೆ
ು ಆ ಗವಿಯೊಳಕ್ಕಿಳಿದು, ತನ್ನ ಕೊರಳನ್ನು ಕತ್ತಿಯಿಂದ
ದು, ರಕ್ತವನ್ನು ತೆಗೆದು, ಭೈರವಮೂರ್ತಿಯಮೇಲೆ ಚಲ್ಲಿದ
ಭೈರವನು ಪ್ರತ್ಯಕ್ಷನಾಗಿ ಆ ಧನವನ್ನು ವಿಕ್ರಮನಿಗೆ ಕೊ
ಅದೃಶ್ಯನಾದನು. ವಿಕ್ರಮನು ಅದನ್ನು ಆ ಜೂಜುಗಾರನಿ
ಕೊಟ್ಟು, ಇನ್ನುಮೇಲೆ ದ್ಯೂತವಾಡದಿರೆಂದು ಅವನಿಗೆ ಹೇಳಿ,
ಚ್ಛೆ ಬಂದಂತೆ ಹೊರಟು ಹೋದನು. ನೀವೂ ಹಾಗೆ ಮಾಡಿರು
ರೋ ? ''

ಭೋಜನು ಏನೂ ಹೇಳಲಿಲ್ಲ.

* * *

## ಇಪ್ಪತ್ತೆಂಟನೆಯ ಸಾರಿ ಭೋಜಮಹಾರಾಜನು ವಿಕ್ರಮಪೀಠದ ಸಮೀಪಕ್ಕೆ ಬರಲು, ಪೀಠದ ಮೇಲಿನ ಆ ಸೌಮ್ಯೆಯು ಪ್ರತಿಮೆಯು ಹೀಗೆಂದಿತು: —

"ಒಂದು ಸಲ ವಿಕ್ರಮಭೂಪನು ದೇಶಸಂಚಾರಮಾಡುತ್ತಿರಲು, ಒಂದೂರಿನಲ್ಲಿ ನಾಲ್ವರು ವಿದೇಶಿಗಳನ್ನು ಕಂಡನು. ಅವರನ್ನಾತನು ವಿಶೇಷವೇನೆಂದು ಕೇಳಲಾಗಿ, ಅವರೀರೀತಿ ವಿವರಿಸಿದರು: "ಅಯ್ಯಾ, ಇಲ್ಲಿಗೆ ಸ್ವಲ್ಪದೂರದಲ್ಲಿ ಭೇತಾಳಪುರಿಯೆಂಬ ಪಟ್ಟಣವುಂಟು. ಅಲ್ಲಿನ ಗ್ರಾಮದೇವತೆಯಾದ ಚಂಡೀದೇವಿಗೆ ಆ ವೂರಿನವರು ವರ್ಷಕ್ಕೊಂದು ಬಾರಿ ಜಾತ್ರೆನಡೆಯಿಸಿ, ಆ ಜಾತ್ರೆಯ ದಿನ ನರಬಲಿಯನ್ನರ್ಪಿಸುವರು. ಆಬಲಿಗಾಗಿ, ಆವೇಳೆಗೆ ಅಲ್ಲಿಗೆ ಬಂದಿರುವ ಪರದೇಶೀಯರನ್ನೇ ಅವರು ಹಿಡಿಯುವರು. ನಿನ್ನೆ ಅಲ್ಲಿದ್ದ ನಾವುಗಳು ಈ ವರ್ತಮಾನವನ್ನು ಕೇಳಿ, ಭಯಭ್ರಾಂತರಾಗಿ, ಪ್ರಾಣವನ್ನುಳಿಸಿ ಕೊಳ್ಳುವ ನಿಮಿತ್ತ ಇಲ್ಲಿಗೆ ಓಡಿಬಂದಿರುವೆವು." ಈ ಸುದ್ದಿಯನ್ನು ಕೇಳಿದೊಡನೆಯೆ ವಿಕ್ರಮಾದಿತ್ಯನು ಭೇತಾಳ ಪುರಿಗೆ ಪಯಣಮಾಡಿ, ಚಂಡಿಕಾಲಯಕ್ಕೆ ಹೋಗಿ ಅಲ್ಲಿನವರು ಬಲಿಕೊಡುವುದಕ್ಕೆ ತಂದಿದ್ದ ಕೃಶನಾದ ಮನುಷ್ಯನನ್ನು ಬಿಡಿಸಿ, ಪುಷ್ಟಾಂಗನಾದ ತಾನೇ ದೇವತೆಗೆ ಆಹುತಿಯಾಗಿರಲು ಒಪ್ಪಿಕೊಂಡನು. ಆತನು ಬಲಿಕೊಡುವ ಹೊತ್ತಿಗೆ ಪಶುಸ್ಥಾನದಲ್ಲಿ ನಿಂತು ಶಿರಚ್ಛೇದನಕ್ಕಾಗಿ ಕತ್ತಿಯನ್ನೆತ್ತಲು, ದೇವತೆಯು ಪ್ರತ್ಯಕ್ಷಳಾಗಿ ಆತನ ಭೂತದಯೆಯನ್ನೂ, ಪರೋಪಕಾರ ಬುದ್ಧಿಯನ್ನೂ ಕೊಂಡಾಡಿ, ವಿಕ್ರಮನನ್ನು ಹರಸಿದಳು. ಅಲ್ಲಿಂದ ಮುಂದಕ್ಕೆ ನರಬಲಿಯನ್ನು ಮಾಡಿಸದಿರಬೇಕೆಂದು ಆತನು ಕೇಳಿಕೊಳ್ಳಲು, ಅದರಂತೆಯೂ ಒಪ್ಪಿ, ಆ ಊರಿನವರಲ್ಲಿ ಅನುಗ್ರಹಿಸಿದಳು."

ಈ ಕಥೆಯನ್ನು ಕೇಳಿದ ಭೋಜನು ಆ ಹಾ! ಎಂದುಕೊಂಡು, ವಿಕ್ರಮನ ಗುಣಾತಿಶಯಗಳನ್ನು ಕೊಂಡಾಡುತ್ತಾ ಹೊರಟುಹೋದನು.

*     *     *

ಆದರೂ ಭೋಜನು ವಿಕ್ರಮಪೀಠದಬಳಿಗೆ ಬರುವುದನ್ನು ಬಿಡಲಿಲ್ಲ. ಉಳಿದ ಸಾಲಭಂಜಿಕೆಗಳು ಹೇಳುವ ಕಥೆಗಳನ್ನು ಕೇಳಬೇಕೆಂದೂ, ಅವು ಏನೂ ಹೇಳದಿದ್ದರೆ ಆ ಪೀಠವನ್ನೇರಬೇಕೆಂದೂ ಮರಳಿ ಅದರ ಮುಂದೆ ಬಂದು ನಿಂತನು. ಈಸಲ ಇಪ್ಪತ್ತೊಂಭತ್ತನೆಯ ಸಾಲಭಂಜಿಕೆಯು ಹೀಗೆಂದಿತು.

'ಒಂದಾನೊಂದು ಸಮಯದಲ್ಲಿ ಒಬ್ಬಾನೊಬ್ಬ ದರಿದ್ರನಾದ ಕವೀಶ್ವರನು ವಿಕ್ರಮಾರ್ಕ ರಾಜನಬಳಿಗೆ ಬಂದು ಆತನನ್ನಾಶೀರ್ವದಿಸಿ ಯಾಚಿಸಲು, ಆತನು ಆ ಕವಿಯ ಕವಿತೆಯನ್ನು ಮೆಚ್ಚಿ ಅವನಿಗೆ ತನ್ನ ಭಂಡಾರದಲ್ಲಿನ ಅಮೂಲ್ಯಗಳಾದ ಒಂಭತ್ತು ರತ್ನಗಳನ್ನೇ ಕೊಡಿಸಿದನು. ಇಂತಹ ಔದಾರ್ಯವು ಇತರರಲ್ಲಿರುವುದೆ?''

ಭೋಜನು ಮಾತನಾಡದೆ ಹಿಂದಿರುಗಿದನು.

*     *     *

ಪುನಃ ಭೋಜಭೂಪಾಲನು ವಿಕ್ರಮಪೀಠದಬಳಿ ಸಾರಿ, ಈ ಕಥೆಯನ್ನಾಲಿಸಿದನು:—

"ಒಂದುದಿನ ಒಬ್ಬಾನೊಬ್ಬ ಪುರುಷನು ಒಬ್ಬ ಸುಂದರಿಯ ಸಮೇತ ವಿಕ್ರಮನ ಆಸ್ಥಾನಕ್ಕೆ ಬಂದು, 'ಮಹಾರಾಜ ನಾನು ದೇವೇಂದ್ರನ ಭೃತ್ಯನು, ಯಾವುದೋ ಕಾರಣದಿಂ

ದ ಆತನು ನನ್ನನ್ನು ಶಪಿಸಲು, ನಾನು ಭೂಲೋಕಕ್ಕೆ ಬರಬೇಕಾಯಿತು. ಈಗ ದೇವತೆಗಳಿಗೂ ರಾಕ್ಷಸರಿಗೂ ಒಂದು ಮಹಾಯುದ್ಧವು ಸಂಭವಿಸಿರುವ ಕಾರಣ ನಾನು ಮಹೇಂದ್ರನ ಸಹಾಯಾರ್ಥವಾಗಿ ಹೋಗಬೇಕಾಗಿದೆ. ನೀನು ಪರರ ಹೆಂಗಸರನ್ನು ಅಕ್ಕ ತಂಗಿಯರಂತೆ ಕಾಣುವಿಯೆಂದು ಕೇಳಿರುವೆನಾದಕಾರಣ ನನ್ನ ಹೆಂಡತಿಯಾದ ಈಕೆಯನ್ನು ನಿನ್ನ ರಕ್ಷಣೆಯಲ್ಲಿರಿಸಲು ಬಂದಿರುವೆನು. ಏನ ಹೇಳುವಿ?' ಎಂದನು. ವಿಕ್ರಮನು ಆಗಬಹುದೆನ್ನಲು, ಆ ಪುರುಷನು ಆಕೆಯನ್ನು ವಿಕ್ರಮನಬಳಿ ಬಿಟ್ಟು ಆಕಾಶಕ್ಕೆ ಹಾರಿ ಅದೃಶ್ಯನಾದನು. ರಾಜನೂ, ಸಭಿಕರೂ, ಮುಖಗಳನ್ನು ಮೇಲಕ್ಕೆತ್ತಿ ಆಗಸದಲ್ಲಿ ದೃಷ್ಟಿಯನ್ನು ನಿಲ್ಲಿಸಿರಲು, ಕ್ಷಣಮಾತ್ರದಲ್ಲಿ "ಹಿಡಿ, ಹೊಡಿ, ಬಡಿ, ಕಡಿ" ಎಂದು ಮುಂತಾದ ಕಠಿಣವಾಕ್ಯಗಳು ಕೇಳ ಬಂದುವು. ಉತ್ತರಕ್ಷಣದಲ್ಲಿ ಕತ್ತಿಯನ್ನು ಹಿಡಿದಿದ್ದ ರಕ್ತಮಯವಾದ ಒಂದು ಬಾಹುವು ಕೆಳಕ್ಕೆ ಬಿತ್ತು. ಇನ್ನೊಂದು ಕ್ಷಣದಲ್ಲಿ ತಲೆಯಿಲ್ಲದ ಒಂದು ಮುಂಡವು ಬಿದ್ದಿತು. ಎಲ್ಲರೂ ಈ ಅದ್ಭುತವನ್ನ ನೋಡಿ ಏನೂ ತೋರದೆ ನಿಂತಿರಲು, ಆ ದಿವ್ಯ ಪುರುಷನ ಮುಖವನ್ನೇ ಹೋಲುತ್ತಿದ್ದ ಒಂದು ತಲೆಯೂ ಕೆಳಕ್ಕೆ ಬಿದ್ದಿತು. ಅದನ್ನು ಕಂಡೊಡನೆಯೆ ಅಲ್ಲಿದ್ದ ಸುಂದರಿಯು "ಹಾ! ಇನ್ನೇನು ಗತಿ! ನನ್ನಪತಿಯು ಸಂಹರಿಸಲ್ಪಟ್ಟಿರುವನು." ಎಂದು ಗೋಳಾಡಿ, ತಾನು ಅಗ್ನಿಪ್ರವೇಶ ಮಾಡಲು ಅನುಕೂಲ ಪಡಿಸಿಕೊಡಬೇಕೆಂದು ವಿಕ್ರಮನನ್ನು ಪ್ರಾರ್ಥಿಸಿದಳು. ಆತನು ಬೇಡವೆಂದು ಎಷ್ಟುಬಗೆಯಿಂದ ತಡೆದರೂ ಆಕೆಯು ಒಪ್ಪದಿರಲು, ವಿಕ್ರಮನು ಅನುತಾಪಪಟ್ಟು, ಆಕೆಯ ಸಹಗಮನಕ್ಕೆ ಬೇಕಾದುದನ್ನು ಒದಗಿಸಿಕೊಟ್ಟನು. ಆ ಕೋಮಲಾಂಗಿಯು ಅಗ್ನಿಜ್ವಾಲೆಯಲ್ಲಿ ಬಿದ್ದು ಪ್ರಾಣಗಳನ್ನು ತೊರೆದಳು. ಮಾರ

ಮರುದಿನ ವಿಕ್ರಮರಾಜನು ಎಂದಿನಂತೆ ಸಭಾಸ್ಥಾನಕ್ಕೆ ಬಂದು ಕೂಡಲು, ಹಿಂದಿನ ದಿನದ ದಿವ್ಯ ಪುರುಷನು ಹಿಂದಿನಂತೆಯೇ ಬಂದು, ವಿಕ್ರಮನಿಗೆ ಒಂದು ದಿವ್ಯ ಪುಷ್ಪಮಾಲೆಯನ್ನು ಸಮರ್ಪಿಸಿ ಕುಶಲಪ್ರಶ್ನೆ ಮಾಡಿ, ತಾನು ದೇವದಾನವ ಯುದ್ಧದಲ್ಲಿ ಅನೇಕ ದಾನವರನ್ನು ಕೊಂದನೆಂದೂ, ಮಹೇಂದ್ರನು ಅದರಿಂದ ಸಂತೋಷಿಸಿ ತನ್ನನ್ನು ಪುನಃ ದೇವಲೋಕಕ್ಕೆ ಬಾರೆಂದು ಕರೆದನೆಂದೂ ಹೇಳಿ, ತನ್ನ ಪತ್ನಿಯನ್ನು ಕಳುಹಿಸಿಕೊಡಬೇಕೆಂದು ಕೇಳಿದನು. ವಿಕ್ರಮನೂ, ಸಭಿಕರೂ ಅತ್ಯಂತ ವಿಸ್ಮಿತರಾದರು. ಸಭಿಕರಲ್ಲೊಬ್ಬನು ಅವನನ್ನು ಕುರಿತು "ನಿನ್ನ ಭಾರ್ಯೆಯು ಅಗ್ನಿಯನ್ನು ಹೊಕ್ಕಳು" ಎಂದನು. ಆ ಪುರುಷನು "ಅಯ್ಯೋ! ಅದೇನು-" ಎಂದನು. ಯಾರೂ ಉತ್ತರ ಕೊಡಲಿಲ್ಲ. ಅವನು "ಎಲೈ ರಾಜನೇ! ನೀನು ಪರನಾರಿಯರ ಸೋದರನೆಂದು ತಿಳಿದು ನನ್ನ ಪತ್ನಿಯನ್ನು ನಿನ್ನ ವಶದಲ್ಲಿ ಬಿಟ್ಟುಹೋದರೆ, ನೀನವಳನ್ನು ಅಂತಃಪುರದಲ್ಲಿ ಬಚ್ಚಿಟ್ಟಿರುವೆಯೋ?" ಎಂದನು. ವಿಕ್ರಮಾರ್ಕನು ಮನದಲ್ಲಿ ಕಳವಳಹೊಂದಿ ರಾಣಿವಾಸದ ಸೇವಕ ಜನರನ್ನು ಕರೆಯಿಸಿ, "ಈತನ ಪತ್ನಿಯು ಅಂತಃಪುರದಲ್ಲಿರುವಳೆ?" ಎಂದು ಕೇಳಿದನು. ಅವರು "ಹೌದು, ಮಹಾರಾಣಿಯವರೊಡನೆ ಮಾತನಾಡುತ್ತಿರುವಳು" ಎಂದರು. ಎಲ್ಲರೂ ಮತ್ತಷ್ಟು ಆಶ್ಚರ್ಯಭರಿತರಾದರು. ಆಗ ಆ ಪುರುಷನು ಎದ್ದುನಿಂತು "ಮಹಾಪ್ರಭೋ, ಕ್ಷಮಿಸಬೇಕು, ನಾನೊಬ್ಬ ಐಂದ್ರಜಾಲಿಕನು ಈಗ ನಡೆದುದೆಲ್ಲವೂ ಬರಿಯ ಮಾಯೆ. ನನ್ನ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳನ್ನು ತೋರಿಸಲು ಹೀಗೆ ಮಾಡಿದೆನು. ಅಪರಾಧಗಳನ್ನು ಮನ್ನಿಸಬೇಕು" ಎಂದನು ಆ ವೇಳೆಗೆ ದ್ವಾರಪಾಲಕನೊಬ್ಬನು ವಿಕ್ರಮರಾಜನ ಸನ್ನಿಧಿಗೆ ಬಂದು "ಪಾಂಡ್ಯರಾಜನು ಕಪ್ಪವನ್ನು ಕಳುಹಿಸಿರುವನು" ಎಂದು ಬಿನ್ನಯಿಸಿದನು.

ವಿಕ್ರಮನು ಆ ಬಹುಧನವನ್ನೆಲ್ಲಾ ಐಂದ್ರಜಾಲಿಕನಿಗೇ ಕೊಡಿಸಿದನು. ಈ ಬಗೆಯ ವಿಶೇಷಗಳು ಭೋಜಮಹಾರಾಜನ ಆಸ್ಥಾನದಲ್ಲಿ ನಡೆಯುವವೆ?"

ಭೋಜನು ಸುಮ್ಮನೆ ನಡೆದನು.

* * *

ಮೂವತ್ತೊಂದನೆಯಾವರ್ತಿ ಭೋಜಭೂಪತಿಯು ವಿಕ್ರಮಾಸನದಬಳಿ ಹೋಗಲು ಇನ್ನೊಂದು ಪಾಂಚಾಲಿಕೆಯು ಹೀಗೆ ಹೇಳಿತು:-

"ಒಂದುಸಲ ದಿಗಂಬರ ಸನ್ಯಾಸಿಯೊಬ್ಬನು ವಿಕ್ರಮಾರ್ಕನಬಳಿಗೆ ಬಂದು, ರಾಜನನ್ನಾಶೀರ್ವದಿಸಿ ಫಲಮಂತ್ರಾಕ್ಷತೆಗಳನ್ನಿತ್ತು, "ಅಯ್ಯಾ, ನಾನು ಮಾರ್ಗಶೀರ್ಷ ಕೃಷ್ಣ ಚತುರ್ದಶಿಯ ರಾತ್ರಿ ಸ್ಮಶಾನದಲ್ಲಿ ಒಂದು ಹೋಮ ಮಾಡಬೇಕಾಗಿದೆ. ಅದಕ್ಕೆ ನಿನ್ನ ಸಹಾಯವು ಬೇಕು" ಎಂದನು.

ರಾಜ:—ನಾನೇನ ಮಾಡಬೇಕು ?

ದಿಗಂಬರ:—ಸ್ಮಶಾನಭೂಮಿಗೆ ಸ್ವಲ್ಪ ದೂರದಲ್ಲಿರುವ ಶಮೀವೃಕ್ಷದಲ್ಲಿ ಭೇತಾಳನಿರುವನು. ಅವನನ್ನು ಬಲವಾಗಿ ಹಿಡಿದು, ಮೌನದಿಂದ ನನ್ನಲ್ಲಿಗೆ ಕರೆತರಬೇಕು.

ರಾಜ:—ಹಾಗೆಯೇ ಆಗಲಿ.

ದಿಗಂಬರನು ಹೊರಟು ಹೋದನು. ನಿಯಮಿಸಿದ್ದವೇಳೆಗೆ ವಿಕ್ರಮನು ರುದ್ರಭೂಮಿಯನ್ನು ಸೇರಿ, ಶಮೀವೃಕ್ಷದಡಿಯಲ್ಲಿದ್ದ ಭೇತಾಳನನ್ನು ಬಲವಾಗಿ ಹಿಡಿದೆತ್ತಿ ಭುಜದಮೇಲೆ ಕೂಡಿಸಿಕೊಂಡು ದಿಗಂಬರನ ಬಳಿಗೆ ಹೊರಟನು. ಮಾರ್ಗದಲ್ಲಿ ಭೇತಾಳನು ಹೀಗೆಂದನು: "ರಾಜನೆ, ದಾರಿಯನ್ನು ಕಳೆಯುವುದಕ್ಕಾಗಿ ಒಂದು ಕಥೆಯನ್ನ ಹೇಳು." ರಾಜನು ಮೌನವನ್ನು ಬಿಟ್ಟರೆ ಭೇತಾಳನು ಹಿಂದಿರುಗುವನೆಂಬ ಭಯದಿಂದ ಸುಮ್ಮನಿದ್ದನು.

ಭೇತಾಳ: " ನೀನು ಹೇಳದಿದ್ದರೆ ನಾನೇ ಹೇಳುವೆನು. ಕಡೆಗೆ ನಾನು ಕೇಳುವ ಪ್ರಶ್ನೆಗೆ ಉತ್ತರವನ್ನು ತಿಳಿದೂ, ಮೌನಭಂಗ ಭಯದಿಂದ ನೀನು ಮಾತನಾಡದೆ ಹೋದರೆ, ನಿನ್ನ ತಲೆಯು ಸಾವಿರ ಹೋಳಾಗುವುದು ಕೇಳು. ವಿಂಸ್ಯಾವತಿಯೆಂಬುದೊಂದು ಪಟ್ಟಣ. ಅವರಲ್ಲಿ ಸುವಿಚಾರನೆಂಬ ದೊರೆ. ಆತನ ಮಗ ಜಯ ತ್ಸೇನನು ಒಂದು ದಿನ ಬೇಟೆಗೆ ಹೊರಟು, ಒಂದು ಕಾಡಾನೆಯ ನ್ನು ಹಿಂಬಾಲಿಸಿ ಅರಣ್ಯದೊಳಕ್ಕೆ ಬಲುದೂರ ಹೋದನು. ಅಲ್ಲಿ ಒಂದು ನದಿಯು ಹರಿಯುತ್ತಿತ್ತು. ಅದರ ದಡದಲ್ಲಿ ಒಬ್ಬ ಬ್ರಾ ಹ್ಮಣನು ಧ್ಯಾನನಿಷ್ಠನಾಗಿ ಕುಳಿತಿದ್ದನು. ರಾಜಪುತ್ರನು ಕುದುರೆಯಿಂದಿಳಿದು ಅವನಬಳಿಗೆ ಹೋಗಿ, "ಅಯ್ಯಾ, ಈ ಕುದು ರೆಯನ್ನು ನೋಡಿಕೊಂಡಿರು. ನಾನು ನದಿಯೊಳಕ್ಕಿಳಿದು ಸ್ನಾನ ಪಾನಗಳನ್ನು ಮಾಡಿಬರುವೆನು." ಎಂದನು. ಬ್ರಾಹ್ಮಣನು "ಧ್ಯಾನಾ ರೂಢನಾದವನನ್ನು ಹೀಗೆ ತೊಂದರೆಪಡಿಸುವುದು ಸರಿಯೇನು?" ಎನ್ನಲು, ರಾಜಪುತ್ರನು ಕೋಪಗೊಂಡು, ಆ ವಿಪ್ರನನ್ನು ಚಾ ಟಿಯಿಂದ ಚೆನ್ನಾಗಿ ಹೊಡೆದನು. ವಿಪ್ರನು ಅಲ್ಲಿಂದ ಹೊರಟು, ಸುವಿಚಾರ ರಾಜನಲ್ಲಿಗೆ ಹೋಗಿ ಆದ ಸಂಗತಿಯನ್ನು ವಿಜ್ಞಾಪಿಸಿ ದನು. ರಾಜನು ಮಗನ ಮೇಲೆ ತುಂಬಾ ಆಗ್ರಹಪಟ್ಟು, ಅವನ ನ್ನು ದೇಶಭ್ರಷ್ಟನನ್ನಾಗಿ ಮಾಡಲು ನಿಶ್ಚಯಿಸಿದನು. ಅಷ್ಟರಲ್ಲಿ ಮಂತ್ರಿಯು "ರಾಜ್ಯಭಾರವನ್ನು ವಹಿಸಲು ಯೋಗ್ಯನಾದ ಕು ಮಾರನನ್ನು ರಾಜ್ಯದಿಂದ ಓಡಿಸುವುದು ಉಚಿತವಲ್ಲ" ಎಂದನು. ಹೀಗೆದೊರೆಯು ನ್ಯಾಯಪರವಾಗಿಯೂ, ಮಂತ್ರಿಯು ಅನುಕೂ ಲವನ್ನು ಯೋಚಿಸಿಯೂ ಬಹುದೂರ ಚರ್ಚಿಸಿದರು. ಕಡೆಗೆ ರಾಜ ನು ಮಗನನ್ನು ಶಿಕ್ಷಿಸಿಯೇ ತೀರಬೇಕೆಂದು ತೀರ್ಮಾನಿಸಿ, ಹಸ್ತಚ್ಛೇ ದವನ್ನು ವಿಧಿಸಿದನು. ಅಷ್ಟರಲ್ಲಿ ಬ್ರಾಹ್ಮಣನು ಅಡ್ಡಬಂದು, "ರಾ ಜನೆ, ನಿನ್ನ ಧರ್ಮಬುದ್ಧಿಗೆ ಮೆಚ್ಚಿದೆನು. ನಿನ್ನ ಮಗನು ಇನ್ನೂ

ಬಾಲಕನಾದಕಾರಣ ಕ್ಷಮೆಗೆ ಅರ್ಹನು. ನಾನು ಅವನನ್ನು ಕ್ಷಮಿಸಿರುವೆನು, ನೀನೂ ಕ್ಷಮಿಸತಕ್ಕದು'' ಎಂದು ಹೇಳಿ ಹೊರಟು ಹೋದನು. ಎಲೈ ವಿಕ್ರಮರಾಜನೆ, ಆ ಬ್ರಾಹ್ಮಣನ ಗುಣವು ದೊಡ್ಡದೋ, ಆ ರಾಜನ ಗುಣವು ದೊಡ್ಡದೋ ?,,

ವಿಕ್ರಮ:-ರಾಜನ ಗುಣವೇ ದೊಡ್ಡದು.

ಈ ರೀತಿ ವಿಕ್ರಮನ ಮೌನವ್ರತವು ಭಂಗವಾಗಲು ಭೇತಾಳನು ಬನ್ನೀಮರವನ್ನು ಸೇರಿದನು. ಪುನಃ ವಿಕ್ರಮನು ಅವನನ್ನು ಹಿಡಿದು ತಂದನು. ಪುನಃ ಭೇತಾಳನು ಕಥೆಹೇಳಿ ಮೌನವನ್ನ ಭಂಗಪಡಿಸಿದನು. ಈ ರೀತಿ ಒಟ್ಟಿಗೆ 'ಇಪ್ಪತ್ತೈದಾವರ್ತಿ ನಡೆಯಿತು. ಕಡೆಗೆ ಭೇತಾಳನು ಹೀಗೆಂದನು: ''ಎಲೈ ರಾಜನೆ, ನಿನ್ನ ಬುದ್ಧಿವಂತಿಕೆಯಿಂದಲೂ ಧರ್ಮಪರತೆಯಿಂದಲೂ ತುಂಬಾ ಸಂತುಷ್ಟನಾದೆನು. ಈಗ ನಾನು ಹೇಳುವುದ ಕೇಳು. ನೀನು ಆ ಕಾಪಾಲಿಕಸನ್ಯಾಸಿಯಬಳಿಗೆ ನನ್ನನ್ನು ಕರೆದೊಯ್ದರೆ, ಅವನು ನಿನ್ನನ್ನು ಯಜ್ಞಕುಂಡಕ್ಕೆ ಸಾಷ್ಟಾಂಗವಾಗಿ ನಮಸ್ಕರಿಸಹೇಳಿ, ನೀನು ಮಲಗಿದಕೂಡಲೆ ನಿನ್ನಶಿರವನ್ನು ತರಿದು ಪೂರ್ಣಾಹುತಿ ಕೊಟ್ಟು ತಾನು ಅನೇಕ ಸಿದ್ಧಿಗಳನ್ನು ಹೊಂದುವನು. ಅದಕ್ಕೆ ಪ್ರತಿಯಾಗಿ ''ನೀನೇ ಪ್ರಣಾಮವಿಧಿಯನ್ನು ಮಾಡಿ ತೋರಿಸು'' ಎಂದು ನೀನು ಕೇಳಿದರೆ, ಅವನು ಪ್ರಣಾಮ ಮಾಡುವನು. ಆಗ ನೀನೇ ಅವನ ಶಿರವನ್ನ ಖಂಡಿಸಿ ಪೂರ್ಣಾಹುತಿ ಮಾಡು. ಯಜ್ಞದೇವತೆಯು ನಿನ್ನವಳಾಗುವಳು'' ಎಂದನು. ವಿಕ್ರಮಾದಿತ್ಯನು ಭೇತಾಳನು ಹೇಳಿದಂತೆಯೇ ಎಲ್ಲವನ್ನೂ ನಡೆಸಲು, ದೇವತೆಯು ಪ್ರತ್ಯಕ್ಷಳಾಗಿ ''ವರವನ್ನು ಬೇಡು''ಎಂದಳು.

ವಿಕ್ರಮನು: '' ದೇವಿ, ಈ ಕಾಪಾಲಿಕನನ್ನು ಬದುಕಿಸಿ ಅವನ ಇಷ್ಟಗಳನ್ನು ನೆರವೇರಿಸು. ನಾನು ಸ್ಮರಿಸಿದಾಗ ನನ್ನಲ್ಲಿ ದಯೆ ಮಾಡು.''

ದೇವಿಯು "ಹಾಗೆಯೇ ಆಗಲಿ" ಎಂದು ಅಂತರ್ಧಾನವಾದಳು.

ಕಾಪಾಲಿಕನು ಸಂತುಷ್ಟಚಿತ್ತನಾಗಿ ವಿಕ್ರಮನನ್ನು ಹೊಗಳುತ್ತಾ ನಡೆದನು. ವಿಕ್ರಮನು ಭೇತಾಳನ ಸ್ನೇಹವನ್ನು ಸಂಪಾದಿಸಿ ನಗರಕ್ಕೆ ತೆರಳಿದನು. ಇಂತಹ ಶೌರ್ಯೌದಾರ್ಯಗಳು ಭೋಜರಾಜನಲ್ಲಿರುವುವೆ ? "

ಭೋಜನು ನಸುನಗುತ ಹಿಂದಕ್ಕೆ ತೆರಳಿದನು.

* * *

ಇನ್ನೊಂದುಸಲ —ಇದು ಮೂವತ್ತೆರಡನೆಯಸಲ— ಭೋಜನು ವಿಕ್ರಮನ ಸಿಂಹಾಸನದ ಬಳಿಗೆ ಬರಲು, ಕಡೆಯ ಸಾಲಭಂಜಿಕೆಯು ಹೀಗೆ ನುಡಿಯಿತು:—

"ಎಲೈರಾಜನೆ, ನೀನು ಪುನಃ ಪುನಃ ಈ ಸಿಂಹಾಸನವನ್ನು ಆರೋಹಿಸಲು ಏಕೆ ಬಯಸುವಿ? ವಿಕ್ರಮಾದಿತ್ಯನಲ್ಲಿದ್ದ ಶೌರ್ಯ, ಔದಾರ್ಯ, ಧೈರ್ಯ, ದಯೆ, ಕ್ಷಮೆ, ಭಕ್ತಿ, ಜ್ಞಾನ, ವೈರಾಗ್ಯ, ತೇಜಸ್ಸು, ಓಜಸ್ಸು, ಬಲ ಇವೇ ಮುಂತಾದ ಸದ್ಗುಣಗಳು ಇತರರಲ್ಲಿ ಇಲ್ಲವು. ನಾವಾದರೋ ದೇವಕನ್ಯೆಯರು. ಹಿಂದೆ ನಾವು ಒಂದುವನದಲ್ಲಿ ವಿನೋದದಲ್ಲಿರಲು, ಆ ಪ್ರಾಂತದಲ್ಲಿ ಹೋಗುತ್ತಿದ್ದ ಪರಮೇಶ್ವರನು ನಮ್ಮನ್ನು ಕಂಡು ನಮ್ಮಲ್ಲಿ ಅನುರಾಗವನ್ನು ತೋರಿದನು. ಪಾರ್ವತಿಯು ಅದನ್ನರಿತು, ನಮ್ಮಲ್ಲಿ ಅಸೂಯೆಪಟ್ಟು, "ನೀವು ಇಂದ್ರಸಿಂಹಾಸನದಮೇಲಿನ ಪ್ರತಿಮೆಗಳಾಗಿರಿ" ಎಂದು ಶಪಿಸಿದಳು. ಆಗ ನಾವು ಆಕೆಯಲ್ಲಿ ಹೋಗಿ ಮೊರೆಯಿಡಲು, ಆಕೆಯು "ಕೆಲವುಕಾಲದ ಮೇಲೆ ಆ ಸಿಂಹಾಸನವು ಇಂದ್ರನಿಂದ ವಿಕ್ರಮಾದಿತ್ಯನಿಗೆ ಕೊಡಲ್ಪಡುವುದು. ಆರಾಜಶ್ರೇಷ್ಠನು ಸ್ವರ್ಗಸ್ಥನಾದ ಕೆಲವು ಕಾಲದಮೇಲೆ ಮತ್ತೊಬ್ಬ ರಾಜೋತ್ತಮನು ಆ ಪೀಠವನ್ನು ಹತ್ತಲು ಪ್ರಯತ್ನಿಸುವನು.

ಅವನಿಗೆ ನೀವು ವಿಕ್ರಮನ ಗುಣಗಳನ್ನು ವರ್ಣಿಸಿ ನಿಮ್ಮ ನಿಜ ರೂಪವನ್ನು ಹೊಂದುವಿರಿ" ಎಂದಳು. ಈಗ ನಮ್ಮ ಶಾಪವಿಮೋಚನೆಯು ಆಯಿತು. ಇನ್ನು ನಾವು ದೇವಲೋಕಕ್ಕೆ ಹೊರಡುವೆವು. ನೀನು ವಿಕ್ರಮನ ಸದ್ಗುಣಗಳನ್ನು ಅವಲಂಬಿಸಿ ನಡೆದು, ಚಿರಕಾಲ ಬಾಳಿ ಕೀರ್ತಿವಂತನಾಗು. ನಿನಗೆ ಶುಭವಾಗಲಿ."

ಹೀಗೆ ಆ ಪಾಂಚಾಲಿಕೆಯು ಹೇಳಿದೊಡನೆಯೆ, ಆ ಮೂವತ್ತೆರಡು ಪ್ರತಿಮೆಗಳೂ ಮಾಯವಾಗಿ ಅಷ್ಟು ಮಂದಿ ದಿವ್ಯ ಸ್ತ್ರೀಯರು ಅಲ್ಲಿ ನಿಂತಿದ್ದರು. ಅವರುಗಳಿಂದ ಪ್ರತ್ಯೇಕ ಪ್ರತ್ಯೇಕವಾಗಿ ಭೋಜನು ಆಶೀರ್ವಾದವನ್ನೂ ಅನೇಕ ವರಗಳನ್ನೂ ಪಡೆದಮೇಲೆ ಅವರೂ ಮಾಯವಾದರು.

ಭೋಜನು ವಿಕ್ರಮನ ಕಥೆಗಳು ಮುಗಿದು
ಹೋದವಲ್ಲಾ ಎಂದು ವ್ಯಸನಪಟ್ಟು, ಆತನ
ಗುಣಗಳನ್ನು ಪದೇಪದೇ ಸ್ಮರಿಸುತ್ತಾ,
ಅಭ್ಯಾಸಮಾಡುತ್ತಾ, ಆ ಸಿಂಹಪೀಠ
ವನ್ನು ಅರಮನೆಯಲ್ಲಿರಿಸಿ ಪ್ರತಿನಿ
ತ್ಯವೂ ಪೂಜಿಸುತ್ತಾ, ಬಹು
ಕಾಲ ಧರ್ಮದಿಂದ ರಾಜ್ಯ
ಪರಿಪಾಲನೆಮಾಡಿ,
ಯಶಸ್ವಿಯಾದನು.

# ಸಸೇಮಿರಾ

ಮಹಾರಾಜನಾದ ಭೋಜನಕೀರ್ತಿಯು ನಾಲ್ಕು ದಿಕ್ಕುಗಳಲ್ಲಿಯೂ ವ್ಯಾಪಿಸಿತ್ತು. ದೇಶದೇಶಗಳಿಂದಲೂ ಕವಿಗಳೂ, ಪಂಡಿತರೂ, ಶಾಸ್ತ್ರಜ್ಞರೂ ಧಾರಾನಗರಕ್ಕೆ ಬಂದು ಆತನ ಸಭೆಯಲ್ಲಿ ನೆರೆದು, ಆತನಿದಿರಿಗೆ ವಿದ್ಯಾಪ್ರದರ್ಶನಮಾಡಿ, ಯಥಾಯೋಗ್ಯವಾದ ಬಹುಮಾನಗಳನ್ನು ಪಡೆದು ಹೋಗುತ್ತಿದ್ದರು. ಬಂದಾನೊಂದುದಿನ ಒಬ್ಬ ಚಿತ್ರಗಾರನೂ ಭೋಜನಾಸ್ಥಾನಕ್ಕೆ ಬಂದನು. ಅವನ ಶಿಲ್ಪಿಶಾಸ್ತ್ರನೈಪುಣ್ಯವೂ, ಚಮತ್ಕೃತಿಯೂ ಅದ್ಭುತವಾದುವು. ಅವನು ರಾಜಾ ರವಿವರ್ಮನಿಗಿಂತಲೂ ಶ್ರೇಷ್ಠನೆಂದು ತೋರುತ್ತದೆ. ಏಕೆಂದರೆ ಅವನು ಯಾರೊಬ್ಬರ ದೇಹದ ಕೆಲವು ಲಕ್ಷಣಗಳನ್ನು ತಿಳಿದುಕೊಂಡಮಾತ್ರದಿಂದಲೇ, ಅವರ ರೂಪವನ್ನು ಸ್ವಲ್ಪವೂ ಹೆಚ್ಚುಕಡಮೆಯಿಲ್ಲದಂತೆ ಚಿತ್ರಿಸುತ್ತಿದ್ದನಂತೆ! ಭೋಜಮಹಾರಾಜನು, ಅವನ ಯೋಗ್ಯತೆಯನ್ನು ಪರೀಕ್ಷಿಸುವುದಕ್ಕಾಗಿ, ತನ್ನ ಪಟ್ಟದರಸಿಯ ತಲೆಗೂದಲುಗಳೊಂದೆರಡನ್ನು ಅವನಿಗೆ ಕೊಟ್ಟು, ಅವುಗಳ ಸಹಾಯದಿಂದ ಆಕೆಯ ಶರೀರಾಕೃತಿಯನ್ನು ನಿರ್ಧರಿಸಿ, ಗೋಪ್ಯವಾಗಿ ಚಿತ್ರಿಸಿ ತನಗೆ ತೋರಿಸಬೇಕೆಂದು ಆಜ್ಞಾಪಿಸಿದನು. ಚಿತ್ರಕಾರನು ಅದಕ್ಕೆ ಸಮ್ಮತಿಸಿ ತನ್ನ ಕೆಲಸವನ್ನು ಪ್ರಕ್ರಮಿಸಿದನು.

ಕೆಲವು ದಿನಗಳು ಕಳೆದವು. ಚಿತ್ರವೆಲ್ಲವೂ ಸಂಪೂರ್ಣವಾಯಿತು. ಭೋಜನ ರಾಣಿಯ ರೂಪಲಾವಣ್ಯಗಳು ಅದರಲ್ಲಿ ಎಳ್ಳಷ್ಟೂ ವ್ಯತ್ಯಾಸವಿಲ್ಲದೆ ಕಾಣಬರುತ್ತಿದ್ದವು. ಚಿತ್ರಕಾರನು ಅದರಲ್ಲಿ ಜೀವಕಳೆಯನ್ನು ತುಂಬಿ ತನ್ನ ಕೌಶಲ್ಯವನ್ನು ತಾನೇ ಪರೀಕ್ಷಿಸಿನೋಡಿ ಹಿಗ್ಗಲಾರಂಭಿಸಿದನು; ಕೇಶರಾಶಿಯನ್ನು ನೋಡಿದನು; ದೃಷ್ಟಿಗಳನ್ನು ನೋಡಿದನು; ಮಂದಸ್ಮಿತವನ್ನು ನೋಡಿ

ದನು; ಹಾಗೆಯೇ ಅಂಗಾಂಗಗಳನ್ನೆಲ್ಲಾ ಒಂದೊಂದಾಗಿ ಎವೆಯಿಕ್ಕದೆ ನೋಡುತ್ತಾ ಬಂದನು; ಬರುತಬರುತ ಅವನ ಕಣ್ಣು ಮುಖ್ಯಭಾಗವನ್ನು ಸೇರಿದೊಡನೆಯೇ ಅವನು ಸ್ತಬ್ಧನಾದನು! "ಇದೇನು? ಇಷ್ಟೊಂದು ಜಾಗರೂಕನಾಗಿ, ವ್ಯಾಸೆಲ್ಲಾ ಕಣ್ಣು ಮಾಡಿಕೊಂಡು ಬರೆದಿರುವ ಈ ಆಕಾರದಲ್ಲಿ ಕಿಬ್ಬೊಟ್ಟೆಯ ಮೇಲಕ್ಕೆ ಈ ಪುಟ್ಟ ಮಚ್ಚೆಯು ಹೇಗೆ ಬಂದಿತು? ಇರಲಿ. ಮಸಿಯ ಚುಕ್ಕೆಯೇನಾದರೂ ಪ್ರಮಾದದಿಂದ ಬಿದ್ದಿರಬಹುದು."ಎಂದಂದುಕೊಂಡು, ಚಿತ್ರಕಾರನು ಆ ದೋಷವನ್ನು ತೆಗೆಯಲು ಪ್ರಯತ್ನಮಾಡಿದನು. ಏನೇನೋ ಸಾಹಸಮಾಡಿದನು. ಏನು ಮಾಡಿದರೂ ಆ ಗುರುತು ಹೋಗಲೊಲ್ಲದು. ಅಳಿಸಿದರೆ ಹೋಗದು, ಆಯುಧದಿಂದ ಕೆರೆದರೆ ಹೋಗದು, ಮೇಲೆ ಬಣ್ಣ ಬಳಿದರೂ ಹೋಗದು. ಮಾಡುವುದೇನು? ಎಷ್ಟೋ ಕಷ್ಟಪಟ್ಟು ಅಣಿ ಮಾಡಿದ ಚಿತ್ರದಲ್ಲಿ ಅದು ಬಂದೇ ಕುಂದು.

ಆ ಚಿತ್ರಕಾರನು ಈ ಕಷ್ಟದಲ್ಲಿ ಸಿಕ್ಕಿ ಸಂಕಟಪಡುತ್ತಿರುವಾಗ ಕಾಳಿದಾಸನು * ಆ ದಾರಿಯಲ್ಲಿ ಹೋಗುತ್ತಿದ್ದ, ಚಿತ್ರಕಾರನನ್ನು ಕಂಡು "ಎಲೈ, ಏಕೆ ಚಿಂತಾಕ್ರಾಂತನಾಗಿ ಕಾಣುವೆ? ನಿನಗೆ ನನ್ನಿಂದಾಗಬಲ್ಲ ಸಹಾಯ್ಯವೇನಾದರೂ ಇದ್ದರೆ ದಯೆಯಿಟ್ಟು ತಿಳಿಸು. ಶಿರಸಾವಹಿಸಿ ಮಾಡುವೆನು." ಎಂದು

---

*ಈ ಕಾಳಿದಾಸನೂ ವಿಕ್ರಮಾದಿತ್ಯನ ಸಭೆಯಲ್ಲಿದ್ದ ಕಾಳಿದಾಸನೂ ಒಬ್ಬ ವ್ಯಕ್ತಿಯೇ ಎಂದು ನಂಬುವುದು ಕಷ್ಟವಾಗಿದೆ; ಏಕೆಂದರೆ ವಿಕ್ರಮನ ಕಾಲಕ್ಕೂ ಭೋಜನ ಕಾಲಕ್ಕೂ ನೂರು ವರ್ಷಗಳಿಗಿಂತಲೂ ಹೆಚ್ಚಿನ ಅಂತರವುಂಟೆಂದು ಗೊತ್ತಾಗಿದೆ. ಆದರೆ ಇಲ್ಲಿ ನಾವು ಹೇಳುತ್ತಿರುವುದು ಕಥೆಯಾದಕಾರಣ ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ದೂರವಿಡಬೇಕಾಗಿದೆ.

ಹೇಳಿದನು. ಚಿತ್ರಗಾರನು ಇದ್ದ ಸಂಗತಿಯನ್ನು ಬಿನ್ನಯಿಸಲು, ಕವಿಕುಲತಿಲಕನಾದ ಕಾಳಿದಾಸನು ಕೆಲವು ನಿಮಿಷಗಳು ಆಲೋಚಿಸಿ, "ಎಲೈ, ಅದಂತೆಯೇ ಇರಲಿ! ಅದು ಆಕೆಯ ದೇಹದಲ್ಲಿರುವ ಕುರುಹನ್ನೇ ಸೂಚಿಸುವದು?" ಎಂದನು. ಚಿತ್ರಗಾರನು ಆ ಪ್ರತ್ಯುತ್ತರದಿಂದ ಸಂತುಷ್ಟನಾದನು. ವರಕವಿಗಳಿಗೂ ಶಾಸ್ತ್ರಜ್ಞರಿಗೂ ಇದೇ ವ್ಯತ್ಯಾಸ. ಶಾಸ್ತ್ರಜ್ಞರು ತಮ್ಮ ಶಾಸ್ತ್ರಗಳನ್ನು ಅಕ್ಷರಶಃ,—ಚಾಚೂ ತಪ್ಪದಂತೆ—ಅನುಸರಿಸುವರು. ವರಕವಿಗಳಾದರೋ ಸೃಷ್ಟಿಯ ತತ್ತ್ವವನ್ನು ಮೊದಲೇ ತಿಳಿದಿರುವರು.

ಚಿತ್ರವು ದೊರೆಯ ಬಳಿಗೆ ಒಯ್ಯಲ್ಪಟ್ಟಿತು. ರಸಿಕಾಗ್ರೇಸರನಾದ ಭೋಜನು ಅದನ್ನು ನೋಡಿ ಆನಂದಿಸಿದನು. ಆತನು ಆ ಚಿತ್ರದಲ್ಲಿನ ಮೂರ್ತಿಯ ಅಂಗಸೌಷ್ಠವವನ್ನು ನೋಡುತ್ತಿರುವಾಗ ಆತನ ದೃಷ್ಟಿಯು ಹಠಾತ್ತಾಗಿ ಆ ತೊಡೆಯ ಚುಕ್ಕೆಯ ಮೇಲೆ ಬೀಳಲೇಬಿತ್ತು! ಒಡನೆಯೇ ದೊರೆಯು ಹುಬ್ಬುಗಂಟಿಕ್ಕಿದನು! ನಸುನಗುವಿನಿಂದ ಸೊಗಯಿಸುತ್ತಿದ್ದ ಮುಖವು ಕೋಪದಿಂದ ಸಂಕುಚಿತವಾಯಿತು! ಕ್ರೂರಧ್ವನಿಯಿಂದ "ಎಲೈ! ಈ ಮುಚ್ಚಿಯಿರುವ ಸಂಗತಿಯು ನಿನಗೆ ಹೇಗೆ ತಿಳಿಯಿತು? ಅದನ್ನು ಕುರಿತು ನಿನಗೆ ಹೇಳಿದವರಾರು? ಹೇಳದಿದ್ದರೆ, ಮರಣಶಾಸನವನ್ನು ವಿಧಿಸಿಯೇನು!" ಎಂದು ಗರ್ಜಿಸಿದನು. ಇನ್ನೇನುಗತಿ! ಚಿತ್ರಗಾರನ ಚಿಂತೆಗೆ ಪಾರವೇ ಇಲ್ಲ. ದಿಕ್ಕುತೋಚದೆ, ಆತನು ಕಾಳಿದಾಸನ ಹೆಸರನ್ನು ಹೇಳಿಯೇಬಿಟ್ಟನು. ಭೋಜನು ವಿಸ್ಮಿತನಾದನು. ಕಾಳಿದಾಸನು ಅಲ್ಲಿಯೇ ಇದ್ದ. ಚಿತ್ರಗಾರನ ಹೇಳಿಕೆಯನ್ನು ಕೇಳಿದನಾದರೂ ಬಾಯಿಬಿಡಲಿಲ್ಲ. ಭೋಜನು ಏನೇನೋ ಯೋಚಿಸಲಾರಂಭಿಸಿದನು. "ಅದು ಹೇಗಾದೀತು? ಆ ಗುರುತು ನನಗಲ್ಲದೆ ಮತ್ತೊಬ್ಬ ಪುರುಷನಿಗೆ ಹೇಗೆ ತಿಳಿದೀತು?

ಅವಳ ಅಂತರಂಗ ಭಾಗದ ಗುರುತು ಕಾಳಿದಾಸನಿಗೆ ತಿಳಿಯಬೇಕಾದರೆ ಅದನ್ನವನು ಕಣ್ಣಾರ ನೋಡಿರಬೇಕು. ಅದು ನಿಜವೇ ಆದರೆ ಅವಳಿಗೂ ಅವನಿಗೂ ರಹಸ್ಯವಾಗಿ ಸಂಬಂಧವಿರಲೇಬೇಕು. ಹಾಗಿಲ್ಲದಿರುವುದು ಸಾಧ್ಯವಿಲ್ಲ. '' ಹೀಗೆಂದು ಯೋಚಿಸಿ, ಕಡೆಗೆ ಕಾಳಿದಾಸನಿಂದ ತನ್ನ ಸತಿಯ ಪಾತಿವ್ರತ್ಯವು ಕೆಟ್ಟು ಹೋಯಿತೆಂದು ನಿಶ್ಚಯಿಸಿದನು. ಹಾಗೆ ನಿಶ್ಚಯಿಸಿ, ಕಾಳಿದಾಸನಿಗೆ ಶಿರಚ್ಛೇದನ ಶಿಕ್ಷೆಯನ್ನು ವಿಧಿಸಿದನು. ಬುದ್ಧಿಶಾಲಿಯಾದ ಭೋಜನ ಮಂತ್ರಿಯು ಈ ಸಂಗತಿಗಳನ್ನೆಲ್ಲಾ ತಿಳಿದು, ಕಾಳಿದಾಸನನ್ನು ತನ್ನ ಮನೆಯಲ್ಲಿ ಬಚ್ಚಿಟ್ಟು, ಅವನ ತಲೆಯು ತೆಗೆಯಲ್ಪಟ್ಟಿತೆಂದು ಅರಸಿಗೆ ವಿಜ್ಞಾಪಿಸಿದನು. ಆ ಮೇಲೆ ಸ್ವಲ್ಪಕಾಲ ಜರುಗಿತು.

ಒಂದಾನೊಂದುದಿನ ಭೋಜಪುತ್ರನು ಬೇಟೆಗಾಗಿ ಕಾಡಿಗೆ ಹೋದನು. ಕೆಲಸವಿಲ್ಲದ ಸೋಮಾರಿಗಳಿಗೆ ‹‹ ಇಸ್ಪೀಟು ,, ಆಟವು ಹೇಗೆಪ್ರಿಯವೋ, ಮೃಗಯಾವ್ಯಸನವು ರಾಜಪುತ್ರರಿಗೆ ಹಾಗೆ. ‹‹ ಇಸ್ಪೀಟು ,, ಆಡಲು ಕೂತವರು ಹೇಗೆ ಆಟವನ್ನು ಬಿಡಲು ಇಷ್ಟಪಡುವುದಿಲ್ಲವೋ, ಹಾಗೆಯೇ ರಾಜಪುತ್ರರು ಬೇಟೆಯಿಂದ ಹಿಂದಿರುಗಲು ಇಷ್ಟವುಳ್ಳವರಾಗುವುದಿಲ್ಲ. ಭೋಜನ ಮಗನು ಯಾವುದೋ ಒಂದು ಪ್ರಾಣಿಯನ್ನು ಹಿಂಬಾಲಿಸಿ ಕಾಡಿನೊಳಕ್ಕೆ ಬಲುದೂರಹೋದನು. ಅವನ ಚಾರರು ಅವನನ್ನು ಅನುಸರಿಸಲಾರದೆ ಹೋದರು. ಅಷ್ಟರಲ್ಲಿಯೇ ಸೂರ್ಯನು ಅಸ್ತಂಗತನಾದನು.

ವ್ಯಸನಿನ ಇವ ವಿದ್ಯಾ ಕ್ಷೀಯತೇ ಪಂಕಜಶ್ರೀಃ
ಗುಣಿನ ಇವ ವಿದೇಶೇ ದೈನ್ಯಮಾಯಾಂತಿ ಭೃಂಗಾಃ।
ಕುನೃಪತಿರಿವ ಲೋಕಂ ಪೀಡಯತ್ಯಂಧಕಾರಃ
ಧನಮಿವ ಕೃಪಣಸ್ಯ ವ್ಯರ್ಥತಾಮೇತಿ ಚಕ್ಷುಃ॥(ಕಾಳಿದಾಸ)

ಭೋಗಾಸಕ್ತನ ವಿದ್ಯೆಯಂತೆ ಕಮಲದ ಕಾಂತಿಯು ತಗ್ಗಿತು; ಪರದೇಶಕ್ಕೆ ಹೋದಸಜ್ಜನರಂತೆ ದುಂಬಿಗಳು ನಿರಾಶ್ರಯವಾದವು; ದುಷ್ಟರಾಜನಂತೆ ಕತ್ತಲೆಯು ಲೋಕಗಳನ್ನು ಬಂಧಿಸತೊಡಗಿತು; ಲೋಭಿಯ ಹಣದಂತೆ ಕಣ್ಣುಗಳು ನಿಷ್ಪ್ರಯೋಜನವಾದವು. ಭೋಜಪುತ್ರನು ಪಾದತಕ್ಕದೆ ನನಿ ಅವನು ದಣಿದಿದ್ದನು. ಹಸಿವು ಬಾಯಾರಿಕೆಗಳು, ಆವನನ್ನೂ ಅವನಕುದುರೆಯನ್ನೂ ಕಾಡುತ್ತಿದ್ದವು. ಆಗ ಹೋಗುವದೆಲ್ಲಿ! ಈ ಕಷ್ಟದಲ್ಲಿ ಅವನಿರುವಾಗ ಅನತಿದೂರದಲ್ಲಿ ಹುಲಿಯೊಂದು ಅವನ ಕಣ್ಣಿಗೆ ಕಾಣಿಸಿತು. ರೋಷಾವೇಶದಿಂದ ಓಡಿಬರುತ್ತಿದ್ದ ಆ ಹುಲಿಯಬಾಯಿಯಿಂದ ಅವನು ತಪ್ಪಿಸಿಕೊಳ್ಳುವುದು ಹೇಗೆ! ಕುದುರೆಯು ಮುಂದೆ ನಡೆಯದು. ಭೋಜನ ಪುತ್ರನು ಸ್ತಂಭೀಭೂತನಾದನು. ವ್ಯಾಘ್ರವು ಬಹಳ ಸಮೀಪಕ್ಕೆ ಬಂದಿತು. ಆಗ ಅವನು ಒಂದು ಮರದ ಕೊಂಬೆಯನ್ನು ಹಿಡಿದುಕೊಂಡು ಮೇಲಕ್ಕೆ ಹಾರಿದನು ; ಮರದಮೇಲಾದರೂ ಅವನಿಗೆ ಸ್ಥಳವುಂಟೆ ? ಇಲ್ಲ. ವಿಧಿವಿಲಾಸವನ್ನೇನೆಂದು ಹೇಳೋಣ ! ಮಂದಭಾಗ್ಯನಾದ ಆ ಹುಡುಗನಿಗೆ ಆ ಕ್ಷಣದಲ್ಲಿ ಉಂಟಾಗಿದ್ದ ದುರವಸ್ಥೆಯನ್ನು ಊಹಿಸಿ ತಿಳಿಯಬೇಕೇ ಹೊರತು ಹೇಳತೀರದು. ಮರದಮೇಲೊಂದು ಕರಡಿಯು ಕುಳಿತಿತ್ತು. ಅವನು ಮರದಡಿಯಲ್ಲಿರಬೇಕೆ ? ಮರದಮೇಲಿರಬೇಕೆ ? ಪಾಠಕರೆ, ಯೋಚಿಸಿ ಹೇಳಿರಿ.

ಆದರೆ ಆ ಕರಡಿಯು ಮನುಷ್ಯಪ್ರಾಣಿಯಷ್ಟು ಕಲ್ಲೆದೆಯದಾಗಿರಲಿಲ್ಲ. ಆ ಹತಭಾಗ್ಯನನ್ನು ನೋಡಿ ಅದರ ಮನಸ್ಸು ಕರಗಿತು. ಅದು ಆ ಬಾಲಕನನ್ನ ಒಳಿಗೆ ಕರೆದು, ಒಳ್ಳೆಯಮಾತುಗಳಿಂದ ಸಮಾಧಾನಪಡಿಸಿ, ಅವನಿಗೆ ತನ್ನಿಂದ ಕೇಡಾಗಲಾರದೆಂದು ಅಭಯವನ್ನು ಕೊಟ್ಟು, ಅವನನ್ನು ತನ್ನ ತೊಡೆಯಮೇಲೆ ಮಲಗಿಸಿಕೊಂಡು ನಿದ್ದೆ ಮಾಡಿಸಿತು.

ಕೆಳಗೆ ನಿಂತಿದ್ದ ಕ್ಷುದ್ರಜಂತುವು ಉದಾರಿಯಾದ ಕರಡಿಯ ನ್ನು ಕುರಿತು "ಮಿತ್ರನೆ! ಅದೇಕೆ ಹೀಗೆಮಾಡುವೆ? ಮನುಷ್ಯ ನು ನಮ್ಮೆಲ್ಲರಿಗೂ ವೈರಿಯಲ್ಲವೆ? ನಮ್ಮ ರಾಜ್ಯವಾದ ಅರಣ್ಯ ವೆಲ್ಲವೂ ಅವನ ರಾಜ್ಯವಾದ ಊರಾಗುತ್ತಿರುವುದಲ್ಲವೆ? ನಮ್ಮ ಸಿಂಹಶಪ್ರಸ್ತೃತ್ವ ಅವನಿಂದ ನಾಶವಾಗಿರುವುದಲ್ಲವೆ?" ಎಂದು ಮೊದಲಾದ ಅನೇಕ ಕಪಟೋಕ್ತಿಗಳನ್ನಾಡಲಾರಂಭಿಸಿ ತು ಯಾವ ಉಪಾಯದಿಂದಲೂ ಕರಡಿಯು ಹುಲಿಯಮಾರ್ಗ ಕ್ಕೆ ಬರಲಿಲ್ಲ.

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಂ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ॥
ನ್ಯಾಯ್ಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

(ಭರ್ತೃಹರಿ)

ನೀತಿಶಾಸ್ತ್ರಜ್ಞರು ದೂಷಿಸಲಿ, ಭೂಷಿಸಲಿ; ಸಂಪತ್ತು ಬರಲಿ, ಹೋಗಲಿ; ಮರಣವೀಗಲೆ ಆಗಲಿ, ಈಗಾಗದಿರಲಿ: ಧೀರರು ನ್ಯಾ ಯಮಾರ್ಗವನ್ನು ತಪ್ಪುವುದಿಲ್ಲ. ಆ ಕರಡಿಯು ಅ ತಪ ಧೀ ರಸ್ವಭಾವವುಳ್ಳುದು. ಅದು ಹುಲಿಯಮಾತಿಗೆ ಕಿವಿಗೊಡದೆ, ತಾ ನೂ ಮಲಗಿ ನಿದ್ರಿಸಿತು.

ಸ್ವಲ್ಪಹೊತ್ತಿನಮೇಲೆ ಭೋಜಪುತ್ರನೆಚ್ಚೆತ್ತನು. ಅವನ ಆ ಶ್ರಯವಾದ ಕರಡಿಯು ಗಾಢನಿದ್ರೆಯಲ್ಲಿತ್ತು. ದುಷ್ಟಮೃಗವು ಹೊಂಚುಹಾಕುತ್ತಾ ಇನ್ನೂ ಮರದಡಿಯಲ್ಲಿಯೇ ನಿಂತಿತ್ತು. ರಾಜಪುತ್ರನು ನಿದ್ರೆಯಿಂದೆಚ್ಚರಗೊಂಡುವನ್ನು ತಿಳಿದು, ಹುಲಿ ಯು ಈ ರೀತಿ ಹೇಳಲಾರಂಭಿಸಿತು: "ಎಲೈ ತರುಣನೆ! ನೀನು ರಾಜಕುಮಾರನಂತೆ ಕಾಣುತ್ತಿರುವೆ. ನೀನು ಶೂರನು, ಔದಾರ್ಯ ವು ರಾಜರಿಗೆ ಸಹಜವಾದಗುಣ. ನಾನು ಎಷ್ಟೋದಿನಗಳಿಂದ

ಆಹಾರವಿಲ್ಲದೆ ಹಸಿದಿರುವೆನು. ನಿದ್ರಿಸುತ್ತಿರುವ ಆ ಕರಡಿಯನ್ನು ಕೆಳಕ್ಕೆ ತಳ್ಳುವೆಯಾದರೆ ನೀನು ನನಗೆ ಅನ್ನದಾನಮಾಡಿದಂತಾಗುವುದು? ನೀನು ಹಾಗೆ ಮಾಡದಿದ್ದರೆ, ನಾನು ಹಸಿವಿನಿಂದ ಸಾಯುವೆನಲ್ಲದೆ, ನೀನೂ ವಂಚಕನಾದಾಕರಡಿಯಿಂದ ಹತನಾಗುವೆ ? ಆಕ್ಷುದ್ರಜಂತುವನ್ನು ನಂಬಬಹುದೆ? ಕರಡಿಯು ನಂಬಿಸಿ ಮೋಸಮಾಡುವ ದ್ರೋಹಿ. ಅದನ್ನು ಕೆಳಕ್ಕೆ ನೂಕಿದೆಯಾದರೆ ನಾನು ಅದನ್ನೆತ್ತಿಕೊಂಡು ಹೋಗುವೆನು. ನಿನಗೂ ಕ್ಷೇಮವುವಾಗಿರಬಹುದು.'' ಎಂದು ಬಹುವಿಧವಾಗಿ ಹೇಳಿತು. ಆ ಬಾಲಕನು ತನ್ನ ಪೂರ್ವಕರ್ಮದಿಂದ ಪ್ರೇರಿತನಾಗಿ, ಹುಲಿಯಮಾತಿಗೊಡಂಬಟ್ಟು, ತನಗೆ ಪ್ರಾಣದಾನಮಾಡಿದ ಉದಾರಿಯನ್ನು ಶತ್ರುವಿನಕೈಗೆ ಬಿಟ್ಟುಕೊಡುವವನಾಗಿದ್ದನು. ಹಾ ! ಕೃತಘ್ನನೆ !! ನೀಚನೆ !!! ಉಪಕಾರಸ್ಮರಣೆಯಿಲ್ಲದಿರುವುದು ಮನುಷ್ಯಜಾತಿಗೆ ಸಾಮಾನ್ಯವಾಗಿರುವುದು. ಸೃಷ್ಟಿಯಲ್ಲಿನ ಎಲ್ಲಾಪ್ರಾಣಿಗಳೂ, ಸಸ್ಯಗಳೂ ಕೂಡ ಮನುಷ್ಯನಿಗೆ ಉಪಕಾರಮಾಡುತ್ತಿರುವುವು. ಅವನು ಅದಕ್ಕೆ ಪ್ರತಿಯಾಗಿ ಎಲ್ಲರಿಗೂ ಅಪಕಾರವನ್ನೇ ಎಸಗುವನು. ಈ ದುಷ್ಟಗುಣವು ಭೋಜಪುತ್ರನಾದ ನಿನ್ನಲ್ಲಿಯೂ ಇರಬಹುದೆ ?

ದೈವಾಧೀನದಿಂದ ಕರಡಿಯು ಎಚ್ಚೆತ್ತುಕೊಂಡಿತು. ಎಚ್ಚೆತ್ತು, ಆ ಮಿತ್ರದ್ರೋಹಿಯಮೇಲೆ ಆಗ್ರಹಗೊಂಡು, ಅವನ ನಾಲಿಗೆಯನ್ನೀಚೆಗೆಳೆದು, ಅದರಮೇಲೆ ‹‹ ಸಸೇಮಿರಾ ›› ಎಂಬಕ್ಷರಗಳನ್ನು ಬರೆದು, ತನ್ನಿಚ್ಛೆಯಿದ್ದಂತೆ ಹೋಯಿತು. ಹುಲಿಯೂ ಹೊರಟುಹೋಯಿತು. ರಾತ್ರಿಯೂ ಕಳೆಯಿತು. ಅರುಣೋದಯವಾದೊಡನೆಯೆ ರಾಜಭಟರು ರಾಜಕುಮಾರನನ್ನು ಹುಡುಕಹೊರಟರು. ಮಧ್ಯಾಹ್ನದಹೊತ್ತಿಗೆ ಅವರು ಭೋಜಪುತ್ರನಿದ್ದೆಡೆಗೆ ಬಂದರು. ಅವನು ಏನೂ ಮಾತನಾಡಲಾರದವನಾಗಿದ್ದ

ನು. ಅವರೇನು ಕೇಳಿದರೂ "ಸಸೇಮಿರಾ", ಎಂದೇ ಪ್ರತ್ಯುತ್ತರಕೊಡುವನು. ಅವರು ಅವನ ವಿಷಯವನ್ನು ತಿಳಿದುಕೊಳ್ಳಬೇಕೆಂದು ಪರಿಪರಿಯಾಗಿ ಪ್ರಯತ್ನಪಟ್ಟರು. ಏನೂ ಸಾರ್ಥಕವಾಗಲಿಲ್ಲ. ಅವರು ಮಹದ್ವ್ಯಸನದಿಂದ ಕೂಡಿದವರಾಗಿ ಆತನನ್ನು ಕರೆದುಕೊಂಡು ಭೋಜನ ಬಳಿಗೆ ಹೋದರು. ಭೋಜನ ಶೋಕಕ್ಕೆ ಪಾರವೇ ಇಲ್ಲ ಪ್ರಿಯಪುತ್ರನು ಇದ್ದಕ್ಕಿದ್ದಂತೆ ಮೂಕನಾಗಲು ಕಾರಣವೇನು ? ಅವನ "ಸಸೇಮಿರಾ", ಎಂಬ ವಚನಕ್ಕೆ ಅರ್ಥವೇನು ? ಅವನ ನಾಲಿಗೆಯಲ್ಲಿ ಅದನ್ನು ಕೆತ್ತಿದವರಾರು: ದೇವತೆಯೆ ? ಮನುಷ್ಯನೆ ? ಇತರ ಜಂತುಗಳೆ? ಅವರಿಗೆ ತಕ್ಕ ಶಿಕ್ಷೆಯನ್ನು ಹೇಗೆ ಮಾಡಬಹುದು ? ಅವನನ್ನು ಹೇಗೆ ಮೊದಲಿನಂತೆ ವಾಚಾಳುವನ್ನಾಗಿ ಮಾಡಬಹುದು ? ಮಹಾರಾಜನಿಗೆ ಏನೂ ತೋರದೆ ಹೋಯಿತು. ಆತನ ಪ್ರಭುಶಕ್ತಿಯು ಈ ವಿಷಯದಲ್ಲಿ ನಿಷ್ಪ್ರಯೋಜನ. ಆತನು ಚಿಂತಾಗ್ನಿಯಿಂದ ಬೆಂದು, ಘೋರವಾಗಿ ಪ್ರಲಾಪಿಸುತ್ತಿರಲು, ಆತನ ಮಂತ್ರಿಯು ಆತನನ್ನು ಬಹು ವಿಧವಾಗಿ ಸಮಾಧಾನಗೊಳಿಸಿ, ಭೋಜಪುತ್ರನಿಗೆ ವಾಕ್ಪಟುತ್ವವನ್ನುಂಟುಮಾಡುವವರಿಗೆ ಅಪರಿಮಿತವಾದ ಬಹುಮಾನವನ್ನೀಯುವದಾಗಿ ಡಂಗುರವನ್ನು ಹೊಯಿಸಿದನು. ದೇಶದೇಶದಿಂದಲೂ ವೈದ್ಯರೂ ಮಂತ್ರತಂತ್ರಯಂತ್ರಚಿಕಿತ್ಸೆಗಳಲ್ಲಿ ನಿಪುಣರಾದವರೂ ಧಾರಾನಗರಕ್ಕೆ ಬಂದು, ರಾಜಪುತ್ರನನ್ನು ನೋಡಿ ಆತನಿಗೆ ಬಂದವ್ಯಾಧಿಯನ್ನು ಗುಣಪಡಿಸಲಾರದೆ ಹಿಂದಿರುಗಿದರು ಭೋಜನ ದುಃಖವು ವಿಪರೀತವಾಯಿತು. ಕಡೆಗೆ ಮಂತ್ರಿಯು ಕಾಳಿದಾಸನೊಬ್ಬನೇ "ಸಸೇಮಿರಾ" ಮಂತ್ರದರ್ಥವನ್ನು ಬಲ್ಲನೆಂದು ತಿಳಿದು, ರಾಜನಬಳಿಗೆ ಹೋಗಿ "ಮಹಾಸ್ವಾಮಿ ! ಮಲೆಯಾಳದೇಶದಿಂದ ಒಬ್ಬಾನೊಬ್ಬ ಮಂತ್ರಗಿತ್ತಿಯು ಬಂದಿರುವಳು. ಆಕೆಯು ಪುರುಷರ ಮುಖವನ್ನು

ನೋಡುವುದಿಲ್ಲವಂತೆ. ಆಕೆಯು ಬಲು ಸಾಮರ್ಥ್ಯವಂತಳು. ಆಕೆಯಿಂದ ತಮ್ಮ ಪುತ್ರನಿಗೆ ಉಂಟಾಗಿರುವ ಅನಿಷ್ಟವು ನಿವಾರಣೆಯಾಗಬಲ್ಲುದೆಂದು ನನ್ನ ನಂಬಿಕೆ. ಅಪ್ಪಣೆಯಂತೆ ನಡೆಯುವೆನು'' ಎಂದು ಹೇಳಿದನು. ಭೋಜನು ಆಗ ಒಪುದೆಂದನು. ಕೂಡಲೆ ಅರಮನೆಯ ಒಂದು ಭಾಗದಲ್ಲಿ ಒಂದು ತೆರೆಯು ಕಟ್ಟಲ್ಪಟ್ಟಿತು ಕಾಳಿದಾಸನು ಗೂಢವಾಗಿ ಕರೆತರಲ್ಪಟ್ಟು ಆ ತೆರೆಯ ಹಿಂದುಗಡೆಯಲ್ಲಿ ಕೂಡಿಸಲ್ಪಟ್ಟನು. ಭೋಜನೂ, ಆತನ ಪುತ್ರನೂ, ಮಂತ್ರಿಯೂ, ಸಾಮಾಜಿಕರೂ ತೆರೆಯ ಮುಂದುಗಡೆ ಕೂತರು.

ಎಲ್ಲರೂ ಕುತೂಹಲ ಯುಕ್ತರಾಗಿದ್ದರು. "ಸಸೇಮಿರಾ" ಮಂತ್ರದ ರಹಸ್ಯಾರ್ಥವು ಹೇಗೆ ಬಯಲಿಗೆ ಬೀಳುವುದೋ ನೋಡಬೇಕೆಂದು ಸಭಿಕರೆಲ್ಲರೂ ಎವೆಯಿಕ್ಕದೆ ತೆರೆಯಕಡೆಯೇ ನೋಡುತ್ತಿದ್ದರು. ಒಳಗಿನ ಅಪರಿಚಿತವ್ಯಕ್ತಿಯು ಮಾತನಾಡಲಾರಂಭಿಸಿತು. "ಎಲೈ, ರಾಜಕುಮಾರನೆ! ನಿನಗೆ ಈ ಪೀಡೆಯು ಹೇಗೆಸಂಭವಿಸಿತು?,, ಎಂಬ ಆಕೆಯ ಪ್ರಶ್ನೆಗೆ ಪ್ರತಿಯಾಗಿ, ಭೋಜಪುತ್ರನು ಯಥಾಪ್ರಕಾರ "ಸಸೇಮಿರಾ,, ಎಂದೇಉತ್ತರ ಕೊಟ್ಟನು. ಗುಪ್ತಳಾದ ಮಾಂತ್ರಿಕಳು ಕ್ಷಣಮಾತ್ರ ಸುಮ್ಮನಿದ್ದು, "ಸಸೇಮಿರಾ,, ಮಂತ್ರದ ಪ್ರಥಮಾಕ್ಷರವಾದ 'ಸ,ಕಾರದಿಂದ ಪ್ರಾರಂಭವಾಗುವ

ಸದ್ಭಾವಂ ಪ್ರತಿಪನ್ನಾನಾಂ ವಂಚನೇ ಕಿಂ ವಿದಗ್ಧತಾ ।
ಅಂಗಮಾರುಹ್ಯ ಸುಪ್ತಾನಾಂ ಹನನೇ ಕಿನ್ನು ಪೌರುಷಂ॥

[ಸ್ನೇಹಭಾವದಿಂದಿರುವವರಿಗೆ ವಂಚನೆಮಾಡುವದರಲ್ಲಿ ಬುದ್ಧಿವಂತಿಕೆಯೇನು ? ತೊಡೆಯ ಮೇಲೆ ಮಲಗಿ ನಿದ್ರಿಸುತ್ತಿರುವವರನ್ನು ಕೊಲ್ಲುವುದರಲ್ಲಿ ಪೌರುಷವೇನು ? ] ಎಂಬ ಶ್ಲೋಕವನ್ನು ಹೇಳಿದಳು.

ಭೋಜಪುತ್ರನಿಗೆ ಸ್ವಲ್ಪಮಟ್ಟಿಗೆ ಜ್ಞಾನೋದಯವಾಯಿತು. ಅವನು ತನ್ನ ದುಷ್ಕೃತ್ಯಕ್ಕಾಗಿ ಪಶ್ಚಾತ್ತಾಪ ಪಡಲಾರಂಭಿಸಿದನು. ಈಗ "ಸ" ಕಾರವನ್ನು ಬಿಟ್ಟು "ಸೇಮಿರಾ" ಎಂದು ಮಾತ್ರ ಕೂಗುತ್ತಿದ್ದನು. ತೆರೆಯೊಳಗಿನ ಅಶರೀರವಾಣಿಯು "ಸೇ" ಎಂಬಕ್ಷರವನ್ನು ಮೊದಲುಮಾಡಿ,

ಸೇತುಂ ದೃಷ್ಟ್ವಾ ಸಮುದ್ರಸ್ಯ ಗಂಗಾಸಾಗರಸಂಗಮಂ ।

ಬ್ರಹ್ಮಹತ್ಯಾತ್ಪ್ರಮುಚ್ಯೇತ ಮಿತ್ರದ್ರೋಹೀ ನ ಮುಚ್ಯತೇ॥

[ರಾಮಸೇತುವಿಗೂ ಗಂಗಾಸಮುದ್ರಗಳ ಸಂಗಮಸ್ಥಳಕ್ಕೂ ಯಾತ್ರೆಹೋಗುವುದರಿಂದ ಬ್ರಹ್ಮಹತ್ಯೆಯ ದೋಷವನ್ನು ಕಳೆದುಕೊಳ್ಳಬಹುದು. ಮಿತ್ರದ್ರೋಹಿಯ ಪಾಪವುಮಾತ್ರ ಏನು ಮಾಡಿದರೂ ಹೋಗುವುದಿಲ್ಲ. ] ಎಂದು ನುಡಿದಳು.

ಈಗ "ಮಿರಾ" ಎಂಬುದುಮಾತ್ರವೇ ಭೋಜಪುತ್ರನ ನಾಲಿಗೆಯಲ್ಲಿ ನೆಲಸಿತ್ತು. ಆದುದರಿಂದ 'ಮಿ' ಎಂಬಕ್ಷರವು ಆದಿಯಲ್ಲುಳ್ಳ

ಮಿತ್ರದ್ರೋಹೀ ಕೃತಘ್ನಶ್ಚ ಯಸ್ತು ವಿಶ್ವಾಸಘಾತುಕಃ ।

ತ್ರಯಸ್ತೇ ನರಕಂ ಯಾಂತಿ ಯಾವಚ್ಚಂದ್ರ ದಿವಾಕರೌ ॥

[ಸ್ನೇಹಿತನಿಗೆ ವಂಚನೆ ಮಾಡಿದವನು, ಉಪಕಾರವಮರೆತವನು, ನಂಬಿದವರಿಗೆ ಮೋಸಮಾಡಿದವನು—ಈ ಮೂರುಮಂದಿಯೂ ಸೂರ್ಯ ಚಂದ್ರರಿರುವವರೆಗೂ ನರಕದಲ್ಲಿ ಬಿದ್ದಿರುವರು.]

ಎಂಬ ಶ್ಲೋಕವು ನುಡಿಯಲ್ಪಟ್ಟಿತು. ಈಗ "ರಾ" ಕಾರವು ಮಾತ್ರವೇ ರಾಜಪುತ್ರನನ್ನು ಬಾಧಿಸುತ್ತಿತ್ತು. ಸಭಿಕರೆಲ್ಲರೂ ಇದನ್ನು ನೋಡಿ ವಿಸ್ಮಿತರಾಗಿ ಮೂಗಿನಮೇಲೆ ಬೆರಳಿಟ್ಟುಕೊಂಡು, ಚಿತ್ರದಲ್ಲಿನ ಪ್ರತಿಮೆಗಳಂತೆ ಸ್ತಬ್ಧರಾಗಿ, ಬುದ್ಧಿ ವ್ಯಾಪಾರವೇ ಇಲ್ಲದವರಾಗಿದ್ದರು. ತೆರೆಯೊಳಗಿನಿಂದ ಉಳಿದಿದ್ದ "ರಾ" ಕಾರವೂ ಉಚ್ಚಾರಣೆಯಾಗಿ, ಈ ರೀತಿ ಕೇಳಬಂದಿತು.

ರಾಜಾ ಭೋಜ ತವ ಪುತ್ರಸ್ಯ ಯದಿ ಕಲ್ಯಾಣಮಿಚ್ಛಸಿ।
ದಾನಂ ದೇಹಿದ್ವಿಜಾತಿಭ್ಯೋ ವರ್ಣಾನಾಂ ಬ್ರಾಹ್ಮಣೋ ಗುರುಃ

[ಎಲೈ ಅರಸ ! ನಿನ್ನ ಮಗನಿಗೆ ಒಳ್ಳೆಯದಾಗಬೇಕೆಂದು ನಿನಗೆ ಅಪೇಕ್ಷೆಯಿದ್ದರೆ, ಬ್ರಾಹ್ಮಣರಿಗೆ ದಾನಗಳನ್ನು ಕೊಡು. ಎಲ್ಲಾ ವರ್ಣಗಳಿಗೂ ಬ್ರಾಹ್ಮಣನೇ ಗುರುವು.]

ಕೂಡಲೆ ಭೋಜಪುತ್ರನಿಗೆ ಬಾಯಿಬಂದಿತು. ಅವನು ತನ್ನ ತಂದೆಯೊಡನೆಯೂ ಮಂತ್ರಿಸಾಮಾಜಿಕರೊಡನೆಯೂ ಮಾತನಾಡತೊಡಗಿದನು. ಎಲ್ಲರೂ ಅವನ ವೃತ್ತಾಂತವನ್ನು ಅವನ ಮುಖದಿಂದಲೇ ಆಮೂಲಾಗ್ರವಾಗಿ ಕೇಳಿದರು. ಆಶ್ಚರ್ಯಯುಕ್ತನಾದ ದೊರೆಯು ಮಂತ್ರಿಯನ್ನು ಕರೆದು, "ಕಾಡಿನಲ್ಲಿ ನಡೆದ ಸಂಗತಿಯು ಈ ಮಾಂತ್ರಿಕಳಿಗೆ ಹೇಗೆ ತಿಳಿಯಿತು ?" ಎಂದು ಕೇಳಿದನು. ಒಳಗಿನ ವ್ಯಕ್ತಿಯು "ನಿನ್ನ ರಾಣಿಯು ಕಿಟಕಿಯ ಮೇಲಿದ್ದ ಮಚ್ಚೆಯು ತಿಳಿದಂತೆಯೇ,, ಎಂದುಸುರಿತು.


ಅಹೋ! ಭೋಜನ ಆನಂದಕ್ಕೆ ಮೇರೆಯಿಲ್ಲ' ತನ್ನ ಆಪ್ತಮಿತ್ರನಾದ, ಪ್ರಾಣಸಮನಾದ ಕಾಳಿದಾಸನಿಗಲ್ಲದೆ ಭೂತಭವಿಷ್ಯದ್ವರ್ತಮಾನಗಳ ಜ್ಞಾನವು ಮತ್ತಾರಿಗುಂಟು ? ಪುನಃ ಭೋಜಕಾಳಿದಾಸರು ಸೇರಿದರು. ಭೋಜನು ತನ್ನ ಅವಿವೇಕಕ್ಕಾಗಿ ಬಹುವಾಗಿ ಪಶ್ಚಾತ್ತಾಪಪಟ್ಟನು. ಆ ಮೇಲೆ ಇಬ್ಬರೂ ಬಹುಕಾಲ ಸುಖದಿಂದ ಬಾಳಿದರು.

ಸ್ವಾರ್ಥಪರರಾಗಿ ನರಸ್ತುತಿ ಮಾಡುವವರ ಕವಿತೆಯು ನಿಜಸ್ಥಿತಿಯನ್ನು ತೋರಿಸುವುದಲ್ಲ. ಅದು ಬರೇ ಉತ್ಪ್ರೇಕ್ಷೆ,— ಅಸಂಬದ್ಧಪ್ರಲಾಪ. ಆದರೆ ನಿರಾಶರಾದ, ನಿರ್ಮತ್ಸರರಾದ, ಲೋಕಹಿತಾಕಾಂಕ್ಷಿಗಳಾದ ವರಕವಿಗಳು ಹೇಳುವುದೆಲ್ಲವೂ ಸತ್ಯವಲ್ಲದೆ ಬೇರೆಯಲ್ಲ. ಅವರಿಗೆ ಮುಂದೆ ನಡೆಯುವುದನ್ನು ಕರ

ತಲಾಮಲಕದಂತೆ ತಿಳಿಯುವ ದಿವ್ಯದೃಷ್ಟಿಯುಂಟು. ಅಂತಹ ಕವಿಗಳು ಪ್ರಾಚೀನ ಭರತವರ್ಷದಲ್ಲಿ ಬಹುಮಂದಿಯಿದ್ದರು. ಅವರಲ್ಲಿ ಕಾಳಿದಾಸನು ಅತಿ ಮುಖ್ಯನಾದೊಬ್ಬನು. ಕಾಳಿದಾಸನು ಭೋಜನಿದಿರಿಗೆ ಕೈಕಟ್ಟಿಕೊಂಡು ನಿಂದಿರುತ್ತಿದ್ದನು. ಆದರೆ ಈಗ ಭೋಜನ ಹೆಸರು ಕಾಳಿದಾಸನಿಂದಲೇ ಪ್ರಸಿದ್ಧವಾಗಿದೆ. ಕಾಳಿದಾಸನ ಹೆಸರು ಆ ಚಂದ್ರಾರ್ಕವಾಗಿ ಜನರ ಜ್ಞಾಪಕದಲ್ಲಿರುವುದು. ಭೋಜನ ಕೋಟೆಕೊತ್ತಲುಗಳೂ, ಸಿಂಹಾಸನ ಕಿರೀಟಗಳೂ ಎಲ್ಲಿಹೋದವೋ ಯಾರಿಗೂ ಗೊತ್ತಿಲ್ಲ. ಆದರೂ ಅವನ ಹೆಸರು ಮಾತ್ರ ಅವನ ಸ್ತುತಿಪಾಠಕನಾದ ಕಾಳಿದಾಸನ ಹೆಸರನ್ನು ಎಡೆಬಿಡದೆ ಹಿಂಬಾಲಿಸುತ್ತಿರುವುದು



ಸಂಪೂರ್ಣ.



Printed by K. S. Krishna Iyer B. A.,
at the Irish Press, Bangalore City.